ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಆಗಸ್ಟ್ 27 ಮಂಗಳವಾರ 2024


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 132 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಪರಪ್ಪನ ಅಗ್ರಹಾರ ಜೈಲಲ್ಲಿ ನಟ ದರ್ಶನ್‌ಗೆ ಐಷಾರಾಮಿ ಸೌಕರ್ಯ ಫೋಟೋ ವೈರಲ್

ಒಂಭತ್ತು ಮಂದಿ ಜೈಲು ಅಧಿಕಾರಿಗಳು ಅಮಾನತು



ಆರೋಪಿಗಳ ಸ್ಥಳಾಂತರಕ್ಕೂ ಮುಖ್ಯಮಂತ್ರಿ ಸಿದ್ದರಾಮಯ್ಯ ಸೂಚನೆ

ಬೆಂಗಳೂರು,ಆ.26(ಕೆಎಂಶಿ)–ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪರಪ್ಪನ ಅಗ್ರಹಾರ ಜೈಲು ಸೇರಿರುವ ನಟ ದರ್ಶನ್‌ಗೆ ರಾಜಾತಿಥ್ಯ ನೀಡಿರುವ ಕಾರಾಗೃಹದ ಒಂಭತ್ತು ಅಧಿಕಾರಿಗಳನ್ನು ಅಮಾನತು ಮಾಡಲಾಗಿದೆ.

ಅಲ್ಲದೆ, ಈ ಎಲ್ಲ ಆರೋಪಿಗಳನ್ನು ವಿವಿಧ ಜೈಲುಗಳಿಗೆ ಸ್ಥಳಾಂತರಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಆದೇಶ ಮಾಡಿದ್ದಾರೆ. ರೌಡಿಶೀಟರ್‌ಗಳ ಜೊತೆ ಕುಳಿತು ನಟ ದರ್ಶನ್ ಐಷಾರಾಮಿ ಸೌಕರ್ಯಗಳೊಂದಿಗೆ ಸಂತಸದ ಕ್ಷಣಗಳನ್ನು ಕಳೆಯುತ್ತಿರುವ ದೃಶ್ಯಗಳು ಮಾಧ್ಯಮಗಳಲ್ಲಿ ವೈರಲ್ ಆಗಿರುವುದನ್ನು ಗಮನಿಸಿದ ಮುಖ್ಯಮಂತ್ರಿಗಳು, ಕೆಂಡಾಮಂಡಲರಾಗಿ ಹಿರಿಯ ಪೊಲೀಸ್ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಗೃಹ ಸಚಿವ ಡಾ.ಜಿ.ಪರಮೇಶ್ವರ್, ರಾಜ್ಯ ಪೊಲೀಸ್ ಮಹಾನಿರ್ದೇಶಕರು ಸೇರಿದಂತೆ ಹಿರಿಯ ಪೊಲೀಸ್ ಅಧಿಕಾರಿಗಳನ್ನು ಗೃಹ ಕಚೇರಿಗೆ ಕರೆಸಿಕೊಂಡ ಮುಖ್ಯಮಂತ್ರಿ ಅವರು, ಪರಪ್ಪನ ಅಗ್ರಹಾರದಲ್ಲಿನ ಅಕ್ರಮ ಚಟುವಟಿಕೆಗಳ ಬಗ್ಗೆ ಚರ್ಚೆ ನಡೆಸಿದ್ದಲ್ಲದೆ, ಈ ಎಲ್ಲ ಆದೇಶಗಳನ್ನು ಸ್ಥಳದಲ್ಲೇ ನೀಡಿದ್ದಾರೆ.

ಅಷ್ಟೇ ಅಲ್ಲದೆ, ಗೃಹ ಸಚಿವರು ಮತ್ತು ಪೊಲೀಸ್ ಮಹಾನಿರ್ದೇಶಕರಿಗೆ ತಕ್ಷಣವೇ ಪರಪ್ಪನ ಅಗ್ರಹಾರಕ್ಕೆ ತೆರಳಿ, ಅಲ್ಲಿನ ಸ್ಥಿತಿಗತಿಗಳನ್ನು ಅರಿತು ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವುದಲ್ಲದೆ,

ಅಮಾನತಾದವರು

ಜೈಲಿನ ಮುಖ್ಯ ಅಧೀಕ್ಷಕ ಶೇಷಮೂರ್ತಿ, ಅಧೀಕ್ಷಕ ಮಲ್ಲಿಕಾರ್ಜುನ, ಜೈಲರ್‌ಗಳಾದ ಶರಣ ಬಸಪ್ಪ ಅಮಿನ್‌ಗಡ ಮತ್ತು ಪ್ರಭು ಎಸ್.ಖಂಡೇಲ್‌ವಾಲ್, ಸಹಾಯಕ ಜೈಲರ್‌ಗಳಾದ ಎಲ್.ಎಸ್. ಕುಪ್ಪೇಸ್ವಾಮಿ, ಶ್ರೀಕಾಂತ್ ತಳವಾರ, ಹೆಡ್ ವಾರ್ಡರ್‌ಗಳಾದ ವೆಂಕಪ್ಪ, ಸಂಪತ್ ಕುಮಾರ್ ಮತ್ತು ವಾರ್ಡರ್ ಕೆ.ಬಸಪ್ಪ



ಮುಂದೆ ಇಂತಹ ಘಟನೆಗಳು ನಡೆಯದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಿ ಎಂದು ಆದೇಶಿಸಿದರು.

ನಂತರ ಗೃಹ ಸಚಿವರು ತಮ್ಮ ವಿಧಾನಸೌಧದ ಕಚೇರಿಯಲ್ಲಿ ಸಂಬಂಧಪಟ್ಟ ಅಧಿಕಾರಿಗಳನ್ನು ಕರೆಸಿ ಸಭೆ ನಡೆಸಿ, ಪರಪ್ಪನ ಅಗ್ರಹಾರಕ್ಕೆ ತೆರಳಿದರು.

ಭೇಟಿಯ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಡಾ. ಪರಮೇಶ್ವರ್, ಆಗಸ್ಟ್ 22ರ ಸಂಜೆ ನಡೆದ ಈ ಘಟನೆ ಸಾಮಾಜಿಕ ಮಾಧ್ಯಮಗಳಲ್ಲಿ ವೈರಲ್ ಆಗಿತ್ತು ಎಂದರು. ನಟ ದರ್ಶನ್ ಘಟನೆ ಬೆನ್ನಲ್ಲೇ ಕಾರಾಗೃಹಗಳ ಡಿಜಿ ಮಾಲಿನಿ ಕೃಷ್ಣಮೂರ್ತಿ ಹಾಗೂ ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಅಧಿಕಾರಿ ಮತ್ತು ಸಿಬ್ಬಂದಿಗಳಾದ ಶರಣ ಬಸವ ಅಮೀನ್‌ಗಢ,

■ 6ನೇ ಪುಟಕ್ಕೆ

ಪರಪ್ಪನ ಅಗ್ರಹಾರ ಜೈಲಿಗೆ ಡಾ.ಪರಮೇಶ್ವರ್ ಭೇಟಿ; ಅಧಿಕಾರಿಗಳಿಗೆ ಖಡಕ್ ಸೂಚನೆ

ಮೂರು ಎಫ್‌ಐಆರ್ ದಾಖಲು



ಬೆಂಗಳೂರು, ಆ.26– ರೇಣುಕಾಸ್ವಾಮಿ ಹತ್ಯೆ ಪ್ರಕರಣದಲ್ಲಿ ಜೈಲು ಪಾಲಾಗಿರುವ ನಟ ದರ್ಶನ್‌ಗೆ ಜೈಲಿನಲ್ಲಿ ರಾಜಾತಿಥ್ಯ ನೀಡಿರುವ ಆರೋಪದ ಹಿನ್ನೆಲೆಯಲ್ಲಿ ಗೃಹ ಸಚಿವ ಡಾ.ಜಿ. ಪರಮೇಶ್ವರ್ ಅವರು ಪರಪ್ಪನ ಅಗ್ರಹಾರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಪರಪ್ಪನ ಅಗ್ರಹಾರದಲ್ಲಿ ಇರುವ ದರ್ಶನ್ ಸಿಗರೇಟು ಸೇದುವ ಹಾಗೂ ಟೀ ಕಪ್ ಹಿಡಿದುಕೊಂಡಿರುವ ಫೋಟೋ ವೈರಲ್ ಆಗಿತ್ತು. ಅಲ್ಲದೆ, ರೌಡಿ ಒಬ್ಬನ ಜೊತೆ ವಿಡಿಯೋ ಕಾಲ್‌ನಲ್ಲಿ ಮಾತನಾಡಿದ ವಿಡಿಯೋ ಕೂಡಾ ವೈರಲ್ ಆಗಿತ್ತು.

ಇದನ್ನು ದರ್ಶನ್ ಅಭಿಮಾನಿಗಳು ಸಾಮಾಜಿಕ ಜಾಲತಾಣಗಳಲ್ಲಿ ಶೇರ್ ಮಾಡುತ್ತಿದ್ದಾರೆ. ಅಲ್ಲದೆ ದರ್ಶನ್ ನಡೆಗೆ ಮೆಚ್ಚುಗೆಯ ಮಾತನ್ನಾಡುತ್ತಿದ್ದಾರೆ. ಇದರ ವಿರುದ್ಧವೂ ಜನರು ಆಕ್ರೋಶ ವ್ಯಕ್ತಪಡಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಗೃಹ ಸಚಿವ ಡಾ.ಜಿ.ಪರಮೇಶ್ವರ್ ಈ ಪ್ರಕರಣವನ್ನು ಗಂಭೀರವಾಗಿ ಪರಿಗಣಿಸಿದ್ದು, ಪರಪ್ಪನ ಅಗ್ರಹಾರಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು. ಘಟನೆಗೆ ಕಾರಣರಾದ ಅಧಿಕಾರಿ ಮತ್ತು ಸಿಬ್ಬಂದಿಯನ್ನು ಈಗಾಗಲೇ ಅಮಾನತು ಮಾಡಲಾಗಿದೆ. ಇನ್ನು ಘಟನೆಯ ಬಗ್ಗೆ ಪೂರ್ಣ ವಿವರ

■ 6ನೇ ಪುಟಕ್ಕೆ

ಇಂದೇ ಕೆಪಿಎಸ್‌ಸಿ ಪರೀಕ್ಷೆ



ಬೆಂಗಳೂರು: ಕೆಪಿಎಸ್‌ಸಿ ಗೆಜೆಟೆಡ್ ಪ್ರೊಬೇಷನರ್ಸ್ ಪರೀಕ್ಷೆ ಮುಂದೂಡಬೇಕೆಂಬ ಬೇಡಿಕೆಯನ್ನು ರಾಜ್ಯ ಸರ್ಕಾರ ತಿರಸ್ಕರಿಸಿದ್ದು, ಮಂಗಳವಾರವೇ ಪರೀಕ್ಷೆ ನಡೆಸುವುದಾಗಿ ಹೇಳಿದೆ.

ಈ ಕುರಿತು ಸುದೀರ್ಘ ಪತ್ರಿಕಾ ಹೇಳಿಕೆ ನೀಡಿರುವ ಮುಖ್ಯಮಂತ್ರಿಗಳ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಎಲ್.ಕೆ.ಅತೀಕ್, ಕೆಪಿಎಸ್‌ಸಿ ಮೂಲಕ ಆಗಸ್ಟ್ 27ರಂದು ನಿಗದಿಪಡಿಸಿರುವ ಗೆಜೆಟೆಡ್ ಪ್ರೊಬೇಷನರ್ಸ್ ಪರೀಕ್ಷೆಯನ್ನು ಮುಂದೂಡಲು ಆಗ್ರಹಿಸಿ ಕೆಎಎಸ್ ಆಕಾಂಕ್ಷಿಗಳ ಸಣ್ಣ ಗುಂಪೊಂದು ಲಾಬಿ ನಡೆಸುತ್ತಿದೆ. ಈಗಾಗಲೇ ಸಾಕಷ್ಟು ಕಾಲಾವಕಾಶ ನೀಡಿದ್ದು, ನಿಗದಿತ ದಿನದಂದೇ ಪರೀಕ್ಷೆ ನಡೆಸಲು ಆಯೋಗ ನಿರ್ಧಾರ ತೆಗೆದುಕೊಂಡಿದೆ ಎಂದು ಸ್ಪಷ್ಟಪಡಿಸಿದ್ದಾರೆ. ಕೆಎಎಸ್ ಆಕಾಂಕ್ಷಿಗಳ ಸಣ್ಣ ಗುಂಪೊಂದು ಕೆಪಿಎಸ್‌ಸಿ, ಡಿಪಿಎಆರ್ ಮತ್ತು ಸಿಎಂಒನ ಎಲ್ಲಾ ಪ್ರಮುಖ ಅಧಿಕಾರಿಗಳಿಗೆ ಕರೆ ಮಾಡುತ್ತಿದ್ದಾರೆ. ವಾಟ್ಸಾಪ್ ಸಂದೇಶಗಳ ಸುರಿಮಳೆ ಸುರಿಸುತ್ತಿದ್ದಾರೆ. ಎಷ್ಟರ ಮಟ್ಟಿಗೆ ಎಂದರೆ ಕೆಲವೊಮ್ಮೆ ನನ್ನ ಫೋನ್ ಅನ್ನು ನಾನು ಏರೋಪ್ಲೇನ್ ಮೋಡ್‌ನಲ್ಲಿ ಇಡಬೇಕಾದ ಪರಿಸ್ಥಿತಿ ಬಂದೊದಗಿದೆ. ಕೆಪಿಎಸ್‌ಸಿ ಸುತ್ತ ಅನುಮಾನಗಳ ಹುತ್ತ ಎಂಬಂತಹ ಪದಗಳನ್ನು ಬಳಸಿ ಸಾಕಷ್ಟು ತಪ್ಪು ಮಾಹಿತಿ ಹರಡಿ ಹಗರಣ ನಡೆದಿದೆ ಎಂಬಂತೆ ಬಿಂಬಿಸಲು ಯತ್ನಿಸುತ್ತಿದ್ದಾರೆ. ಕೆಪಿಎಸ್‌ಸಿ ಅಥವಾ ಸರ್ಕಾರವು ನೀಡಿರುವ ಹೆಚ್ಚುವರಿ ಅವಕಾಶ ಮತ್ತು ವಯೋಮಿತಿ ಸಡಿಲಿಕೆಯನ್ನು ಪಡೆದ ಸುಮಾರು 1500 ವಿದ್ಯಾರ್ಥಿಗಳ (ವಯೋಮಿತಿ ಸಡಿಲಿಕೆ ನೀಡಿದ ನಂತರ ತಡವಾಗಿ ಅರ್ಜಿ ಸಲ್ಲಿಸಿದವರ ಸಂಖ್ಯೆ) ಈ ಲಾಬಿಗೆ ಮಣಿದರೆ ಸುಮಾರು 2.5 ಲಕ್ಷಕ್ಕೂ ಹೆಚ್ಚು ಅರ್ಜಿದಾರರು ಸಂಕಷ್ಟಕ್ಕೆ ಸಿಲುಕುತ್ತಾರೆ ಅವರು ಅನ್ಯಾಯವನ್ನು ಎದುರಿಸಬೇಕಾಗುತ್ತದೆ.

25 ಡಿವೈಎಸ್ಪಿ, 88 ಪೊಲೀಸ್ ಇನ್‌ಸ್ಪೆಕ್ಟರ್ ವರ್ಗಾವಣೆ

ಬೆಂಗಳೂರು: ರಾಜ್ಯ ಸರ್ಕಾರ 25 ಡಿವೈಎಸ್ಪಿ ಹಾಗೂ 88 ಪೊಲೀಸ್ ಇನ್‌ಸ್ಪೆಕ್ಟರ್‌ಗಳನ್ನು ವರ್ಗಾವಣೆ ಮಾಡಿ ಆದೇಶ ಹೊರಡಿಸಿದೆ. ಸ್ಥಳ ನಿರೀಕ್ಷೆಯಲ್ಲಿರುವ ಜಿ.ಆರ್. ಶಿವಮೂರ್ತಿಯವರನ್ನು ಮಂಡ್ಯ ಜಿಲ್ಲಾ ಸೆನ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ. ಸ್ಥಳ ನಿರೀಕ್ಷೆಯಲ್ಲಿರುವ ಪೊಲೀಸ್ ಇನ್‌ಸ್ಪೆಕ್ಟರ್ ಡಿ.ಬಿ. ಜಯಪ್ರಕಾಶ್ ಅವರನ್ನು ದಕ್ಷಿಣ ವಲಯ ಐಜಿಪಿ ಕಚೇರಿಗೆ, ಪಿಟಿಎಸ್ ಖಾನಾಪುರ ವರ್ಗಾವಣೆ ಆದೇಶದಲ್ಲಿರುವ ಜಿ.ಜಿ. ಯಶವಂತಕುಮಾರ್ ಅವರನ್ನು ಮಂಡ್ಯ ಜಿಲ್ಲೆ ಡಿಎಸ್‌ಬಿಗೆ, ಸ್ಥಳ ನಿರೀಕ್ಷೆಯಲ್ಲಿರುವ ಸಿ.ವಿ. ರವಿ ಅವರನ್ನು ಚನ್ನರಾಯಪಟ್ಟಣ ಗ್ರಾಮಾಂತರ ಠಾಣೆಗೆ, ಮೈಸೂರು ಡಿಸಿಆರ್‌ಇ ಇನ್‌ಸ್ಪೆಕ್ಟರ್ ಎಸ್. ಶಶಿಕಲಾ ಅವರನ್ನು ಚಾಮರಾಜನಗರ ಚೆಸ್ಕಾಂ ಜಾಗೃತ ದಳಕ್ಕೆ, ಚಿಕ್ಕಮಗಳೂರು ಜಿಲ್ಲೆ ಸೆನ್ ಠಾಣೆಯ ಇನ್‌ಸ್ಪೆಕ್ಟರ್ ಆರ್.ಪಿ. ಗವಿರಾಜು ಅವರನ್ನು ಅರಸೀಕೆರೆ ಟೌನ್ ಠಾಣೆಗೆ ವರ್ಗಾವಣೆ ಮಾಡಲಾಗಿದೆ.


ಆಧಾರ್ ಜೋಡಣೆ

ಇನ್ನಿಲ್ಲ ನಕಲಿ ದಾಖಲೆ ಸೃಷ್ಟಿಸಿ ಆಸ್ತಿ ವಂಚನೆ

- ಜಮೀನಿನ ಹಕ್ಕನ್ನು ರಕ್ಷಿಸಿ, ಅಧಿಕೃತಗೊಳಿಸಲು ಆಧಾರ್ ಜೋಡಣೆ
- ಯಾರದ್ದೋ ಜಮೀನನ್ನು ಇನ್ಯಾರೋ ಇನ್ಮುಂದೆ ಮಾರಲಾಗದು
- ಜನಸ್ನೇಹಿ ಪರಿಣಾಮಕಾರಿ ಆಡಳಿತಕ್ಕಾಗಿ ತಂತ್ರಜ್ಞಾನ ಬಳಕೆ



ಕಂದಾಯ ಸಚಿವ ಕೃಷ್ಣಬೈರೇಗೌಡ



ಬೆಂಗಳೂರು ಆ. 26–ಯಾರದ್ದೋ ಆಸ್ತಿಗೆ ನಕಲಿ ದಾಖಲೆ ಸೃಷ್ಟಿಸಿ ಅಮಾಯಕರನ್ನು ವಂಚಿಸುವ ಪ್ರಕರಣಗಳನ್ನು ತಡೆಯುವ ಉದ್ದೇಶದಿಂದ ಆರ್‌ಟಿಸಿಗೆ ಆಧಾರ್ ಜೋಡಿಸುವ ಅಭಿಯಾನಕ್ಕೆ ಇಂದಿನಿಂದ ಅಧಿಕೃತ ಚಾಲನೆ ನೀಡಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ತಿಳಿಸಿದರು.

ವಿಕಾಸಸೌಧದಲ್ಲಿ ಸೋಮವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಅಮಾಯಕರ ಜಮೀನುಗಳನ್ನು ವ್ಯವಸ್ಥಿತವಾಗಿ ದೋಚುವ ಕೆಲಸವಾಗುತ್ತಿದೆ. ಕೆಲವು ಪ್ರಕರಣಗಳಲ್ಲಿ ಸತ್ತವರ ಜಮೀನುಗಳನ್ನೂ ನಕಲಿ ದಾಖಲೆ ಸೃಷ್ಟಿಸಿ ಮಾರಾಟ ಮಾಡಿರುವ ಕುರಿತು ರಾಜ್ಯದ ಮೂಲೆ ಮೂಲೆಯಿಂದ ದೂರುಗಳು ಕೇಳಿ ಬರುತ್ತಿವೆ. ಇದರಿಂದ ವಂಚನೆಗೊಳಗಾದವರು ಹಲವು ವರ್ಷಗಳಿಂದ ಕೋರ್ಟ್ ಕಚೇರಿಗೆ ಅಲೆಯುವಂತಾಗಿದೆ. ಇಂತಹ ಪ್ರಕರಣಗಳನ್ನು ತಡೆಯುವ ಹಾಗೂ ಜನಸಾಮಾನ್ಯರ ಪಾಲಿಗೆ ಅವರ ಜಮೀನಿನ ಹಕ್ಕನ್ನು ರಕ್ಷಿಸಿ ಅಧಿಕೃತಗೊಳಿಸುವ ಉದ್ದೇಶದಿಂದ ಆಧಾರ್ ಜೋಡಣೆ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ ಎಂದರು. ನಕಲಿ ದಾಖಲೆ ಸೃಷ್ಟಿಸಿ ಜಮೀನನ್ನು ದೋಚುವವರ ಕೃತ್ಯಕ್ಕೆ ಕಡಿವಾಣ

■ 9ನೇ ಪುಟಕ್ಕೆ

> ಕಂದಾಯ ಇಲಾಖೆಯಲ್ಲಿ ಜನಸ್ನೇಹಿ ಆಡಳಿತ ನೀಡುವ ನಿಟ್ಟಿನಲ್ಲಿ ತಂತ್ರಜ್ಞಾನವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗುತ್ತಿದೆ. ಈ ಹಿಂದೆ ಆಸ್ತಿ ನೋಂದಣಿ ಅವಧಿಯನ್ನು ಕಡಿತಗೊಳಿಸಿ ಜನರ ಕೆಲಸಗಳಿಗೆ ವೇಗ ನೀಡುವ ನಿಟ್ಟಿನಲ್ಲಿ ಕಾವೇರಿ–2 ತಂತ್ರಜ್ಞಾನವನ್ನು ಜಾರಿಗೆ ತರಲಾಗಿತ್ತು. ಇದೀಗ ಮತ್ತೊಮ್ಮೆ ಜನರಿಗೆ ಅನುಕೂಲವಾಗಲಿ ಎಂಬ ಉದ್ದೇಶದಿಂದ ಆರ್‌ಟಿಸಿಗೆ 'ಆಧಾರ್ ಜೋಡಣೆ' ಹಾಗೂ 'ಎನಿವೇರ್ ನೋಂದಣಿ' ವ್ಯವಸ್ಥೆಗೆ ಚಾಲನೆ ನೀಡಲಾಗುತ್ತಿದೆ. –ಕೃಷ್ಣಬೈರೇಗೌಡ, ಕಂದಾಯ ಸಚಿವ

ಸೆ.2ರಿಂದ 'ಎನಿವೇರ್ ನೋಂದಣಿ' ಜಾರಿ

ಸೆಪ್ಟೆಂಬರ್ 2 ರಿಂದ ರಾಜ್ಯಾದ್ಯಂತ 'ಎನಿವೇರ್ ನೋಂದಣಿ' ವ್ಯವಸ್ಥೆಯನ್ನು ವಿಸ್ತರಿಸಲಾಗುವುದು ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ಇದೇ ವೇಳೆ ತಿಳಿಸಿದರು.

ಈ ಬಗ್ಗೆಯೂ ಮಾಹಿತಿ ನೀಡಿದ ಅವರು, ರಾಜ್ಯದಲ್ಲಿ 252 ಉಪ ನೋಂದಣಾಧಿಕಾರಿ (ಸಬ್ ರಿಜಿಸ್ಟ್ರಾರ್) ಕಚೇರಿ ಇದೆ. ಆದರೆ, ಈ ಪೈಕಿ 50 ಕಚೇರಿಗಳಲ್ಲಿ ಮಾತ್ರ ಸಿಬ್ಬಂದಿಗಳಿಗೆ ಹೆಚ್ಚು ಕೆಲಸದ ಒತ್ತಡ ಇದೆ. ಹೀಗಾಗಿ ಆ ಕಚೇರಿಗಳಿಗೆ ಬರುವ ಜನರಿಗೆ ಅನಾನುಕೂಲವಾಗುತ್ತಿದೆ. ಸಮಯಕ್ಕೆ ಸರಿಯಾಗಿ ಕೆಲಸ ಆಗಲ್ಲ, ಕಾಯಬೇಕು, ಮಧ್ಯವರ್ತಿಗಳ ಕಾಟ ಇದೆ ಎಂಬ ದೂರುಗಳಿವೆ. ಇದೇ ಕಾರಣಕ್ಕೆ 'ಎನಿವೇರ್ ನೋಂದಣಿ' ವ್ಯವಸ್ಥೆಗೆ ಚಾಲನೆ ನೀಡಲಾಯಿತು ಎಂದರು. ಮುಂದುವರೆದು, ಆಸ್ತಿ ನೋಂದಣಿಗೆ ಮುಂದಾಗುವ ವ್ಯಕ್ತಿ ತನ್ನ ಜಿಲ್ಲೆ ವ್ಯಾಪ್ತಿಯ, ತನಗೆ ಅನುಕೂಲವಾಗುವ ಹಾಗೂ ಜನಸಂದಣಿ ಇಲ್ಲದ ಯಾವುದೇ ಉಪ ನೋಂದಣಿ ಕಚೇರಿಗೆ ತೆರಳಿ ಆನ್‌ಲೈನ್ ಮೂಲಕ ಸಮಯ ಕಾಯ್ದಿರಿಸಿ ತನ್ನ ಆಸ್ತಿ ನೋಂದಣಿ ಮಾಡಿಕೊಳ್ಳಲು 'ಎನಿವೇರ್' ಅಡಿಯಲ್ಲಿ ಅವಕಾಶ ಕಲ್ಪಿಸಲಾಗಿದೆ. ಅಲ್ಲದೆ,

■ 9ನೇ ಪುಟಕ್ಕೆ

ಎಸ್‌ಎಸ್‌ಎಲ್‌ಸಿ ಪರೀಕ್ಷೆ–3: 25,347 ವಿದ್ಯಾರ್ಥಿಗಳು ತೇರ್ಗಡೆ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಪರೀಕ್ಷೆ–3 ಫಲಿತಾಂಶ ಸೋಮವಾರ ಪ್ರಕಟವಾಗಿದ್ದು, 25,347 ವಿದ್ಯಾರ್ಥಿಗಳು (ಶೇ25.88) ಉತ್ತೀರ್ಣರಾಗಿದ್ದಾರೆ.

ಆ.2ರಿಂದ 9ರವರೆಗೆ 410 ಕೇಂದ್ರಗಳಲ್ಲಿ ನಡೆದಿದ್ದ ಪರೀಕ್ಷೆಯನ್ನು 97,952 ವಿದ್ಯಾರ್ಥಿಗಳು ಬರೆದಿದ್ದರು. ಈ ಬಾರಿಯೂ ಬಾಲಕಿಯರೇ ಮೇಲುಗೈ ಸಾಧಿಸಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 30,223 ಬಾಲಕಿಯರಲ್ಲಿ 8,583

■ 9ನೇ ಪುಟಕ್ಕೆ

ಮೈಸೂರಲ್ಲಿ ಮನೆ, ಸರ ಕಳವು

ನಾಲ್ವರು ಖದೀಮರ ಬಂಧನ

- 551 ಗ್ರಾಂ ಚಿನ್ನ, 1.4 ಕೆಜಿ ಬೆಳ್ಳಿ ಆಭರಣ, 3 ಕಾರು, 3 ದ್ವಿಚಕ್ರ ವಾಹನ, 2 ಮೊಬೈಲ್, 4.66 ಗ್ರಾಂ ಗಾಂಜಾ, 2 ಪಿಸ್ತೂಲ್, ಜೀವಂತ ಗುಂಡು ಸೇರಿ 45 ಲಕ್ಷ ರೂ. ಮೌಲ್ಯದ ಪದಾರ್ಥ ಜಪ್ತಿ; ಒಟ್ಟು 85 ಪ್ರಕರಣ ಬಯಲು
- ಸಿಸಿಬಿ ಎಸಿಪಿ ಸಂದೇಶ್‌ಕುಮಾರ್ ನೇತೃತ್ವದಲ್ಲಿ ಯಶಸ್ವಿ ಕಾರ್ಯಾಚರಣೆ

ಮೈಸೂರು, ಆ. 26(ಆರ್‌ಕೆ)– ಸರ ಅಪಹರಣ, ಮನೆ ದರೋಡೆ, ಕಾರು–ಬೈಕ್ ಕಳ್ಳತನಗಳಂತಹ 85 ಪ್ರಕರಣಗಳಲ್ಲಿ ಭಾಗಿಯಾಗಿದ್ದ ನಾಲ್ವರನ್ನು ಬಂಧಿಸಿರುವ ಮೈಸೂರಿನ ಸಿಸಿಬಿ ಪೊಲೀಸರು, 45 ಲಕ್ಷ ರೂ. ಬೆಲೆ ಬಾಳುವ ಚಿನ್ನ, ಬೆಳ್ಳಿ ಆಭರಣ ಸೇರಿದಂತೆ ಇತರ ಸ್ವತ್ತುಗಳನ್ನು ವಶಪಡಿಸಿಕೊಂಡಿದ್ದಾರೆ.

ಈ ಕುರಿತು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ಇಂದು ತಮ್ಮ ಕಚೇರಿ ಸಭಾಂಗಣದಲ್ಲಿ ಮಾಹಿತಿ ನೀಡಿದರು. 2024ರ ಜೂನ್ 6ರಂದು ಮೈಸೂರಿನ ಮೇಟಗಳ್ಳಿ ಠಾಣಾ ವ್ಯಾಪ್ತಿಯ ಶ್ಯಾದನಹಳ್ಳಿ ಗ್ರಾಮದ ಮನೆಯೊಂದರಲ್ಲಿ ಬೀಗ ಮುರಿದು 11,40,000 ರೂ. ಮೌಲ್ಯದ ಚಿನ್ನಾಭರಣ ಕಳವು ಮಾಡಲಾಗಿತ್ತು. ಪ್ರಕರಣದ ತನಿಖೆಗಾಗಿ ರಚಿಸಿದ್ದ ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್‌ಕುಮಾರ್ ನೇತೃತ್ವದ ವಿಶೇಷ ತಂಡದ ಅಧಿಕಾರಿಗಳು, ಜುಲೈ 16ರಂದು ಮೈಸೂರಿನ ಎನ್.ಆರ್. ಮೊಹಲ್ಲಾದ ಶಿವಾಜಿ ರಸ್ತೆಯಲ್ಲಿ ಆರೋಪಿಯೊಬ್ಬನ ಬಂಧಿಸಿದ್ದರು.

ಆತನನ್ನು ವಿಚಾರಣೆಗೊಳಪಡಿಸಿದಾಗ ಇತರ ಮೂವರೊಂದಿಗೆ ಸೇರಿಕೊಂಡು ಮೈಸೂರು ನಗರ ಹಾಗೂ ಇತರೆಡೆ ಚಿನ್ನದ ಸರ, ಮನೆಗಳಲ್ಲಿ ಕಳವು ಪ್ರಕರಣಗಳಲ್ಲಿ ಭಾಗಿಯಾಗಿರುವ ಬಗ್ಗೆ ಬಾಯಿ ಬಿಡುತ್ತಿದ್ದಂತೆಯೇ ಆಗಸ್ಟ್ 21ರಂದು ತಲೆಮರೆಸಿಕೊಂಡಿದ್ದ ಉಳಿದ ಮೂವರು ಆರೋಪಿಗಳನ್ನು ಕೆಆರ್‌ಎಸ್ ರಸ್ತೆಯ ಕೆಐಎಡಿಬಿ ಕಚೇರಿ

■ 9ನೇ ಪುಟಕ್ಕೆ



ಆರೋಪಿಗಳಿಂದ ವಶಪಡಿಸಿಕೊಂಡ ಆಭರಣ, ಮಾಲುಗಳನ್ನು ಮೈಸೂರು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್, ಡಿಸಿಪಿಗಳಾದ ಎಂ. ಮುತ್ತುರಾಜು, ಎಸ್. ಜಾಹ್ನವಿ, ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್‌ಕುಮಾರ್ ವೀಕ್ಷಿಸಿದರು.

ಅಪಘಾತದ ನೆಪದಲ್ಲಿ ಸುಲಿಗೆ

ಮೈಸೂರು ವ್ಯಕ್ತಿ ಬೆಂಗಳೂರಲ್ಲಿ ಸೆರೆ

- ಜಾಮೀನಿನ ಮೇಲೆ ಹೊರಬರುತ್ತಿದ್ದಂತೆಯೇ ಹಳೇ ಚಾಳಿಗಿಳಿಯುತ್ತಿದ್ದ
- ಮೈಸೂರು, ಬೆಂಗಳೂರಲ್ಲಿ ತಲಾ 3; ಮಂಡ್ಯದಲ್ಲಿ 2 ಸೇರಿ 8 ಪ್ರಕರಣ ದಾಖಲು

ಮೈಸೂರು, ಆ. 26(ಆರ್‌ಕೆ)– ಅಪಘಾತದ ನೆಪದಲ್ಲಿ ಧಮ್ಕಿ ಹಾಕಿ ವಾಹನ ಚಾಲನೆ ಮಾಡುತ್ತಿದ್ದವರ ಸುಲಿಗೆ ಮಾಡುತ್ತಿದ್ದ ಮೈಸೂರಿನ ಕುಖ್ಯಾತ ಆರೋಪಿಯನ್ನು ಬೆಂಗಳೂರಿನ ಜಯನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ. ಮೈಸೂರಿನ ರಾಜೇಂದ್ರ ನಗರ ಕೆಸರೆ 6ನೇ ಕ್ರಾಸ್ ನಿವಾಸಿ ಜಮೀಲ್ ಖಾನ್(29) ಆರೋಪಿ. ಬೆಂಗಳೂರಿನ ಜಯನಗರ ಠಾಣಾ ವ್ಯಾಪ್ತಿಯಲ್ಲಿ ಕಾರು ತಡೆದು, ತನ್ನ ಬೈಕ್‌ಗೆ ಡಿಕ್ಕಿ ಹೊಡೆದು ಬೀಳಿಸಿ ನಿಲ್ಲಿಸದೇ ಬಂದಿದ್ದೀರಿ ಎಂದು ಅದರ ಚಾಲಕನಿಗೆ ಧಮ್ಕಿ ಹಾಕಿ ಹಣ ವಸೂಲಿ ಮಾಡಿದ್ದು ಸಿಸಿ ಕ್ಯಾಮರಾ ಫುಟೇಜ್‌ನಿಂದ ಖಾತರಿಯಾದ ಹಿನ್ನೆಲೆಯಲ್ಲಿ ಪೊಲೀಸರು ಜಮೀಲ್ ಖಾನ್‌ನನ್ನು ಬಂಧಿಸಿದ್ದಾರೆ.

ಅದೇ ಮಾದರಿಯಲ್ಲಿ ಮೈಸೂರಿನ ಹಿರಿಯ ನಾಗರಿಕರೊಬ್ಬರಿಂದ ಹಣ ವಸೂಲಿ ಮಾಡಿದ್ದ ಪ್ರಕರಣದಲ್ಲಿ 2023ರ ಸೆಪ್ಟೆಂಬರ್ 12ರಂದು ಕುವೆಂಪು ನಗರ ಠಾಣೆ ಇನ್‌ಸ್ಪೆಕ್ಟರ್ ಅರುಣ್, ಜಮೀಲ್ ಖಾನ್‌ನನ್ನು ಬಂಧಿಸಿದ್ದರು.



ಆರೋಪಿ ಜಮೀಲ್ ಖಾನ್

ಮೈಸೂರು ತಾಲೂಕು ಇಲವಾಲ ಠಾಣೆಯಲ್ಲಿ 1, ಕುವೆಂಪುನಗರದಲ್ಲಿ 2, ಕೆಆರ್‌ಎಸ್ ಮತ್ತು ಶ್ರೀರಂಗಪಟ್ಟಣದಲ್ಲಿ ತಲಾ 1, ಬೆಂಗಳೂರಿನ ಜಯನಗರ, ಚಾಮರಾಜಪೇಟೆ ಮತ್ತು ಬಸವನಗುಡಿ ಪೊಲೀಸ್ ಠಾಣೆಗಳಲ್ಲಿ ಈತನ ವಿರುದ್ಧ ಸುಲಿಗೆ ಪ್ರಕರಣಗಳು ದಾಖಲಾಗಿವೆ.

ಜೂನ್ 14ರಂದು ಬೆಂಗಳೂರಿನ ಜಯನಗರ ಕೂಲ್ ಪಾಯಿಂಟ್ ಬಳಿ ಪ್ರಸಾದ್ ಕುಡುವ ಎಂಬುವರ ಕಾರನ್ನು ತಡೆದು, ಜಯನಗರ 4ನೇ ಬ್ಲಾಕ್‌ನಲ್ಲಿ ಸ್ಕೂಟರ್‌ಗೆ ಡಿಕ್ಕಿ ಹೊಡೆದು ಬಂದಿದ್ದೀರಿ. ಹಾನಿಗೆ 30,000 ರೂ. ಆನ್‌ಲೈನ್ ಮೂಲಕ ಕಳುಹಿಸುವಂತೆ ಒತ್ತಾಯಿಸಿದ್ದಾನೆ.

ಈ ಸಂಬಂಧ ಕುಡುವ ನೀಡಿದ ದೂರಿನಂತೆ ಪ್ರಕರಣ ದಾಖಲಿಸಿಕೊಂಡಿದ್ದ ಪೊಲೀಸರು, ಸಿಸಿ ಕ್ಯಾಮರಾ ಫುಟೇಜ್ ಮತ್ತು ಬ್ಯಾಂಕ್ ಡೀಟೇಲ್ ಪಡೆದು ತನಿಖೆ ನಡೆಸಿದಾಗ ಆರೋಪಿ ನಿನ್ನೆ ಸಿಕ್ಕಿಬಿದ್ದಿದ್ದಾನೆ. ಲಾಡ್ಜ್‌ಗಳಲ್ಲಿ ಉಳಿದುಕೊಂಡು ಬಾರ್‌ಗಳಲ್ಲಿ ಬೆಳಗ್ಗೆಯಿಂದ

■ 9ನೇ ಪುಟಕ್ಕೆ

ಮೈಸೂರು ಮಿತ್ರ ಮಂಗಳವಾರ 27 ಆಗಸ್ಟ್ 2024

ಮಲಬಾರ್ ಗೋಲ್ಡ್ & ಡೈಮಂಡ್ಸ್‌ಗೆ ರೆಸ್ಪಾನ್ಸಿಬಲ್ ಜ್ಯುವೆಲ್ಲರಿ ಹೌಸ್ ಅವಾರ್ಡ್



ಮಲಬಾರ್ ಗೋಲ್ಡ್ & ಡೈಮಂಡ್ಸ್‌ಗೆ 2023–24ನೇ ಸಾಲಿನ ಪ್ರತಿಷ್ಠಿತ ಇಂಡಿಯಾ ಗೋಲ್ಡ್ ಕಾನ್ಫರೆನ್ಸ್‌ನಲ್ಲಿ ರೆಸ್ಪಾನ್ಸಿಬಲ್ ಜ್ಯುವೆಲ್ಲರಿ ಹೌಸ್ ಅವಾರ್ಡ್ ಲಭಿಸಿದೆ.

ಮೈಸೂರು, ಆ. 26– ಜಗತ್ತಿನ ಅತೀ ದೊಡ್ಡ ಆಭರಣ ಸಮೂಹಗಳಲ್ಲಿ ಒಂದಾಗಿರುವ ಮಲಬಾರ್ ಗೋಲ್ಡ್ & ಡೈಮಂಡ್ಸ್‌ಗೆ 2023–24ನೇ ಸಾಲಿನ ಪ್ರತಿಷ್ಠಿತ ಇಂಡಿಯಾ ಗೋಲ್ಡ್ ಕಾನ್ಫರೆನ್ಸ್ (ಐಜಿಸಿ)ನಲ್ಲಿ ರೆಸ್ಪಾನ್ಸಿಬಲ್ ಜ್ಯುವೆಲ್ಲರಿ ಹೌಸ್ ಅವಾರ್ಡ್ ಲಭಿಸಿದೆ.

ಇದು ಭಾರತೀಯ ಆಭರಣ ಕ್ಷೇತ್ರದಲ್ಲಿ ಪ್ರತಿಷ್ಠಿತ ಪ್ರಶಸ್ತಿಯಾಗಿದೆ. ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ನೈತಿಕವಾದ ಮೂಲ ಮತ್ತು ಸುಸ್ಥಿರತೆಯ ಬದ್ಧತೆಯನ್ನು ಗುರುತಿಸಿ ಈ ಪ್ರಶಸ್ತಿ ನೀಡಲಾಗಿದೆ.

ಬೆಂಗಳೂರಿನ ಹಿಲ್ಟನ್ ಮಾನ್ಯತಾ ಬ್ಯುಸಿನೆಸ್ ಪಾರ್ಕ್‌ನಲ್ಲಿ ನಡೆದ ಅದ್ಧೂರಿ ಸಮಾರಂಭದಲ್ಲಿ ಮಲಬಾರ್ ಗೋಲ್ಡ್ & ಡೈಮಂಡ್ಸ್ ಪರವಾಗಿ ಭಾರತದಲ್ಲಿನ ಕಾರ್ಯಾಚರಣೆ ವ್ಯವಸ್ಥಾಪಕ ನಿರ್ದೇಶಕ ಪಿ.ಪಿಶರ್ ಅವರು ಇಂಡಿಯಾ ಗೋಲ್ಡ್ ಪಾಲಿಸಿ ಸೆಂಟರ್‌ನ ಅಧ್ಯಕ್ಷ ಡಾ.ಸುಂದರವಲ್ಲಿ ನಾರಾಯಣಸ್ವಾಮಿ ಅವರಿಂದ ಪ್ರಶಸ್ತಿಯನ್ನು ಸ್ವೀಕರಿಸಿದರು.

ಈ ಸಂದರ್ಭದಲ್ಲಿ ಮಲಬಾರ್ ಗೋಲ್ಡ್ ಎಲ್‌ಎಲ್‌ಸಿ ಬ್ಯುಸಿನೆಸ್ ಡೆವಲಪ್‌ಮೆಂಟ್ ಹೆಡ್ ಸೀತಾರಾಮನ್ ವರದರಾಜನ್, ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಬುಲಿಯನ್ ಹೆಡ್ ದಿಲೀಪ್ ನಾರಾಯಣನ್, ಫಿನ್ಮೆಟ್ ಪಿಟಿಇ ಲಿಮಿಟೆಡ್ ಡೈರೆಕ್ಟರ್ ಸುನೀಲ್ ಕಶ್ಯಪ್, ರ‍್ಯಾಂಡ್ ರಿಫೈನರಿ ಸಿಇಒ ಪ್ರವೀಣ್ ಬೈಜನಾಥ್ ಮತ್ತು ಮಲಬಾರ್ ಗೋಲ್ಡ್ & ಡೈಮಂಡ್ಸ್‌ನ ಕರ್ನಾಟಕದ ಮುಖ್ಯಸ್ಥ ಫಿಲ್ಸರ್ ಬಾಬು ಉಪಸ್ಥಿತರಿದ್ದರು.

ಪ್ರತಿ ಗ್ರಾಮಕ್ಕೂ ಶುದ್ಧ ಕುಡಿಯುವ ನೀರು ಸಮರ್ಪಕ ಸರಬರಾಜು ಮಾಡಿ

ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಸೆಲ್ವಕುಮಾರ್ ಅಧಿಕಾರಿಗಳಿಗೆ ಸೂಚನೆ



ಮೈಸೂರು ಜಿಪಂನ ಡಿ.ದೇವರಾಜ ಅರಸು ಸಭಾಂಗಣದಲ್ಲಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಸೆಲ್ವಕುಮಾರ್ ಜಿಲ್ಲೆಯ ಪ್ರಗತಿ ಪರಿಶೀಲನೆ ನಡೆಸಿದರು.

ಮೈಸೂರು, ಆ.26(ಬಿಎಲ್‌ಯು)– ಮೈಸೂರು ಜಿಲ್ಲೆಯ ಪ್ರತಿಯೊಂದು ಗ್ರಾಮಕ್ಕೂ ಸಮರ್ಪಕವಾಗಿ ಶುದ್ಧ ಕುಡಿಯುವ ನೀರು ಸರಬರಾಜು ಮಾಡಬೇಕು ಎಂದು ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ.ಎಸ್.ಸೆಲ್ವಕುಮಾರ್ ಅಧಿಕಾರಿಗಳಿಗೆ ತಾಕೀತು ಮಾಡಿದ್ದಾರೆ.

ಮೈಸೂರಿನ ಜಿಲ್ಲಾ ಪಂಚಾಯತ್ ಕಚೇರಿಯ ಡಿ.ದೇವರಾಜ ಅರಸ್ ಸಭಾಂಗಣದಲ್ಲಿ ಸೋಮವಾರ ಜಿಲ್ಲೆಯ ಪ್ರಗತಿ ಪರಿಶೀಲನೆ ಸಂದರ್ಭದಲ್ಲಿ ಮಾತನಾಡಿದ ಅವರು, ಪ್ರತಿಯೊಂದು ಗ್ರಾಮದಲ್ಲೂ ನಿಯಮಿತವಾಗಿ ಕುಡಿಯುವ ನೀರಿನ ಪರೀಕ್ಷೆ ಮಾಡಬೇಕು. ತರುವಾಯ ಅದು ಯೋಗ್ಯವಾಗಿದೆಯೇ ಎಂದು ಖಾತರಿ ಮಾಡಿಕೊಂಡು ಶುದ್ಧ ಕುಡಿಯುವ ನೀರು ಸರಬರಾಜು ಮಾಡಬೇಕು ಎಂದು ಸೂಚನೆ ನೀಡಿದರು. ಉತ್ತಮ ಮಳೆಯಾಗಿರುವ ಕಾರಣ ಕುಡಿಯುವ ನೀರಿಗೆ ಕೊರತೆ ಇಲ್ಲ. ಆದರೆ ಶುದ್ಧ ಕುಡಿಯುವ ನೀರನ್ನು ಸಮರ್ಪಕವಾಗಿ ಸರಬರಾಜು ಮಾಡಬೇಕು ಎಂದು ತಿಳಿಸಿದರು.

ಮಳೆಯಿಂದ ತೊಂದರೆಗೊಳಗಾದ ಪ್ರದೇಶಗಳಲ್ಲಿ ಪ್ರಾಣಹಾನಿ, ಜಾನುವಾರು, ಮನೆ ಹಾಗೂ ಬೆಳೆ ಹಾನಿಗೊಳಗಾದವರಿಗೆ ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಪರಿಹಾರ ನೀಡಬೇಕು. ಕಂದಾಯ ಇಲಾಖೆಯ ಸೇವೆಗಳು ಜನರಿಗೆ ಸಕಾಲದಲ್ಲಿ ದೊರೆಯಬೇಕು ಎಂದರು.

ಜಿಲ್ಲೆಯಲ್ಲಿ ಶಾಲೆ ಬಿಟ್ಟ ಮಕ್ಕಳ ಬಗ್ಗೆ ಸಮೀಕ್ಷೆ ಮಾಡಲಾಗಿದ್ದು, ಇವರನ್ನು ಮತ್ತೆ ಶಾಲೆಗೆ ಕರೆ ತರಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಶಿಕ್ಷಣ ಇಲಾಖೆಗೆ ಸೂಚನೆ ನೀಡಿದ ಡಾ.ಸೆಲ್ವಕುಮಾರ್, ಸಿಎಸ್‌ಆರ್ ಅನುದಾನ ಬಳಕೆ ಮಾಡಿಕೊಂಡು ಶಾಲೆಗಳಿಗೆ ಮೂಲ ಸೌಕರ್ಯ ಕಲ್ಪಿಸಿ ಅಭಿವೃದ್ಧಿ ಮಾಡಬೇಕು ಎಂದು ತಿಳಿಸಿದರು.

ಆರೋಗ್ಯ ಕೇಂದ್ರಗಳಲ್ಲಿ ಉತ್ತಮ ಚಿಕಿತ್ಸೆ ನೀಡುವುದರ ಜೊತೆಗೆ ಸಾಂಕ್ರಾಮಿಕ ರೋಗಗಳ ಬಗ್ಗೆ ಜನರಲ್ಲಿ ಅರಿವು ಮೂಡಿಸಬೇಕು. ಪ್ರಮುಖವಾಗಿ ತಾಯಿ ಮತ್ತು ಮಗುವಿನ ಆರೋಗ್ಯದ ರಕ್ಷಣೆ ಬಗ್ಗೆ ನಿಯಮಿತವಾಗಿ ತಪಾಸಣಾ ಕಾರ್ಯ ಕೈಗೊಂಡು ಚಿಕಿತ್ಸೆ ನೀಡಬೇಕು ಎಂದು ಸಲಹೆ ನೀಡಿದರು.

ಈ ಬಾರಿ ಉತ್ತಮ ಮಳೆಯಾಗಿದ್ದು, ಬೇಸಾಯಕ್ಕೆ ರೈತರಿಗೆ ಬಿತ್ತನೆ ಬೀಜ ಹಾಗೂ ರಸಗೊಬ್ಬರದ ಸಮಸ್ಯೆ ಆಗಬಾರದು. ಜಾನುವಾರುಗಳಿಗೆ ಮೇವು ಕೊರತೆಯಾಗದಂತೆ ಮೇವು ಕಿಟ್ ವಿತರಣೆ ಮಾಡಬೇಕು ಎಂದು ಡಾ.ಸೆಲ್ವಕುಮಾರ್ ಅಧಿಕಾರಿಗಳಿಗೆ ಆದೇಶ ನೀಡಿದರು.

ಅಪರ ಜಿಲ್ಲಾಧಿಕಾರಿ ಡಾ.ಪಿ.ಶಿವರಾಜ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಷ್ಣುವರ್ಧನ್ ಸೇರಿದಂತೆ ಹಲವು ಅಧಿಕಾರಿಗಳು ಸಭೆಯಲ್ಲಿ ಉಪಸ್ಥಿತರಿದ್ದರು.

ಮೈಸೂರು ಜಿಲ್ಲೆಯಲ್ಲಿ ಶೇ.70ರಷ್ಟು ಆಧಾರ್ ಸೀಡಿಂಗ್ ಆಗಿದೆ

ಮೈಸೂರು ಜಿಲ್ಲೆಯಲ್ಲಿ ಆರ್‌ಟಿಸಿಗಳಿಗೆ ಶೇ.70ರಷ್ಟು ಆಧಾರ್ ಸೀಡಿಂಗ್ ಆಗಿದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ ಈ ವೇಳೆ ಮಾಹಿತಿ ನೀಡಿದರು. ಉಳಿದ ಶೇಕಡ 30 ರಷ್ಟು ಆಧಾರ್ ಜೋಡಣಾ ಕಾರ್ಯ ಪ್ರಗತಿಯಲ್ಲಿದೆ ಎಂದು ಹೇಳಿದರು.

ಮೈಸೂರು ಜಿಲ್ಲೆಯಲ್ಲಿ ಈ ಬಾರಿ ಶೇ.42ರಷ್ಟು ಮಳೆಯಾಗಿದೆ. ಕಬಿನಿ ಮತ್ತು ಕೆಆರ್‌ಎಸ್‌ನಿಂದ ಹೆಚ್ಚು ನೀರು ಬಿಟ್ಟ ಪರಿಣಾಮ ನಂಜನಗೂಡು ಹಾಗೂ ತಿ.ನರಸೀಪುರ ತಾಲೂಕಿನ ಕೆಲವು ಭಾಗಗಳಲ್ಲಿ ಬೆಳೆ ನಾಶವಾಗಿದ್ದು, ಇದಕ್ಕೆ ಪರಿಹಾರ ನೀಡಲು ಕ್ರಮ ವಹಿಸಲಾಗಿದೆ ಎಂದು ತಿಳಿಸಿದರು.

ಮೈಸೂರು ಜಿಲ್ಲೆಯ 75 ಮನೆಗಳಿಗೆ ಮಳೆಯಿಂದ ಹಾನಿಯಾಗಿದ್ದು, 1.20 ಲಕ್ಷ ಪರಿಹಾರ ನೀಡಲಾಗುತ್ತಿದೆ. 83 ಮನೆಗಳಿಗೆ ಭಾಗಶಃ ಹಾನಿಯಾಗಿದ್ದು, 50 ಸಾವಿರ ರೂಪಾಯಿ ಪರಿಹಾರ ನೀಡಲಾಗುತ್ತಿದೆ ಎಂದು ಲಕ್ಷ್ಮಿಕಾಂತ ರೆಡ್ಡಿ ವಿವರಿಸಿದರು.

ಈ ವೇಳೆ ಮಾತನಾಡಿದ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಕೆ.ಎಂ.ಗಾಯತ್ರಿ, ಮೈಸೂರು ಜಿಲ್ಲೆಯಲ್ಲಿ ಹಲವು ಶಾಲೆಗಳಲ್ಲಿ ಹೆಚ್ಚುವರಿ ಕೊಠಡಿ ನಿರ್ಮಾಣ ಮಾಡಲಾಗುತ್ತಿದೆ. ಕಟ್ಟಡಗಳ ಗುಣಮಟ್ಟಕ್ಕೆ ಸಂಬಂಧಿಸಿದಂತೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಪರಿಶೀಲನೆ ನಡೆಸುತ್ತಿದ್ದಾರೆ ಎಂದರು.

ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಸಂಭ್ರಮಾಚರಣೆ

ಮೇಘಾಲಯ ರಾಜ್ಯಪಾಲ ವಿಜಯಶಂಕರ್ ಭಾಗಿ



ಮೈಸೂರಿನ ಶ್ರೀ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ನಡೆದ ಶ್ರೀ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಮಾತನಾಡಿದರು.

ಮೈಸೂರು, ಆ.26(ಎಸ್‌ಬಿಡಿ)– ಮೈಸೂರಿನ ಯಾದವಗಿರಿಯಲ್ಲಿನ ಶ್ರೀರಾಮಕೃಷ್ಣ ವಿದ್ಯಾಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ನಡೆದ ಸಂಭ್ರಮಾಚರಣೆಯಲ್ಲಿ ಮೇಘಾಲಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಪಾಲ್ಗೊಂಡಿದ್ದರು.

ಗೋಪೂಜೆ ಬಳಿಕ ಮಾತನಾಡಿದ ಅವರು, ಶ್ರೀರಾಮಕೃಷ್ಣ ಆಶ್ರಮ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ನಿಸ್ವಾರ್ಥ ಸೇವೆ ಸಲ್ಲಿಸುತ್ತಿರುವುದು ಶ್ಲಾಘನೀಯ. ರಾಷ್ಟ್ರಕವಿ ಕುವೆಂಪು ವಿರಚಿತ ಶ್ರೀರಾಮಕೃಷ್ಣರ ಜೀವನ ಚರಿತ್ರೆ ಹಾಗೂ ಸ್ವಾಮಿ ವಿವೇಕಾನಂದರ ಜೀವನ ಚರಿತ್ರೆಯನ್ನು ವಿದ್ಯಾರ್ಥಿಗಳು ಓದಿ, ತಿಳಿದುಕೊಳ್ಳಬೇಕು. ಈ ಎರಡು ಕೃತಿಗಳಿಂದ ನಮ್ಮ ದೇಶದ ಪರಂಪರೆಯ ದರ್ಶನವಾಗುತ್ತದೆ ಎಂದು ಹೇಳಿದರು.ಕಾರ್ಯಕ್ರಮದಲ್ಲಿ ಶ್ರೀ ರಾಮಕೃಷ್ಣ ಆಶ್ರಮದ ಅಧ್ಯಕ್ಷರಾದ ಸ್ವಾಮಿ ಮುಕ್ತಿದಾನಂದಜೀ ಮಹಾರಾಜ್, ಶ್ರೀ ರಾಮಕೃಷ್ಣ ವಿದ್ಯಾಶಾಲೆಯ ಮುಖ್ಯಸ್ಥ(ಕರೆಸ್ಪಾಂಡೆಂಟ್) ಸ್ವಾಮಿ ಯುಕ್ತೇಶಾನಂದಜೀ, ವಿದ್ಯಾಶಾಲೆಯ ಪ್ರಾಂಶುಪಾಲ ಟಿ.ಕೆ.ಚಂದ್ರಶೇಖರ್ ಸೇರಿದಂತೆ ಬೋಧಕ ಹಾಗೂ ಬೋಧಕೇತರ ವರ್ಗದವರು ಭಾಗವಹಿಸಿದ್ದರು.

ಮೈಸೂರಲ್ಲಿ ಹಿರಿಯ ನಾಗರಿಕರ ದಿನಾಚರಣೆ




ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್ ವತಿಯಿಂದ ಏರ್ಪಡಿಸಿದ್ದ ಹಿರಿಯ ನಾಗರಿಕರ ದಿನಾಚರಣೆ ಕಾರ್ಯಕ್ರಮದಲ್ಲಿ ಹಿರಿಯರಿಗೆ ಕಂಪ್ಯೂಟರ್ ಬಳಕೆ ಬಗ್ಗೆ ತಿಳಿಸಿ ಕೊಡಲಾಯಿತು.

ಮೈಸೂರು,ಆ.26–ಕೌಶಲತೆ ಎಂಬುದು ಸಕಲರ ಸ್ವತ್ತು, ಅದನ್ನು ಯಾವುದೇ ವಯೋಮಾನದಲ್ಲಾದರೂ ರೂಢಿಸಿಕೊಳ್ಳಬಹುದು ಎಂದು ಸಖಿ ಫೌಂಡೇಶನ್ ಮತ್ತು ಸೂರ್ಯ ಚಾರಿಟಬಲ್ ಟ್ರಸ್ಟ್‌ನ ಸಂಸ್ಥಾಪನಾ ಕಾರ್ಯದರ್ಶಿ ಶ್ರೀಮತಿ ಗಾಯತ್ರಿ ಸುಂದರೇಶ್ ಹೇಳಿದರು.

ಹಿರಿಯ ನಾಗರಿಕರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಕಂಪ್ಯೂಟರ್ ಕಲಿಕಾ ಕಾರ್ಯಾಗಾರವನ್ನು ಉದ್ಘಾಟಿಸಿ ಮಾತನಾಡುತ್ತಾ, ಹಿರಿಯರಿಗೆ ತಮ್ಮ ದೈನಂದಿನ ಚಟುವಟಿಕೆಗಳ ಜೊತೆಗೆ ಕಂಪ್ಯೂಟರ್‌ನಂತಹ ನೂತನ ತಂತ್ರಜ್ಞಾನದ ಬಗ್ಗೆ ತಿಳುವಳಿಕೆ ಬೆಳೆಸಿಕೊಂಡಲ್ಲಿ ಹೊಸತಲೆಮಾರಿನವರೊಂದಿಗೆ ಹೊಂದಿಕೊಳ್ಳುವುದು ಸುಲಭವಾಗುತ್ತದೆ. ಡಿಜಿಟಲೀಕರಣದತ್ತ ಮುನ್ನಡೆಯುತ್ತಿರುವ ಪ್ರಪಂಚದೊಂದಿಗೆ ಜೊತೆಗೂಡಿದಾಗ ಕೆಲಸ ಸರಳವಾಗುತ್ತದೆ ಎಂದರು. ಸಮಾನಮನಸ್ಕರೊಂದಿಗೆ ಸಮಾನ ಜ್ಞಾನವನ್ನು ಹಂಚಿಕೊಳ್ಳಲು ಇಂತಹ ಕಾರ್ಯಾಗಾರಗಳು ಸಹಕಾರಿಯಾಗುತ್ತವೆ. ಮುಂದಿನ ದಿನಗಳಲ್ಲಿ ನಿರಂತರವಾಗಿ ಹಿರಿಯ ನಾಗರಿಕರಿಗಾಗಿ ಇಂತಹ ತರಬೇತಿ ನೀಡಲು ಸಂಸ್ಥೆ ಸಿದ್ಧವಾಗಿದೆ ಎಂದರು.

ತರಬೇತುದಾರರಾದ ರೇಖಾ, ಡಾ.ಕೆ. ಚಂದ್ರಶೇಖರ್, ಡಾ.ಟಿ.ಕೆ.ರಂಗಸ್ವಾಮಿ, ರಾಜ್‌ಕುಮಾರ್, ಮಂಜುಳ, ರಘು, ಕೆ.ಪಿ.ಸತ್ಯನಾರಾಯಣ ಉಪಸ್ಥಿತರಿದ್ದರು.

ಮೇಘಾಲಯ ರಾಜ್ಯಪಾಲ ಸಿ.ಎಚ್.ವಿಜಯಶಂಕರ್‌ಗೆ ಅಭಿನಂದನೆ



ಮೇಘಾಲಯದ ರಾಜ್ಯಪಾಲ ಸಿ.ಎಚ್.ವಿಜಯಶಂಕರ್ ಅವರನ್ನು ಮಾಜಿ ಸಚಿವರೂ ಆದ ಜೆಡಿಎಸ್ ಕಾರ್ಯಾಧ್ಯಕ್ಷ ಸಾ.ರಾ.ಮಹೇಶ್ ಅಭಿನಂದಿಸಿದರು. ಈ ವೇಳೆ ಮಾಜಿ ಉಪ ಮೇಯರ್ ವಿ.ಶೈಲೇಂದ್ರ ಉಪಸ್ಥಿತರಿದ್ದರು.

ಸಂಸದ, ಶಾಸಕರಿಂದ ಅಗ್ನಿಶಾಮಕ ಠಾಣೆ ಪಾರಂಪರಿಕ ಕಟ್ಟಡ ಕುಸಿದ ಭಾಗ ಪರಿಶೀಲನೆ

ಒಬ್ಬರು ಸಂರಕ್ಷಣೆ ಎಂದರೆ, ಮತ್ತೊಬ್ಬರು ಹೊಸದಾಗಿ ನಿರ್ಮಾಣ ಇಂಗಿತ; ಅಧಿಕಾರಿಗಳಲ್ಲಿ ಗೊಂದಲ





ಸರಸ್ವತಿಪುರಂ ಅಗ್ನಿಶಾಮಕ ಠಾಣೆಗೆ ಪ್ರತ್ಯೇಕವಾಗಿ ಭೇಟಿ ನೀಡಿದ ಶಾಸಕ ಕೆ.ಹರೀಶ್‌ಗೌಡ ಹಾಗೂ ಸಂಸದ ಯದುವೀರ್ ಅವರು ಸ್ಥಳ ಪರಿಶೀಲನೆ ನಡೆಸಿದರು.

ಮೈಸೂರು, ಆ.26(ಎಂಕೆ)– ನಗರದ ಸರಸ್ವತಿಪುರಂ ಅಗ್ನಿಶಾಮಕ ಠಾಣೆಗೆ ಪ್ರತ್ಯೇಕವಾಗಿ ಭೇಟಿ ನೀಡಿದ ಶಾಸಕ ಕೆ.ಹರೀಶ್‌ಗೌಡ ಹಾಗೂ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಮಳೆಯಿಂದ ಕುಸಿದು ಬಿದ್ದಿರುವ ಪಾರಂಪರಿಕ ಕಟ್ಟಡದ ಸ್ವಾಗತ ಕಮಾನು ಪರಿಶೀಲನೆ ನಡೆಸಿದರು.

ಸೋಮವಾರ ಮಧ್ಯಾಹ್ನ ಪ್ರತ್ಯೇಕವಾಗಿ ಅಗ್ನಿಶಾಮಕ ಠಾಣೆ ಪಾರಂಪರಿಕ ಕಟ್ಟಡದ ಪರಿಶೀಲನೆ ನಡೆಸಿ, ಕಟ್ಟಡದ ಸ್ಥಿತಿ–ಗತಿ ಕುರಿತು ಮಾಹಿತಿ ಪಡೆದರು. ಈ ವೇಳೆ ಶಾಸಕ ಕೆ.ಹರೀಶ್‌ಗೌಡ, ಹೊಸದಾಗಿ ಕಟ್ಟಡ ನಿರ್ಮಾಣ ಮಾಡುವುದರ ಕುರಿತು ಚರ್ಚಿಸಿ ಯೋಜನಾ ವರದಿ ಸಿದ್ಧಪಡಿಸುವಂತೆ ಸೂಚಿಸಿದರೆ, ಸಂಸದರೂ ರಾಜವಂಶಸ್ಥ ಯದುವೀರ್, ಪಾರಂಪರಿಕ ಕಟ್ಟಡದ ಸಂರಕ್ಷಣೆಗೆ ಯೋಜನಾ ವರದಿ ಸಿದ್ಧಪಡಿಸುವಂತೆ ಅಧಿಕಾರಿಗಳಿಗೆ ತಿಳಿಸಿದ್ದಾರೆ.

ಇತಿಹಾಸ ತಜ್ಞ ಪ್ರೊ.ರಂಗರಾಜು, ಮುಖ್ಯ ಅಗ್ನಿಶಾಮಕ ಅಧಿಕಾರಿ ಪಿ.ಎಸ್. ಜಯರಾಮಯ್ಯ, ಪ್ರಾದೇಶಿಕ ಅಗ್ನಿಶಾಮಕ ಅಧಿಕಾರಿ ಪಿ.ಚಂದನ್, ಜಿಲ್ಲಾ ಅಗ್ನಿಶಾಮಕ ಅಧಿಕಾರಿ ಕೆ.ಪಿ.ಗುರುರಾಜ್, ಅಗ್ನಿಶಾಮಕ ಠಾಣಾಧಿಕಾರಿ ಎಸ್. ನಾಗರಾಜ್ ಅರಸ್ ಮತ್ತಿತರರಿದ್ದರು.

ಅಧಿಕಾರಗಳಲ್ಲೇ ಗೊಂದಲ: 5 ವರ್ಷಗಳ ಹಿಂದೆ ಮಳೆಯಿಂದಾಗಿ ಅಗ್ನಿಶಾಮಕ ಠಾಣೆ ಪಾರಂಪರಿಕ ಕಟ್ಟಡದ ಸ್ವಾಗತ ಕಮಾನು ಧರೆಗುರುಳಿತ್ತು. ಅಂದಿನಿಂದಲೂ ಮರು ನಿರ್ಮಾಣವಾಗದೆ, ಸಂರಕ್ಷಣೆಯಾಗದೆ ಪಾಳು ಬಿದ್ದತ್ತಿದ್ದ ಕಟ್ಟಡವನ್ನು ಮರು ನಿರ್ಮಾಣ ಮಾಡಬೇಕೇ ಅಥವಾ ಸಂರಕ್ಷಣೆ ಮಾಡಬೇಕೇ ಎಂಬುದು ಅಧಿಕಾರಿಗಳ ಗೊಂದಲಕ್ಕೆ ಕಾರಣವಾಗಿದೆ. ಸ್ಥಳೀಯ ಶಾಸಕರು ಹೊಸದಾಗಿ ಮರು ನಿರ್ಮಾಣ ಮಾಡಬೇಕು ಎಂದರೆ, ಸಂಸದರು ಸಂರಕ್ಷಣೆ ಎನ್ನುತ್ತಿದ್ದಾರೆ. ಐದು ವರ್ಷದಿಂದಲೂ ಕಟ್ಟಡ ಯಾವಾಗ ಕುಸಿದು ಬೀಳುತ್ತೋ ಎಂಬ ಭಯದಲ್ಲೇ ಬದುಕುತ್ತಿದ್ದೇವೆ. ಈಗ ಉಂಟಾಗಿರುವ ಗೊಂದಲದಿಂದ ಇನ್ನೂ ಎರಡ್ಮೂರು ವರ್ಷಗಳು ಭಯದಲ್ಲೇ ಕಾರ್ಯನಿರ್ವಹಿಸಬೇಕೆನೋ ಎಂದು ಕೆಲ ಅಗ್ನಿಶಾಮಕ ಸಿಬ್ಬಂದಿ 'ಮೈಸೂರು ಮಿತ್ರ'ನಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ತೃಪ್ತಿದಾಯಕ ಬದುಕಿಗೆ ಆಧ್ಯಾತ್ಮವೇ ಮೂಲ



ಮೈಸೂರಿನ ಶ್ರೀ ಉತ್ತರಾದಿ ಮಠದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಪ್ರಯುಕ್ತ ಪವಮಾನ ಹಾಗೂ ನವಗ್ರಹ ಹೋಮ ನಡೆಯಿತು.

ಮೈಸೂರು, ಆ. 26– ಮೈಸೂರಿನ ಕೆಆರ್‌ಎಸ್ ರಸ್ತೆ, ಯಾದವಗಿರಿ, ರೈಲ್ವೆ ಕ್ರೀಡಾಂಗಣದ ಎದುರು ಸಿಎಫ್‌ಟಿಆರ್‌ಐ ಪಕ್ಕದಲ್ಲಿರುವ ಶ್ರೀ ಉತ್ತರಾದಿ ಮಠದ ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಪ್ರಯುಕ್ತ ವಿದ್ವಾನ್ ಶ್ರೀ ಬಾಗೇವಾಡಿ ಆಚಾರ್ಯರವರ ನೇತೃತ್ವದಲ್ಲಿ ಪವಮಾನ ಹಾಗೂ ನವಗ್ರಹ ಹೋಮ, ಪ್ರಾಣ ದೇವರಿಗೆ ಮಧು ಅಭಿಷೇಕ, ರೇಷ್ಮೆ ವಸ್ತ್ರ ಸೇವೆಯನ್ನು ಏರ್ಪಡಿಸಲಾಗಿತ್ತು. ನಂತರ ಭಕ್ತಾದಿಗಳಿಗೆ ಪ್ರಸಾದ ವಿತರಿಸಲಾಯಿತು.

ಈ ವೇಳೆ ವಿದ್ವಾನ್ ಶ್ರೀ ಬಾಗೇವಾಡಿ ಆಚಾರ್ಯ ಮಾತನಾಡಿ, ತೃಪ್ತಿದಾಯಕ ಬದುಕಿಗೆ ಅಧ್ಯಾತ್ಮವೇ ಮೂಲ. ಪ್ರತಿಯೊಬ್ಬರು ಒತ್ತಡದ ಬದುಕಿನ ಜಂಜಾಟದ ಮಧ್ಯೆಯೂ ಅಧ್ಯಾತ್ಮದತ್ತ ಒಲವು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಮಠದ ವ್ಯವಸ್ಥಾಪಕ ಅನಿರುದ್ಧಾಚಾರ್ಯ ಪಾಂಡುರಂಗಿ, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಅಚ್ಯುತ ಆಚಾರ್, ಪ್ರಮೋದ್ ಆಚಾರ್, ಕಾಂಗ್ರೆಸ್ ಯುವ ಮುಖಂಡ ಎನ್.ಎಂ.ನವೀನ್‌ಕುಮಾರ್, ಪಾಲಿಕೆ ಮಾಜಿ ಸದಸ್ಯೆ ಪ್ರಮೀಳಾ ಭರತ್, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆ.ಆರ್.ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ವಾಸುದೇವ ಮೂರ್ತಿ, ಜಯಂತ್, ವಿಕಾಶ್ ಶಾಸ್ತ್ರಿ ಇತರರಿದ್ದರು.

ನಿಧನ

ಶ್ರೀಮತಿ ಅನುಸೂಯ ಸತ್ಯನಾರಾಯಣ



ಮೈಸೂರು, ಆ.26–ಮೈಸೂರಿನ ರಾಮಕೃಷ್ಣನಗರದ ಕೆ.ಬ್ಲಾಕ್ ನಿವಾಸಿ ಶ್ರೀಮತಿ ಅನುಸೂಯ ಸತ್ಯನಾರಾಯಣ (78) ಅವರು ದೀರ್ಘಕಾಲದ ಅನಾರೋಗ್ಯದಿಂದ ನಿಧನರಾದರು.


ಮೃತರು ಪುತ್ರಿ ಶಾರ್ವರಿ, ಅಳಿಯ ಜಗದೀಶ್, ಮಗ ಗಣೇಶ್ ಸೇರಿದಂತೆ ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಸೋಮವಾರ ಕೆ.ಜಿ.ಕೊಪ್ಪಲು ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಿ.ಜೆ.ಪ್ರಕಾಶ್



ಮೈಸೂರು, ಆ.26– ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷ ಹಾಗೂ ನಿವೃತ್ತ ಎಂಜಿನಿಯರ್ ಜಿ.ಜೆ.ಪ್ರಕಾಶ್(80) ನಿಧನರಾದರು. ಮೂಲತಃ ತಲಕಾಡಿನ ಪ್ರಕಾಶ್ ಅವರು ಮೈಸೂರಿನ ಟಿ.ಕೆ.ಲೇಔಟ್‌ನ ವಾಸವಿದ್ದರು. ಇವರು ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ ಸಂಜೆ ಕುವೆಂಪುನಗರದಲ್ಲಿನ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

27.08.2024 ಮಂಗಳವಾರ, ಮಳೆ ನಕ್ಷತ್ರ: ಮಖ 17.08.2024 ರಿಂದ 30.08.2024
ಕ್ರೋಧಿನಾಮ ಸಂವತ್ಸರ, ದಕ್ಷಿಣಾಯನ, ವರ್ಷ ಋತು, ಶ್ರಾವಣ ಮಾಸ, ಕೃಷ್ಣ ಪಕ್ಷ,
ತಿಥಿ: ಅಷ್ಟಮಿ, ನಕ್ಷತ್ರ: ರೋಹಿಣಿ, ರಾಹುಕಾಲ : ಮಧ್ಯಾಹ್ನ 3 ರಿಂದ 4.30 ರವರೆಗೆ

- **ವೀರಭದ್ರಸ್ವಾಮಿ ಹಾಗೂ ಚಾಮರಾಜೇಶ್ವರ ಸ್ವಾಮಿ ದೇವಸ್ಥಾನ:** ಶ್ರೀ ವೀರಭದ್ರೇಶ್ವರಸ್ವಾಮಿಯ ಜಯಂತ್ಯುತ್ಸವ, ಮಹಾರಥೋತ್ಸವ ಹಾಗೂ ಶ್ರಾವಣ ಮಾಸದ ಪೂಜಾ ಕಾರ್ಯಕ್ರಮ, ಸ್ಥಳ: ದೇವಸ್ಥಾನದ ಪ್ರಾಂಗಣ, ಡಿ.ಬನುಮಯ್ಯ ರಸ್ತೆ, ಕೆ.ಆರ್.ಮೊಹಲ್ಲಾ, ಬೆಳಗ್ಗೆಯಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಹೈಪೋಥೈರಾಯ್ಡಿಸಮ್ ಚಿಕಿತ್ಸಾ ಶಿಬಿರ, ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 9 ರಿಂದ ಸಂಜೆ 4.30ರವರೆಗೆ
- **ರಾಮ್‌ಸನ್ಸ್ ಪ್ರತಿಷ್ಠಾನ :** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನದ 20ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ಆಮ್ರಪಾಲಿ ಸೀರೆ ಮಳಿಗೆಯ ಮೇಲೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಅರಸು ಮಹಿಳಾ ಜಾಗೃತಿ ಸಭಾ :** ಕೃಷ್ಣ ಮತ್ತು ರಾಧೆಯ ವೇಷದ ಚಿಣ್ಣರ ಸಮಾಗಮ, ಅಧ್ಯಕ್ಷತೆ : ಸಂಸ್ಥೆಯ ಅಧ್ಯಕ್ಷ ಬಿ.ಎಸ್. ಶ್ರೀಧರರಾಜೇ ಅರಸ್, ಸ್ಥಳ: ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನದ ಆವರಣ, ತ್ಯಾಗರಾಜ ರಸ್ತೆ, ಬೆಳಗ್ಗೆ 10.30ಕ್ಕೆ.
- **ಕರ್ನಾಟಕ ಜಾನಪದ ಅಕಾಡೆಮಿ, ಬೆಂಗಳೂರು, ಪ್ರಾದೇಶಿಕ ಜಾನಪದ ಅಧ್ಯಯನ ಮತ್ತು ಜನಪದ ಕಲಿಕಾ ಕೇಂದ್ರ, ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯ, ಏಕತಾರಿ ಸಾಂಸ್ಕೃತಿಕ ಸಂಘಟನೆ :** ಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳಿಗೆ ಜನಪದ ನೃತ್ಯಗಳು ಮತ್ತು ಜನಪದ ಗೀತೆಗಳ ಕಲಿಕಾ ತರಬೇತಿ ಶಿಬಿರ, ಸ್ಥಳ: ಕಿರು ರಂಗಮಂದಿರ ಆವರಣ, ಕಲಾಮಂದಿರ, ಸಂಜೆ 4ರಿಂದ 6ರವರೆಗೆ.
- **ಶ್ರೀ ಕೃಷ್ಣ ಟ್ರಸ್ಟ್:** ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಶ್ರೀ ಕೃಷ್ಣ ಲೀಲೋತ್ಸವ, ರಾಜಬೀದಿಗಳಲ್ಲಿ ಶ್ರೀ ಕೃಷ್ಣನ ಭವ್ಯ ಮೆರವಣಿಗೆ, ವಿಟ್ಲಪಿಂಡಿ ಮತ್ತು ಕರ್ನಾಟಕ ಮಹಿಳಾ ಯಕ್ಷಗಾನ ಕಲಾವಿದರಿಂದ ಶ್ರೀ ಕೃಷ್ಣ ಲೀಲೆ–ಕಂಸವಧೆ ಯಕ್ಷ ಗಾನ ಪ್ರದರ್ಶನ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 4.30ಕ್ಕೆ.
- **ಶರಣ ಸಾಹಿತ್ಯ ಪರಿಷತ್ತು (ಮೈಸೂರು ನಗರ ಘಟಕ) ಕದಳಿ ಮಹಿಳಾ ವೇದಿಕೆ :** ವಚನ–ಶ್ರಾವಣ, ಮನೆ ಮನೆಗೆ ಶ್ರಾವಣ ಮಾಸದ ಶರಣ ಸಂದೇಶ, ಅಂಕಣಕಾರ ಬನ್ನೂರು ಕೆ. ರಾಜು ಅವರಿಂದ ಒಬ್ಬರ ಮನವ ನೋಯಿಸಿ ಒಬ್ಬರ ಮನೆಯ ಘಾತವಮಾಡಿ–ಸಿದ್ದರಾಮ ಕುರಿತು ಉಪನ್ಯಾಸ, ಸ್ಥಳ: ಶ್ರೀ ಚಿಕ್ಕಮಠ ಜೆ.ಬಿ. ಮತ್ತು ಶ್ರೀಮತಿ ಗಿರಿಜಾ, ಜೆಎಸ್‌ಎಸ್ ಮಹಿಳಾ ವಸತಿ ನಿಲಯ, ಸರಸ್ವತಿಪುರಂ, ಸಂಜೆ 5.30ಕ್ಕೆ
- **ಶ್ರೀ ಸುತ್ತೂರು ಮಠ, ಮೈಸೂರು ಶಾಖೆ :** ಶ್ರಾವಣಮಾಸ ಪೂಜಾನುಷ್ಠಾನ ಮತ್ತು ಪ್ರವಚನ, ವಿದುಷಿ ಧರಿತ್ರಿ ಆನಂದರಾವ್ ಅವರಿಂದ ವಾಚನ, ವಿಶ್ರಾಂತ ಕನ್ನಡ ಪ್ರಾಧ್ಯಾಪಕ ಡಾ. ಕೆ. ಅನಂತರಾಮು ಅವರಿಂದ ಪ್ರವಚನ, ಸಂಜೆ 6ಕ್ಕೆ ಸಾಮೂಹಿಕ ಪ್ರಾರ್ಥನೆ, ಸಂಜೆ 6.30ಕ್ಕೆ ಪ್ರವಚನ, ಸ್ಥಳ: ಶ್ರೀ ಸುತ್ತೂರು ಮಠ, ಚಾಮುಂಡಿಬೆಟ್ಟದ ತಪ್ಪಲು, ಸಂಜೆ 6.30 ರಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 'ಶ್ರದ್ಧೆಯ ಶಿಲ್ಪ' ಕರ್ನಾಟಕದ ಪ್ರಾಚೀನ ದೇವಾಲಯಗಳ ಪರಿಚಯ ಮಾಲಿಕೆ, ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಅದಮ್ಯ ಚೇತನ ಫೌಂಡೇಶನ್, ಬೆಂಗಳೂರು, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ ಗಾಯನ–ಶಾಂತಲಾ ವಟ್ಟಂ, ವ್ಯಾಖ್ಯಾನ–ಡಾ. ಹೆಚ್. ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಕಾದಂಬರಿ ವಿಹಾರ: ಅ.ನ.ಕೃ. ಅವರ 'ಉದಯರಾಗ' ಕಾದಂಬರಿಯ ಬಾನುಲಿ ಓದು, ಪ್ರಸ್ತುತಿ : ಉಮೇಶ್ ಎಸ್. ಎಸ್., 8.30 ಬಾನುಲಿ ಇಂಗ್ಲೀಷ್ ಪಾಠ ಪ್ರಸ್ತುತಿ : ಸದಾನಂದ. ಆರ್, 8.40 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ನೇರ ಫೋನ್ ಇನ್ ಕಾರ್ಯಕ್ರಮ, 9.00 ರಾಷ್ಟ್ರೀಯ ಬಾಹ್ಯಾಕಾಶ ದಿನದ ಸಂದರ್ಭದಲ್ಲಿ ವಿಶೇಷ ಕಾರ್ಯಕ್ರಮ ಸರಣಿ 'ಬಾಹ್ಯಾಕಾಶ ವಿಸ್ಮಯ' 10.00 ಕರ್ನಾಟಕ ಶಾಸ್ತ್ರೀಯ ಸಂಗೀತ : ಲಾಲ್‌ಗುಡಿ. ಜಿ. ಜೆ. ಆರ್. ಕೃಷ್ಣನ್ ಮತ್ತು ಲಾಲ್‌ಗುಡಿ ವಿಜಯಲಕ್ಷ್ಮಿ –ಯುಗಳ ವಯೋಲಿನ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ–ಕಥೆಯಲ್ಲಿದೆ ಉತ್ತರ, ಪ್ರಸ್ತುತಿ : ಪ್ರಭುಸ್ವಾಮಿ ಮಳಿಮಠ್ ಹಾಗೂ ಚೈತ್ರಿಕಾ

ಮಧ್ಯಾಹ್ನ: 12.05 ವನಿತಾ ವಿಹಾರ, 12.30 ದೇವರನಾಮ–ಲತಾ ಶೇಖರ್, 12.45 ಕನ್ನಡದಲ್ಲಿ ಭಾಷಣ : ಯಾರು ಕಾಣದ ಪ್ರವಾಸಿ ತಾಣ–ಬಾನುಲಿ ಮಾಲಿಕೆ ಶ್ರೀರಂಗಪಟ್ಟಣದ ಗ್ಯಾರಿಸನ್ ಸಮಾಧಿ ಸ್ಮಾರಕದ ಪರಿಚಯ ಸಿರಿ ಮೈಸೂರು ಅವರಿಂದ, 1.00 ಬಾನುಲಿ ಇಂಗ್ಲೀಷ್ ಪಾಠ, ಪ್ರಸ್ತುತಿ : ಸದಾನಂದ. ಆರ್, 1.20 ಭಾವಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಯು. ಶ್ರೀನಿವಾಸ್ – ಮ್ಯಾಂಡೋಲಿನ್, 4.00 ಕಥಾ ಕಾಲಕ್ಷೇಪ–ಶ್ರೀಕೃಷ್ಣ ಗಾರುಡಿ, ಪ್ರಸ್ತುತಿ: ವಿದ್ವಾನ್. ಆರ್. ಗುರುರಾಜುಲು ನಾಯ್ಡು, 6.50 ಕೃಷಿರಂಗ: ಕಿಸಾನ್‌ವಾಣಿ, ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ರೇಷ್ಮೆ ಐಸಿರಿ – ರೇಷ್ಮೆ ಕೃಷಿ ತಾಂತ್ರಿಕತೆಗಳನ್ನು ಕುರಿತ ಬಾನುಲಿ ಸರಣಿ ಸುಧಾರಿತ ರೇಷ್ಮೆ ಗೂಡಿನ ಉತ್ಪಾದನೆ ಕುರಿತು ನೇರ ಫೋನ್ ಇನ್ ಕಾರ್ಯಕ್ರಮ, ಭಾಗವಹಿಸುತ್ತಾರೆ : ಮೈಸೂರಿನ ಕೇಂದ್ರ ರೇಷ್ಮೆ ಸಂಶೋಧನೆ ಹಾಗೂ ತರಬೇತಿ ಸಂಸ್ಥೆಯ ವಿಜ್ಞಾನಿ ಡಾ. ಕೆ. ಬಿ. ಚಂದ್ರಶೇಖರ್, ಪ್ರಸ್ತುತಿ : ಎನ್. ಕೇಶವಮೂರ್ತಿ 7.45 'ಮೈಸೂರು ಜಂಕ್ಷನ್ ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ : ಜಾಂಪಣ್ಣ ಆಶೀಹಾಳ್, 8.00 ಕ್ರೀಡಾ ಲೋಕ, 8.30 ಹಿಂದಿ ಚಿತ್ರಗೀತೆಗಳು, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ : ಎಂ. ಎಲ್. ವಸಂತಕುಮಾರಿ – ಹಾಡುಗಾರಿಕೆ, 10.00 ಚೈತ್ರವನ – ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ವಾಚನ : ಹೆಚ್. ಎಲ್. ಶ್ರೀಕಂಠ, ವ್ಯಾಖ್ಯಾನ : ಹೆಚ್. ಎಸ್. ಗೋಪಾಲ್, ಪ್ರಸ್ತುತಿ: ಡಾ. ಎ. ಎಸ್. ಶಂಕರನಾರಾಯಣ

ಸರ್ಕಾರದ ನಿಷ್ಕ್ರಿಯತೆ, ಕೋರ್ಟ್ ವಿಳಂಬ ಧೋರಣೆಯೇ

ಅತ್ಯಾಚಾರ ಪ್ರಕರಣ ಹೆಚ್ಚಾಗಲು ಕಾರಣ

ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆರೋಪ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಮಾತನಾಡಿದರು. ಜಿಲ್ಲಾಧ್ಯಕ್ಷ ಸಂಜಂಯ್ ಮಲ್ಲಪ್ಪ ಉಪಸ್ಥಿತರಿದ್ದರು

ಜೈಲಿನೊಳಗೆ ಬೀಡಿ, ಸಿಗರೇಟ್, ಗಾಂಜಾ, ಡ್ರಗ್ಸ್ ಎಲ್ಲವೂ ಸಿಗುತ್ತೆ..!

ನಟ ದರ್ಶನ್‌ಗಿಂತ ಮೊದಲು ಪ್ರಕರಣವೊಂದರ ಸಂಬಂಧ ಪರಪ್ಪನ ಅಗ್ರಹಾರ ಜೈಲಿನಲ್ಲಿ ನಾನು 16 ದಿನ ಇದ್ದೆ. ಅಲ್ಲಿ ಬೀಡಿ, ಸಿಗರೇಟ್, ಡ್ರಗ್ಸ್, ಗಾಂಜಾ ಎಲ್ಲವೂ ಸಿಗುತ್ತೆ ಎಂದು ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಹೇಳಿದರು. ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೊಲೆ ಆರೋಪದಡಿ ಬಂಧಿಯಾಗಿರುವ ನಟ ದರ್ಶನ್ ರಾಜಾತಿಥ್ಯ ಕುರಿತು ಪ್ರತಿಕ್ರಿಯಿಸಿ, ಜೈಲಿನಲ್ಲಿ ಎಲ್ಲವೂ ಸಿಗುತ್ತೆ. ಇದಕ್ಕೆ ಅಲ್ಲಿನ ಸಾಮಾನ್ಯ ಕಾನ್‌ಸ್ಟೆಬಲ್‌ಗಳನ್ನು ಸಸ್ಪೆಂಡ್ ಮಾಡುತ್ತಾರೆ ವಿನಹಃ ಜೈಲರ್‌ಗಳಿಗೆ ಏನೂ ಮಾಡುವುದಿಲ್ಲ. ಜೈಲಿನೊಳಗೆ ಏನೇ ಹೋಗಬೇಕಾದರೂ ಜೈಲರ್ ಮೂಲಕವೇ ಹೋಗಬೇಕು. ದರ್ಶನ್ ಬಗೆಗಿಂತ ಜೈಲಿನೊಳಗೆ ದೊಡ್ಡ ಮಾಫಿಯಾಗಳು ನಡೆಯುತ್ತವೆ ಎಂದರು. ನೂರಾರು ಜನರ ಸಾವಿಗೆ ಕಾರಣನಾಗಿದ್ದ ಟೆರರಿಸ್ಟ್ ಮದನಿಯನ್ನು ಎಸಿ ರೂಂನಲ್ಲಿ ಕೂರಿಸಿ ಯಾರ‍್ಯಾರೋ ಭೇಟಿಯಾಗುತ್ತಿದ್ದರು. ನಮ್ಮ ರಾಜಕಾರಣಿಗಳಿಗೆ ದೇಶದ ಸುರಕ್ಷತೆಗಿಂತ ತಮ್ಮ ಕುರ್ಚಿಯ ಸುರಕ್ಷತೆಯೇ ಮುಖ್ಯವಾಗಿದೆ. ಜೈಲುಗಳು ಪರಿವರ್ತನಾ ಕೇಂದ್ರಗಳಾಗಿಲ್ಲ. ಈ ವ್ಯವಸ್ಥೆ ಜನಸಾಮಾನ್ಯರಿಂದಲೇ ಬದಲಾಗಬೇಕು ಎಂದು ವಿಷಾದಿಸಿದರು.

ಮೈಸೂರು, ಆ.26(ಎಂಕೆ)– ಉಡುಪಿ ಜಿಲ್ಲೆಯ ಕಾರ್ಕಳದಲ್ಲಿ ಎರಡು ದಿನಗಳ ಹಿಂದೆ ಯುವತಿ ಮೇಲೆ ನಡೆದ ಅತ್ಯಾಚಾರವನ್ನು ಶ್ರೀರಾಮಸೇನೆ ಖಂಡಿಸಲಿದ್ದು, ಈ ಕೃತ್ಯಕ್ಕೆ ರಾಜ್ಯ ಸರ್ಕಾರ, ಪೊಲೀಸ್ ಇಲಾಖೆ ಹಾಗೂ ನ್ಯಾಯಾಲಯದ ವಿಳಂಬ ಧೋರಣೆಯೇ ಕಾರಣ ಎಂದು ಶ್ರೀರಾಮಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಆರೋಪಿಸಿದರು.

ಮೈಸೂರಿನಲ್ಲಿ ಸೋಮವಾರ ಪ್ರತಿಕಾಗೋಷ್ಠಿ ನಡೆಸಿದ ಅವರು, ಪರಿಚಯವಾದ ಮೂರೇ ತಿಂಗಳಲ್ಲಿ ಹುಡುಗಿಗೆ ಡ್ರಗ್ಸ್ ನೀಡಿ, ಮತ್ತು ಬರಿಸಿ ಅತ್ಯಾಚಾರ ವೆಸಗಲಾಗಿದೆ. ಡ್ರಗ್ ಮಾಫಿಯಾ ಇಡೀ ಕರ್ನಾಟಕದಲ್ಲಿ ನಡೆಯುಬೇಕಾದರೆ, ಅದರಲ್ಲಿ ಒಂದು ಕೈ ಪೊಲೀಸರದ್ದೆ. ಸರ್ಕಾರಕ್ಕೆ ಗೊತ್ತಿಲ್ಲದೆ ಡ್ರಗ್ ಮಾಫಿಯಾ ನಡೆಯಲು ಸಾಧ್ಯವೇ ಇಲ್ಲ. ಹಿಂದೂ ಹುಡುಗಿಯರ ಮೇಲಾಗುತ್ತಿರುವ ಅತ್ಯಾಚಾರಕ್ಕೆ ಕಾಂಗ್ರೆಸ್‌ನ ಮುಸ್ಲಿಂ ಓಲೈಕೆ ರಾಜಕಾರಣ ಹಾಗೂ ಇಂತಹ ಕೃತ್ಯಗಳು ನಡೆದಾಗ ನ್ಯಾಯಾಲಯದಲ್ಲಾಗುವ ವಿಳಂಬ ಧೋರಣೆಯೂ ಅತ್ಯಾಚಾರ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗಿದೆ. ಇವತ್ತು ಮಹಿಳೆಯರ ಅಸುರಕ್ಷತೆಗೆ ರಾಜಕಾರಣ, ನ್ಯಾಯಾಲಯ, ಪೊಲೀಸ್ ಇಲಾಖೆ ನೇರ ಕಾರಣ ಎಂದು ಕಿಡಿಕಾರಿದರು.

ಹುಬ್ಬಳ್ಳಿಯ ನೇಹಾ ಕೊಲೆ ಪ್ರಕರಣವನ್ನು 120 ದಿನಗಳಲ್ಲಿ ಮುಕ್ತಾಯಗೊಳಿಸಿ, ನ್ಯಾಯ ದೊರಕಿಸಿಕೊಡುತ್ತೇವೆ ಎಂದು ಮುಖ್ಯಮಂತ್ರಿಗಳು ಹೇಳಿದ್ದರು. ಆದರೆ, ಇಲ್ಲಿಯವರೆಗೂ ಏನೂ ಆಗಿಲ್ಲ. ರಾಜ್ಯದ ಗೃಹ ಮಂತ್ರಿಗಳಂತೂ ಬರಿ ಕಠಿಣ ಕ್ರಮ ತೆಗೆದುಕೊಳ್ಳುತ್ತೇವೆ ಎನ್ನುವುದು ಬಿಟ್ಟರೆ ಬೇರೆನೂ ಹೇಳುತ್ತಿಲ್ಲ. ಬಿಜೆಪಿಯವರೂ ಇದೇ ಹೇಳುತ್ತಿದ್ದರು. ಉಡುಪಿ ಜಿಲ್ಲೆಯ ಜಮಾತೆ ಇಸ್ಲಾಂ ಅಧ್ಯಕ್ಷರು, ಅತ್ಯಾಚಾರಿಗಳು ಸ್ಥಳೀಯರಲ್ಲ ಎನ್ನುತ್ತಿದ್ದಾರೆ. ಅವರು ಸ್ಥಳೀಯರಲ್ಲದಿದ್ದರೂ ಮುಸ್ಲಿಂರಲ್ಲವೇ. ಉತ್ತರಪ್ರದೇಶದಲ್ಲಿ ಅಪರಾಧಿ ಮನೆಗಳನ್ನು ಬುಲ್ಡೋಜರ್‌ನಿಂದ ಕೆಡವುವಂತೆ ಇಲ್ಲಿಯೂ ಅತ್ಯಾಚಾರಿಗಳ ಮನೆಗಳನ್ನು ಬುಲ್ಡೋಜರ್‌ನಿಂದ ಕಿತ್ತುಹಾಕಿಸಬೇಕು ಎಂದು ಆಗ್ರಹಿಸಿದರು.

ಕೂಡಲೇ ಜಾರಿಗೆ ತನ್ನಿ: ಪ್ರಧಾನ ಮಂತ್ರಿಗಳು ಮಹಿಳೆಯರ ಸುರಕ್ಷತೆ ಹೊಸ ಕಾನೂನು ರಚನೆ ಮಾಡುತ್ತೇವೆ ಎಂದಿದ್ದಾರೆ. ಆದರೆ ಅವರ ಮಾತು ಬರಿ ಹೇಳಿಕೆಯಾಗಿ ಉಳಿಯದೆ ಕೂಡಲೇ ಜಾರಿಯಾಗಬೇಕು. ಕಳೆದ 7 ತಿಂಗಳಲ್ಲಿ ಕರ್ನಾಟಕದಲ್ಲೇ ಸುಮಾರು 340 ಹುಡುಗಿಯರ ಮೇಲೆ ಅತ್ಯಾಚಾರವಾಗಿದೆ ಆದ್ದರಿಂದ ಪ್ರಧಾನಿಗಳು ಮಹಿಳೆಯರ ಸುರಕ್ಷತೆಗಾಗಿ ಹೊಸ ಕಾನೂನುಗಳನ್ನು ಕೂಡಲೇ ಜಾರಿಗೊಳಿಸಬೇಕು ಎಂದು ಒತ್ತಾಯಿಸಿದರು.

ಡೆಂಜರ್ ಬೋರ್ಡ್ ರದ್ದು ಮಾಡಿ!: ಇತ್ತೀಚೆಗೆ ಪಾರ್ಲಿಮೆಂಟ್‌ನಲ್ಲಿ ವಕ್ಫ್ ಬೋರ್ಡ್‌ಗೆ 40 ತಿದ್ದುಪಡಿ ಮಾಡುತ್ತೇವೆ ಎಂದಿರುವುದು ಸ್ವಾಗತಾರ್ಹ. ವಕ್ಫ್ ಬೋರ್ಡ್ ಎಂಬುದೇ ಡೆಂಜರ್ ಬೋರ್ಡ್. ತಿದ್ದುಪಡಿ ಮಾಡುವುದಲ್ಲ ಸಂಪೂರ್ಣವಾಗಿ ರದ್ದು ಮಾಡಬೇಕು. ಈಗಾಗಲೇ ಕೇಂದ್ರ ಮತ್ತು ರಾಜ್ಯ ಸರ್ಕಾರದಿಂದ ಸಾಕಷ್ಟು ಸಾಲ–ಸೌಲಭ್ಯಗಳನ್ನು ಮುಸ್ಲೀಮರಿಗೆ ನೀಡಲಾಗುತ್ತಿದೆ. ರಾಜ್ಯ ಕಾಂಗ್ರೆಸ್ ಸರ್ಕಾರವಂತೂ ಅವರಿಗಾಗಿಯೇ ಇದೆ. ವಕ್ಫ್ ಬೋರ್ಡ್ ಮಾಜಿ ಅಧ್ಯಕ್ಷ ಶಾಫಿ ಸಅದಿ, ವಿಧಾನಸೌಧವೇ ವಕ್ಫ್ ಬೋರ್ಡ್ ಆಸ್ತಿ ಎಂದಿದ್ದರು. ಮುಂದಿನ ದಿನಗಳಲ್ಲಿ ಇಡೀ ಭಾರತವೇ ವಕ್ಫ್ ಬೋರ್ಡ್‌ನದ್ದು ಎಂದರೆ ಅಚ್ಚರಿ ಇಲ್ಲ. ಆದ್ದರಿಂದ ವಕ್ಫ್ ಬೋರ್ಡ್‌ಗೆ ತಿದ್ದುಪಡಿಯಲ್ಲ ರದ್ದುಮಾಡುವುದು ಸೂಕ್ತ ಎಂದರು.

ಲವ್ ಜಿಹಾದ್ ಸಹಾಯವಾಣಿ ಸಂಚಲನ: ಶ್ರೀರಾಮಸೇನೆ ವತಿಯಿಂದ ಲವ್‌ಜಿಹಾದ್‌ಗೆ ಸಹಾಯವಾಣಿ ಮಾಡಿದ್ದು, ರಾಜ್ಯಾದ್ಯಂತ ಸಹಾಯವಾಣಿ ಸಂಚಲನ ಮೂಡಿಸಿದೆ. ಸಾವಿರಾರು ಕರೆಗಳು ಬಂದಿದ್ದು, ಸುಮಾರು 32 ಹುಡುಗಿಯರನ್ನು ವಾಪಸ್ ಕರೆತಂದು ಅವರ ಕುಟುಂಬದೊಂದಿಗೆ ಸೇರಿಸಲಾಗಿದೆ. ಸಹಾಯವಾಣಿ ಕುರಿತ ಪ್ರಚಾರ ಮಾಡುತ್ತಿದ್ದ ಶ್ರೀರಾಮಸೇನೆಯ 23 ಪದಾಧಿಕಾರಿಗಳ ಫೇಸ್‌ಬುಕ್ ಖಾತೆಯನ್ನು ಬ್ಲಾಕ್ ಮಾಡಿರುವುದಲ್ಲದೆ ಬೆದರಿಕೆಗಳನ್ನು ಹಾಕಲಾಗಿದೆ. ಇದರಿಂದ ಲವ್ ಜಿಹಾದ್ ಜೀವಂತವಾಗಿದೆ ಎಂಬುದು ಸ್ಪಷ್ಟವಾಗಿದೆ. ದೇಶದಲ್ಲಿ ಇಸ್ಲಾಂ ಸ್ಥಾಪನೆಯ ಉದ್ದೇಶಗಳಲ್ಲಿ ಲವ್ ಜಿಹಾದ್ ಕೂಡ ಒಂದಾಗಿದೆ ಎಂದು ತಿಳಿಸಿದರು.

ಎಚ್ಚರಿಕೆ ಸಂದೇಶ: ಕಳೆದ 20 ವರ್ಷದಲ್ಲಿ ಶ್ರೀರಾಮಸೇನೆ ಲವ್ ಜಿಹಾದ್‌ಗೆ ಸಿಲುಕಿದ್ದ ಸುಮಾರು 4,700 ಹುಡುಗಿಯರನ್ನು ವಾಪಸ್ ಕರೆತಂದಿದೆ. ಅದರಲ್ಲಿ ಜೈನ ಸಮುದಾಯದ 700, ಬ್ರಾಹ್ಮಣ ಸಮುದಾಯದ 300 ಹುಡುಗಿಯರಿದ್ದಾರೆ. ದೇಶದ ಭದ್ರತೆಗಾಗಿ, ಮಠ–ಮಾನ್ಯಗಳು ಉಳಿಯಬೇಕಾದರೆ ಸ್ವಾಮೀಜಿಗಳು ತಮ್ಮ ಪ್ರವಚನದಲ್ಲಿ ಲವ್ ಜಿಹಾದ್ ಕುರಿತು ತಿಳಿಸಿ, ಎಚ್ಚರಿಕೆಯಿಂದಿರುವಂತೆ ತಿಳಿಸಬೇಕು. ಇಲ್ಲದಿದ್ದರೆ ಅವರ ಮಠಗಳ ಮುಂದೆಯೇ ಧರಣಿ ಕೂರಲಾಗುವುದು ಎಂದು ಎಚ್ಚರಿಸಿದರು. ಶ್ರೀರಾಮ ಸೇನೆ ಜಿಲ್ಲಾಧ್ಯಕ್ಷ ಸಂಜಂಯ್ ಮಲ್ಲಪ್ಪ ಉಪಸ್ಥಿತರಿದ್ದರು.

ದಸರಾ ಗಜಪಡೆಯ ನಾಯಕ ಅಭಿಮನ್ಯುಗೆ ಮಜ್ಜನ



ದಸರಾ ಗಜಪಡೆಯ ನಾಯಕ ಅಭಿಮನ್ಯುವಿಗೆ ಸೋಮವಾರ ಅರಮನೆ ಆವರಣದಲ್ಲಿ ಕಾವಾಡಿಗಳು ಮಹಾಮಜ್ಜನ ಮಾಡಿಸಿದರು

ಜಮ್ಮು–ಕಾಶ್ಮೀರ ಚುನಾವಣೆ: 15 ಅಭ್ಯರ್ಥಿಗಳ ಪರಿಷ್ಕೃತ ಪಟ್ಟಿ ಬಿಡುಗಡೆ ಮಾಡಿದ ಬಿಜೆಪಿ

ಶ್ರೀನಗರ: ಜಮ್ಮು–ಕಾಶ್ಮೀರ ವಿಧಾನ ಸಭಾ ಚುನಾವಣೆಗೆ ಬಿಜೆಪಿ 15 ಅಭ್ಯರ್ಥಿಗಳ ಪರಿಷ್ಕೃತ ಅಭ್ಯರ್ಥಿಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಕೇಂದ್ರಾಡಳಿತ ಪ್ರದೇಶದಲ್ಲಿ ಮೂರು ಹಂತಗಳಲ್ಲಿ ಚುನಾವಣೆ ನಡೆಯಲಿದ್ದು, ಮೊದಲ ಹಂತದ ಚುನಾವಣೆಗೆ ಮಾತ್ರ ಬಿಜೆಪಿ ಅಭ್ಯರ್ಥಿಗಳನ್ನು ಘೋಷಿಸಿದೆ. ಪರಿಷ್ಕೃತ ಪಟ್ಟಿಯಲ್ಲಿ 15 ಮಂದಿ ಮುಸ್ಲಿಂ ಅಭ್ಯರ್ಥಿಗಳಿದ್ದಾರೆ.

ಇದಕ್ಕೂ ಮುನ್ನ 44 ಅಭ್ಯರ್ಥಿಗಳ ಪಟ್ಟಿಯನ್ನು ಬಿಜೆಪಿ ಬಿಡುಗಡೆ ಮಾಡಿತ್ತು. ಆದರೆ ತಕ್ಷಣವೇ ಅದನ್ನು ಹಿಂಪಡೆದು ಪರಿಷ್ಕೃತ ಪಟ್ಟಿಯನ್ನು ಬಿಡುಗಡೆ ಮಾಡಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಸೆಪ್ಟೆಂಬರ್ 19, 25 ಮತ್ತು ಅಕ್ಟೋಬರ್ 1 ರಂದು ಮೂರು ಹಂತಗಳಲ್ಲಿ ಮತದಾನ ನಡೆಯಲಿದೆ. ಅಕ್ಟೋಬರ್ 4 ರಂದು ಮತಗಳನ್ನು ಎಣಿಕೆ ಮಾಡಲಾಗುತ್ತದೆ. 2019 ರಲ್ಲಿ ಆರ್ಟಿಕಲ್ 370 ರದ್ದುಗೊಂಡ ನಂತರ ಇದೇ ಮೊದಲ ಬಾರಿಗೆ ಕೇಂದ್ರಾಡಳಿತ ಪ್ರದೇಶಗಳಲ್ಲಿ ಚುನಾವಣೆ ನಡೆಯುತ್ತಿದೆ. 2014 ರಲ್ಲಿ ಜಮ್ಮು–ಕಾಶ್ಮೀರದಲ್ಲಿ ಕೊನೆಯದಾಗಿ ವಿಧಾನಸಭಾ ಚುನಾವಣೆಗಳು ನಡೆದಿದ್ದವು. ಬಿಜೆಪಿ 25 ಸ್ಥಾನಗಳಲ್ಲಿ ಗೆದ್ದಿದ್ದರೆ, ಪಿಡಿಪಿ 28, ಎನ್‌ಸಿ 15, ಕಾಂಗ್ರೆಸ್ 12 ಸ್ಥಾನಗಳನ್ನು ಗೆದ್ದಿತ್ತು.

ಉತ್ತಮ ರೀತಿಯಲ್ಲಿ ಸ್ವಚ್ಛತೆ ನಿರ್ವಹಣೆ; ಸಂಘ–ಸಂಸ್ಥೆ, ಶಾಲೆ, ಸರ್ಕಾರಿ ಕಚೇರಿಗೆ ಪ್ರಶಸ್ತಿ



ಮಹಾನಗರ ಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಸೋಮವಾರ ಸ್ವಚ್ಛ ಶ್ರೇಯಾಂಕ ಪ್ರಶಸ್ತಿಗಳನ್ನು ವಿತರಣೆ ಮಾಡಲಾಯಿತು.

ಮೈಸೂರು,ಆ.26(ಪಿಎಂ)– ಸ್ವಚ್ಛ ಸರ್ವೇಕ್ಷಣ–2024ರ ಅಂಗವಾಗಿ ಮೈಸೂರು ಮಹಾನಗರ ಪಾಲಿಕೆ ವತಿಯಿಂದ ನಡೆದ ಸ್ವಚ್ಛ ಶ್ರೇಯಾಂಕ ಮೌಲ್ಯಮಾಪನದಲ್ಲಿ ಪ್ರಥಮ ಹಾಗೂ ದ್ವಿತೀಯ ಸ್ಥಾನಕ್ಕೆ ಆಯ್ಕೆಯಾದ ಸಂಘ–ಸಂಸ್ಥೆ, ಸರ್ಕಾರಿ ಕಚೇರಿ ಹಾಗೂ ಶಾಲೆಗಳಿಗೆ ಪ್ರಮಾಣ ಪತ್ರದೊಂದಿಗೆ ಪ್ರಶಸ್ತಿಗಳನ್ನು ಸೋಮವಾರ ವಿತರಣೆ ಮಾಡಲಾಯಿತು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾನಗರ ಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಹಮ್ಮಿಕೊಂಡಿದ್ದ ಪಾಲುದಾರರ ಸಭೆಯಲ್ಲಿ ಪ್ರಶಸ್ತಿಗಳನ್ನು ವಿತರಣೆ ಮಾಡಲಾಯಿತು. ಆಯಾಯ ಸಂಘ ಸಂಸ್ಥೆ ಪ್ರತಿನಿಧಿಗಳು ಪ್ರಶಸ್ತಿಗಳನ್ನು ಸ್ವೀಕರಿಸಿದರು. ಸ್ವಚ್ಛ ಶಾಲೆ ವಿಭಾಗದಲ್ಲಿ ಸಿಟಿಜನ್ ಕಾನ್ವೆಂಟ್ ಪ್ರಥಮ, ಬಾಹುಸಾರ್ ನಾರಾಯಣ್ ಟ್ರಸ್ಟ್‌ನ ಮಹರ್ಷಿ ಪಬ್ಲಿಕ್ ಸ್ಕೂಲ್ ದ್ವಿತೀಯ ಸ್ಥಾನಕ್ಕೆ ಭಾಜನವಾದವು. ಅಂತೆಯೇ ಸ್ವಚ್ಛ ಹೋಟೆಲ್ ವಿಭಾಗದಲ್ಲಿ ಫಾರ್ಚೂನ್ ಜೆಪಿ ಪ್ಯಾಲೆಸ್ ಪ್ರಥಮ, ಹೋಟೆಲ್ ಸದರನ್ ಸ್ಟಾರ್ ದ್ವಿತೀಯ, ಸ್ವಚ್ಛ ಆಸ್ಪತ್ರೆ ವಿಭಾಗದಲ್ಲಿ ಮೈಸೂರು ಜಿಲ್ಲಾಸ್ಪತ್ರೆ ಪ್ರಥಮ, ಮಣಿಪಾಲ್ ಆಸ್ಪತ್ರೆ ದ್ವಿತೀಯ, ಸ್ವಚ್ಛ ವಸತಿ ಕ್ಷೇಮಾಭಿವೃದ್ಧಿ ಸಂಘದ ವಿಭಾಗದಲ್ಲಿ ಎಸ್‌ಬಿಎಂ ಲೇಔಟ್ ಪ್ರಥಮ, ಬ್ರಿಗೇಡ್ ಮೌಂಟೇನ್ ವ್ಯೂ ಅಪಾರ್ಟ್‌ಮೆಂಟ್ ದ್ವಿತೀಯ, ಸ್ವಚ್ಛ ಸರ್ಕಾರಿ ಕಚೇರಿ ವಿಭಾಗದಲ್ಲಿ ಮೈಸೂರು ರೈಲ್ವೆ ಕಾರ್ಯಾಗಾರ ಪ್ರಥಮ ಹಾಗೂ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಲಿ ಕಚೇರಿ ದ್ವಿತೀಯ ಸ್ಥಾನ ಪಡೆದವು.

ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಸೇರಿದಂತೆ ಇನ್ನಿತರ ಗಣ್ಯರು ಪ್ರಶಸ್ತಿಗಳನ್ನು ವಿತರಣೆ ಮಾಡಿದರು.

ಸ್ವಚ್ಛ ಭಾರತ ಅಭಿಯಾನದ ಸ್ವಚ್ಛ ಸರ್ವೇಕ್ಷಣ್–2024ರ ಸಮೀಕ್ಷೆಯು ಜನವರಿ 2025ರಿಂದ ಪ್ರಾರಂಭವಾಗುತ್ತಿದ್ದು, ಈ ಸಮೀಕ್ಷೆಯ ಮಾರ್ಗಸೂಚಿಯಂತೆ ಪಾಲಿಕೆಯಿಂದ ಈ ಸ್ವಚ್ಛ ಶ್ರೇಯಾಂಕ ಮೌಲ್ಯಮಾಪನ ನಡೆಸಲಾಗಿದೆ. ಈ ಸ್ವಚ್ಛತಾ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಸಂಸ್ಥೆಗಳಿಗೆ ಅಧಿಕಾರಿಗಳು ಮತ್ತು ಸಿಬ್ಬಂದಿ ವರ್ಗ ಖುದ್ದಾಗಿ ಭೇಟಿ ನೀಡಿ ಸ್ವಚ್ಛತೆ ಮತ್ತು ತ್ಯಾಜ್ಯ ವಿಂಗಡಣೆ ಕುರಿತು ಪರಿಶೀಲಿಸಿ, ನಂತರ ಈ ಸಂಬಂಧ ಸಭೆ ನಡೆಸಿ ಅತ್ಯುತ್ತಮ ಸ್ವಚ್ಛತೆ ನಿರ್ವಹಣೆ ಮಾಡುತ್ತಿರುವ ಸಂಸ್ಥೆಗಳನ್ನು ಆಯ್ಕೆ ಮಾಡಲಾಗಿದೆ.

ಗೌರವಾನ್ವಿತ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ, ಮೈಸೂರು

ಪಿ & ಎಸ್.ಸಿ. ಸಂಖ್ಯೆ: 47/2024

ಅರ್ಜಿದಾರರುಗಳು: ಹೆಚ್.ಎನ್. ರವಿಮೂರ್ತಿ, ಬಿನ್ ಲೇಟ್ ನಿಂಗಶೆಟ್ಟಿ, ವಯಸ್ಸು ಸುಮಾರು 48 ವರ್ಷ. ವಾಸ: ಹೆಮ್ಮರಗಾಲ ಗ್ರಾಮ, ದೊಡ್ಡಕೌಲಂದೆ ಹೋಬಳಿ, ನಂಜನಗೂಡು ತಾಲ್ಲೂಕು, ಮೈಸೂರು ಜಿಲ್ಲೆ

ವಿರುದ್ಧ

ಎದುರುದಾರರು: ಇಲ್ಲ

ಪತ್ರಿಕಾ ಪ್ರಕಟಣೆ

ಮೇಲ್ಕಂಡ ಅರ್ಜಿದಾರರು ತಂದೆಯಾದ ನಿಂಗಶೆಟ್ಟಿ ಬಿನ್ ಲೇಟ್ ತೆಳ್ಳಮಾದಶೆಟ್ಟಿ ರವರು ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ, ಹೆಮ್ಮರಗಾಲ ಗ್ರಾಮದಲ್ಲಿ ದಿನಾಂಕ 20–03–2021 ರಂದು ಮರಣ ಹೊಂದಿರುತ್ತಾರೆ. ಅವರ ಜೀವಿತ ಕಾಲದಲ್ಲಿ ದಿನಾಂಕ 06–03–2020 ರಂದು ಈ ಕೆಳಗಿನ ಷೆಡ್ಯೂಲ್ ಸ್ವತ್ತುಗಳನ್ನು ಅರ್ಜಿದಾರರ ಪರವಾಗಿ ವಿಲ್ ಮಾಡಿರುತ್ತಾರೆ. ಇದೀಗ ಮೇಲ್ಕಂಡ ಅರ್ಜಿದಾರರು ಖಾತೆ ವಗೈರೆಗಳಿಗಾಗಿ ಪ್ರೊಬೇಟ್ ಪಡೆಯಲು ಈ ಘನ ನ್ಯಾಯಾಲಯದಲ್ಲಿ ಅರ್ಜಿ ಸಲ್ಲಿಸಿರುತ್ತಾರೆ. ಈ ಸಂಬಂಧ ಯಾವುದೆ ತಂಟೆ ತಕರಾರು ಇದ್ದಲ್ಲಿ ದಿನಾಂಕ 17–9–2024 ರಂದು ಬೆಳಿಗ್ಗೆ 11 ಗಂಟೆಗೆ ಈ ಘನ ನ್ಯಾಯಾಲಯದಲ್ಲಿ ಹಾಜರಾಗಿ ಆಕ್ಷೇಪಣೆ ಸಲ್ಲಿಸತಕ್ಕದ್ದು, ತಪ್ಪಿದ್ದಲ್ಲಿ ತಕರಾರು ಏನು ಇಲ್ಲವೆಂದು ತಿಳಿದು ಏಕಪಕ್ಷೀಯ ಆದೇಶವನ್ನು ಮಾಡುತ್ತದೆ ಎಂದು ತಿಳಿಯತಕ್ಕದ್ದು.

ಷೆಡ್ಯೂಲ್ ಸ್ವತ್ತುಗಳು

1. ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ, ಕುಂಬರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 136/2 ರ ವಿಸ್ತೀರ್ಣ 0.34 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಕೃಷ್ಣಶೆಟ್ಟಿ ರವರ ಜಮೀನು ; ಪಶ್ಚಿಮಕ್ಕೆ: ಮಡಕಯ್ಯನ ನಿಂಗಶೆಟ್ಟಿ ರವರ ಜಮೀನು ; ಉತ್ತರಕ್ಕೆ: ರಾಮಗೋಪಾಲಶೆಟ್ಟಿ ರವರ ಜಮೀನು ; ದಕ್ಷಿಣಕ್ಕೆ: ನೀರಿನ ಹಳ್ಳ.
2. ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ, ಕುಂಬರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 136/2 ರ ವಿಸ್ತೀರ್ಣ 0.17 ಗುಂಟೆ ಜಮೀನಿಗೆ ಚಕ್ಕುಬಂದಿ:– ಪೂರ್ವಕ್ಕೆ: ಚಿಕ್ಕಂಡಯ್ಯ ಶೆಟ್ಟಿ ರವರ ಜಮೀನು ; ಪಶ್ಚಿಮಕ್ಕೆ: ಕೃಷ್ಣಶೆಟ್ಟಿ ರವರ ಜಮೀನು ; ಉತ್ತರಕ್ಕೆ: ಬೆಳ್ಳಶೆಟ್ಟಿ ರವರ ಜಮೀನು ; ದಕ್ಷಿಣಕ್ಕೆ: ನೀರಿನ ಹಳ್ಳ.
3. ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ, ಕುಂಬರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 136/2 ರ ವಿಸ್ತೀರ್ಣ 0.17 ಗುಂಟೆ ಜಮೀನಿಗೆ ಚೆಕ್ಕುಬಂದಿ:– ಪೂರ್ವಕ್ಕೆ : ಚಿಕ್ಕಂಡಯ್ಯಶೆಟ್ಟಿ ರವರ ಜಮೀನು ; ಪಶ್ಚಿಮಕ್ಕೆ ಕೃಷ್ಣಶೆಟ್ಟಿ ರವರ ಜಮೀನು ; ಉತ್ತರಕ್ಕೆ : ಬೆಳ್ಳಶೆಟ್ಟಿ ರವರ ಜಮೀನು ; ದಕ್ಷಿಣಕ್ಕೆ : ನೀರಿನ ಹಳ್ಳ.
4. ಮೈಸೂರು ಜಿಲ್ಲೆ, ನಂಜನಗೂಡು ತಾಲ್ಲೂಕು, ದೊಡ್ಡಕೌಲಂದೆ ಹೋಬಳಿ, ಕುಂಬರಹಳ್ಳಿ ಗ್ರಾಮಕ್ಕೆ ಸೇರಿದ ಸರ್ವೆ ನಂ. 131/4 ರ ವಿಸ್ತೀರ್ಣ 0.18 ಗುಂಟೆ ಜಮೀನಿಗೆ ಚಕ್ಕುಬಂದಿ: ಪೂರ್ವಕ್ಕೆ: ಮಡಕಯ್ಯನ ಸಿದ್ದಶೆಟ್ಟಿ ರವರ ಜಮೀನು ; ಪಶ್ಚಿಮಕ್ಕೆ: ರಾಮಶೆಟ್ಟಿ ರವರ ಜಮೀನು ; ಉತ್ತರಕ್ಕೆ: ಗೋಪಮ್ಮ ರವರ ಜಮೀನು ; ದಕ್ಷಿಣಕ್ಕೆ: ಬೊಚ್ಚಯ್ಯ ಮಾದಶೆಟ್ಟಿ ರವರ ಜಮೀನು.

ಘನ ನ್ಯಾಯಾಲಯದ ಅಪ್ಪಣೆ ಮೇರೆಗೆ
Sd/- Chief Ministerial Officer
District and Sessions Court, Mysuru

ಸಹಿ/– ಎಂ. ಮಹದೇವಸ್ವಾಮಿ
ಅರ್ಜಿದಾರರ ಪರ ವಕೀಲರು
ದಿನಾಂಕ: 6–8–2024, ಮೈಸೂರು

ಶ್ರೀ ವಾಸುದೇವ ಮಹಾರಾಜರ ಆರಾಧನಾ ಮಹೋತ್ಸವ



ಲೈಂಗಿಕ ಮತ್ತು ಗರ್ಭಧಾರಣಾ ತಜ್ಞ ವೈದ್ಯ ಡಾ.ಸಿ.ಶರತ್ ಕುಮಾರ್ ಹಾಗೂ ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಬಿ.ಆರ್.ನಟರಾಜ ಜೋಯಿಸ್ ಅವರಿಗೆ ಜೀವಮಾನ ಸಾಧನೆಗಾಗಿ 'ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ(2024)'ಯನ್ನು ನೀಡಿ ಗೌರವಿಸಲಾಯಿತು.

ಮೈಸೂರು,ಆ.26(ಎಸ್‌ಪಿಎನ್)– ಮೈಸೂರು ಜೆಎಲ್‌ಬಿ ರಸ್ತೆಯ ಐಡಿಯಲ್ ಜಾವಾ ರೋಟರಿ ಸಭಾಂಗಣದಲ್ಲಿ ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ವತಿಯಿಂದ ಶ್ರೀ ವಾಸು ದೇವ ಮಹಾರಾಜ್ ಅವರ 18ನೇ ಆರಾಧನಾ ಮಹೋತ್ಸವ ನಡೆಯಿತು.

ಇದರ ಅಂಗವಾಗಿ ಖ್ಯಾತ ಲೈಂಗಿಕ ಮತ್ತು ಗರ್ಭಧಾರಣಾ ತಜ್ಞ ವೈದ್ಯ ಡಾ.ಸಿ.ಶರತ್ ಕುಮಾರ್ ಹಾಗೂ ಸಂಧ್ಯಾ ಸುರಕ್ಷಾ ಟ್ರಸ್ಟ್ ಅಧ್ಯಕ್ಷ ಬಿ.ಆರ್.ನಟರಾಜ ಜೋಯಿಸ್ ಅವರಿಗೆ ಜೀವಮಾನ ಸಾಧನೆಗಾಗಿ 'ವಾಸುದೇವ ಮಹಾರಾಜ್ ಸದ್ಭಾವನಾ ಪ್ರಶಸ್ತಿ(2024)'ಯನ್ನು ನೀಡಿ ಗೌರವಿಸಲಾಯಿತು. ಪ್ರಶಸ್ತಿಯನ್ನು ವಿತರಿಸಿ ಮಾತನಾಡಿದ ಜಿಲ್ಲಾ ಕಸಾಪ ಅಧ್ಯಕ್ಷ ಮಡ್ಡೀಕೆರೆ ಗೋಪಾಲ್, ಜಗತ್ತಿನ ವಿವಿಧ ರಾಷ್ಟ್ರಗಳ ನಡುವೆ ನಡೆಯುತ್ತಿರುವ 'ಯುದ್ಧಗಳು' ಸಾವಿರ ವರ್ಷಕ್ಕಾಗುವಷ್ಟು ದ್ವೇಷವನ್ನು ಯುವ ಸಮೂಹದ ಮನಸ್ಸಿನಲ್ಲಿ ಬಿತ್ತುತ್ತಿವೆ. ಇದನ್ನು ತಪ್ಪಿಸಲು 'ವಿಶ್ವಸಂಸ್ಥೆ' ಸಕ್ರಿಯವಾಗಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಪ್ರಶಸ್ತಿ ಸ್ವೀಕರಿಸಿ ಮಾತನಾಡಿದ ಲೈಂಗಿಕ ಮತ್ತು ಗರ್ಭಧಾರಣಾ ತಜ್ಞ ಡಾ.ಸಿ.ಶರತ್‌ಕುಮಾರ್, ಫ್ಯಾಮಿಲಿ ಪ್ಲಾನಿಂಗ್ ಮತ್ತು ಹೆಣ್ಣು ಭ್ರೂಣ ಹತ್ಯೆಗಳು ಪ್ರಸ್ತುತ ಸಮಾಜದಲ್ಲಿ ದೊಡ್ಡ ಸಮಸ್ಯೆಯನ್ನು ಸೃಷ್ಟಿಸುತ್ತಿವೆ. ಇದನ್ನು ತಡೆದರೆ ನಮ್ಮ ದೇಶವೂ ಮುಂದಿನ 50 ವರ್ಷ ನೆಮ್ಮದಿಯಿಂದ ಇರಬಹುದು. ಸಮಾಜ ಇಂತಹ ಸಮಸ್ಯೆಗಳಿಂದ ಹೊರಬರದಿದ್ದರೆ ದೇಶದ ಜನಸಂಖ್ಯೆಯಲ್ಲಿ ಯುವಶಕ್ತಿಯ ಪ್ರಮಾಣವನ್ನು ಕಡಿಮೆಗೊಳಿಸುವ, ಅಸಮಾನತೆ ಸೃಷ್ಟಿಸುವ ಸನ್ನಿವೇಶ ಉಂಟಾಗುತ್ತದೆ ಎಂದರು.

ನಂತರ ವಿದ್ವಾನ್ ವಿನಾಯಕ ಹೊನ್ನಾವರ ಅವರು ಕೊಳಲು ವಾದನ ನಡೆಸಿಕೊಟ್ಟರು. ವೇದಿಕೆಯಲ್ಲಿ ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಸ್ಥಾನದ ಸಿಇಒ ಕೆ.ಆರ್.ಯೋಗಾನರಸಿಂಹನ್, ವಿಪ್ರ ಮುಖಂಡ ಕೆ.ರಘುರಾಂ ವಾಜಪೇಯಿ, ಫೌಂಡೇಶನ್ ಕಾರ್ಯಕಾರಿ ಸಮಿತಿ ಸದಸ್ಯ ಎಂ.ಮೋಹನ್, ಶ್ರೀ ವಾಸುದೇವ ಮಹಾರಾಜ್ ಫೌಂಡೇಷನ್ ಅಧ್ಯಕ್ಷ ಗುರುರಾಜ್ ಪೋಶೆಟ್ಟಿಹಳ್ಳಿ, ಎಂ.ವಿ.ನಾಗೇಂದ್ರ ಬಾಬು, ಎನ್.ಅನಂತ್, ಕಸಾಪ ಗೌರವ ಕಾರ್ಯದರ್ಶಿ ಲತಾ ಮೋಹನ್, ಸಂಘಟಕ ಮೈಸೂರು ರಂಗನಾಥ್ ಸೇರಿದಂತೆ ಇತರೆ ಮುಖಂಡರಿದ್ದರು.

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848, E-mail: admnchamul@gmail.com

ಪತ್ರಿಕಾ ಪ್ರಕಟಣೆ

2023–2024 ನೇ ಸಾಲಿನ ವಾರ್ಷಿಕ ಸಾಮಾನ್ಯ ಸಭೆಯ ಸೂಚನಾ ಪತ್ರ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟದ **2023–2024 ನೇ ಸಾಲಿನ ಸರ್ವ ಸದಸ್ಯರ ವಾರ್ಷಿಕ ಸಾಮಾನ್ಯ ಸಭೆಯನ್ನು ದಿನಾಂಕ 31.08.2024 ರ ಶನಿವಾರ ಬೆಳಿಗ್ಗೆ 11.00 ಗಂಟೆಗೆ ಒಕ್ಕೂಟದ ಆಡಳಿತ ಕಛೇರಿ ಆವರಣ, ಕುದೇರು ಗ್ರಾಮ, ಚಾಮರಾಜನಗರ ಜಿಲ್ಲೆ ಇಲ್ಲಿ ಒಕ್ಕೂಟದ ಮಾನ್ಯ ಅಧ್ಯಕ್ಷರಾದ** ಶ್ರೀ.ವೈ.ಸಿ.ನಾಗೇಂದ್ರ ರವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದ್ದು, ಸದಸ್ಯ ಹಾಲು ಉತ್ಪಾದಕರ ಸಹಕಾರ ಸಂಘಗಳ ಪ್ರತಿನಿಧಿಗಳು ಸಭೆಗೆ ಸಕಾಲದಲ್ಲಿ ಹಾಜರಾಗಬೇಕಾಗಿ ಕೋರಿದೆ. ಪೂರ್ಣ ವಿವರಗಳನ್ನೊಳಗೊಂಡ ಸೂಚನಾ ಪತ್ರವನ್ನು ಎಲ್ಲಾ ಸದಸ್ಯ ಸಂಘಗಳಿಗೆ ಅಂಚೆ/ಮುದ್ದಾಂ ಮೂಲಕ ಕಳುಹಿಸಿಕೊಡಲಾಗಿದೆ. ಸೂಚನಾ ಪತ್ರ ತಲುಪದಿದ್ದಲ್ಲಿ ಇದನ್ನೆ ಸಾಮಾನ್ಯ ಸಭೆಯ ಅಧಿಕೃತ ಸೂಚನಾ ಪತ್ರವೆಂದು ಪರಿಗಣಿಸುವುದು.

ಆಡಳಿತ ಮಂಡಳಿ ಅಪ್ಪಣೆ ಮೇರೆಗೆ
ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ

ಕುದೇರು ಗ್ರಾಮ ಮತ್ತು ಅಂಚೆ, ಸಂತೇಮರಹಳ್ಳಿ ಹೋಬಳಿ, ಚಾಮರಾಜನಗರ - 571 316
ದೂರವಾಣಿ :08226-234848, E-mail: enggchamul@gmail.com

ಸಂಖ್ಯೆ: ಚಾಮುಲ್/ಇಂಜಿ/2024–25 ದಿನಾಂಕ:26.08.2024

ದರ ಪಟ್ಟಿ ಆಹ್ವಾನ

ಚಾಮರಾಜನಗರ ಜಿಲ್ಲಾ ಸಹಕಾರಿ ಹಾಲು ಒಕ್ಕೂಟದ ಆವರಣದಲ್ಲಿ ನೂತನವಾಗಿ **10 KLD** ಸಾಮರ್ಥ್ಯದ ಐಸ್ ಕ್ರೀಮ್ ಘಟಕವನ್ನು ಸ್ಥಾಪಿಸಲು ಕ್ರಮ ಕೈಗೊಂಡಿದ್ದು, ಈ ಸಂಬಂಧ ಕಟ್ಟಡ ಕಾಮಗಾರಿ, ಯಂತ್ರೋಪಕರಣಗಳ ಅಳವಡಿಕೆಗೆ ಆಗುವ ಖರ್ಚು ವೆಚ್ಚಗಳ ವಿವರವಾದ **Detailed Project Report (DPR)** ಅನ್ನು ಸಿದ್ದಪಡಿಸಿ ನೀಡಲು ಅರ್ಹ ಸಮಾಲೋಚಕರಿಂದ ದರ ಪಟ್ಟಿಯನ್ನು ಆಹ್ವಾನಿಸಲಾಗಿದೆ. ಬಿಡ್‌ದಾರರು ದರಪಟ್ಟಿಗಳನ್ನು **(Hard Copy of Quotation)** **ದಿನಾಂಕ:03.09.2024 ರಂದು ಸಂಜೆ 05:00** ಗಂಟೆಯೊಳಗೆ ಒಕ್ಕೂಟಕ್ಕೆ ಸಲ್ಲಿಸಲು ಕೋರಿದೆ. ವಾಣಿಜ್ಯ ಬಿಡ್ಡ್ ಅನ್ನು **ದಿನಾಂಕ:04.09.2024 ರಂದು ಬೆಳಿಗ್ಗೆ 11:00** ಗಂಟೆಗೆ ತೆರೆಯಲಾಗುವುದು. ತಾಂತ್ರಿಕ ಗೊತ್ತುಪಾಡುಗಳು, ಅರ್ಹತೆಗಳು ಮತ್ತು ಹೆಚ್ಚಿನ ಮಾಹಿತಿಗಾಗಿ ತಾಂತ್ರಿಕ ವಿಭಾಗದ ವ್ಯವಸ್ಥಾಪಕರನ್ನು ಕಛೇರಿ ಸಮಯದಲ್ಲಿ ಸಂಪರ್ಕಿಸಬಹುದಾಗಿದೆ. **(ಮೊ.ಸಂ 7760968414)**

ಸಹಿ/–
ವ್ಯವಸ್ಥಾಪಕ ನಿರ್ದೇಶಕರು

ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ

ಸತ್ತಿ ರಸ್ತೆ ಚಾಮರಾಜನಗರ–571313
ಇಮೇಲ್: apmccrnagar@rediffmail.com,apmccrnagar@gmail.com,
ದೂ: 08226-222103,225665

ಸಂಖ್ಯೆ: ಕೃಉಮಾಸ [ಚಾ] : 307 : 2024–25 ದಿನಾಂಕ : 22/08/2024

"ಪ್ರಕಟಣೆ"

ಚಾಮರಾಜನಗರ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಯ ಮುಖ್ಯ ಮಾರುಕಟ್ಟೆ ಪ್ರಾಂಗಣ ಹಾಗೂ ಅರಿಶಿಣ ಮಾರುಕಟ್ಟೆ ಪ್ರಾಂಗಣಗಳಲ್ಲಿ ಖಾಲಿ ಇರುವ ಗೋದಾಮುಗಳನ್ನು ಲೈಸೆನ್ಸ್ ಪಡೆದ ಪೇಟೆ ಕಾರ್ಯಕರ್ತರುಗಳಿಗೆ ಕರ್ನಾಟಕ ಕೃಷಿ ಉತ್ಪನ್ನ ಮಾರುಕಟ್ಟೆ ವ್ಯವಹಾರ (ಮಾರುಕಟ್ಟೆ ಪ್ರಾಂಗಣದಲ್ಲಿ ಸ್ವತ್ತಿನ ಹಂಚಿಕೆ ನಿಯಂತ್ರಣ) ನಿಯಮಗಳು 2004 ರ ನಿಯಮ 13 ರನ್ವಯ ಗರಿಷ್ಠ 55 ತಿಂಗಳ ಅವಧಿಗೆ ಪ್ರತಿ 11 ತಿಂಗಳಿಗೊಮ್ಮೆ ನವೀಕರಿಸುವ ಹಾಗೂ 33 ತಿಂಗಳುಗಳ ನಂತರ ಶೇ.5 ರಷ್ಟು ಲೀವ್ & ಲೈಸೆನ್ಸ್ ಶುಲ್ಕ ಹೆಚ್ಚಿಸುವ ಷರತ್ತುಗೊಳಪಟ್ಟು ಮತ್ತು ಮೂಲೆ ನಿವೇಶನದಲ್ಲಿರುವ ಕಟ್ಟಡ 02 ಸಂಖ್ಯೆ ಸಣ್ಣ ಅಂಗಡಿ ಮಳಿಗೆಗಳ ಪೈಕಿ ಅಂಗಡಿ ಮಳಿಗೆ ಸಂಖ್ಯೆ 1 ನ್ನು ಟೆಂಡರ್–ಕಂ–ಬಹಿರಂಗ ಹರಾಜಿನ ಮೂಲಕ ಹಂಚಿಕೆ ಮಾಡಲು ಅರ್ಜಿಗಳನ್ನು ಆಹ್ವಾನಿಸಲಾಗಿದೆ.

ಕ್ರ.ಸಂ.	ಕಟ್ಟಡಗಳ ವಿವರ	ಭದ್ರತಾ ಠೇವಣಿ	ಮಾಸಿಕ ಲೀವ್ & ಲೈಸೆನ್ಸ್ ಶುಲ್ಕ
	ಚಾಮರಾಜನಗರ ಮುಖ್ಯ ಮಾರುಕಟ್ಟೆ ಪ್ರಾಂಗಣ		
1.	16 ಸಂಖ್ಯೆ ಸಣ್ಣ ಅಂಗಡಿ ಮಳಿಗೆಗಳ ಪೈಕಿ 2, 3 & 4 (ಮಳಿಗೆ ಸಂಖ್ಯೆ 4 ನ್ನು ರೈತ ಉತ್ಪಾದಕ ಸಹಕಾರ ಸಂಘದವರಿಗೆ ಮೀಸಲಿರಿಸಿದೆ)	5000–00	2327–00
2.	16 ಸಂಖ್ಯೆ ಸಣ್ಣ ಅಂಗಡಿ ಮಳಿಗೆಗಳ ಪೈಕಿ 7, 8, 9 (ಮಳಿಗೆ ಸಂಖ್ಯೆ 9ನ್ನು ಪರಿಶಿಷ್ಟ ಜಾತಿಗೆ ಮೀಸಲಿರಿಸಿದೆ)	9308–00	4654–00
3.	07 ಸಂಖ್ಯೆ ಸಣ್ಣ ಅಂಗಡಿ ಮಳಿಗೆಗಳು 1, 2, 3, 4, 5, 6, 7 (ಮಳಿಗೆ ಸಂಖ್ಯೆ 1 ನ್ನು ಸಾಮಾನ್ಯ ಮಹಿಳೆ ಮಳಿಗೆ ಸಂಖ್ಯೆ 2 ನ್ನು ಪ.ಪಂಗಡಕ್ಕೆ & ಮಳಿಗೆ ಸಂಖ್ಯೆ 3ನ್ನು ರೈತ ಉತ್ಪಾದಕ ಸಹಕಾರ ಸಂಘದವರಿಗೆ ಮೀಸಲಿರಿಸಿದೆ)	5000–00	2271–00
4.	04 ಸಂಖ್ಯೆ ಸಣ್ಣ ಅಂಗಡಿ ಮಳಿಗೆಗಳ ಪೈಕಿ ಅಂಗಡಿ ಮಳಿಗೆ ಸಂಖ್ಯೆ 2 (ಪ.ಜಾತಿಗೆ ಮೀಸಲಿರಿಸಿದೆ)	5000–00	2286–00
5.	05 ಸಂಖ್ಯೆ ಗೋದಾಮುಗಳ ಸಂಕೀರ್ಣ (ಭಾಗ–3) ರ ಗೋದಾಮು	19664–00	9832–00
6.	400 ಎಂ ಟಿ ಸಾಮರ್ಥ್ಯದ ಗೋದಾಮು	94700–00	47350–00
7.	100 ಎಂ ಟಿ ಸಾಮರ್ಥ್ಯದ ಗೋದಾಮು–1 (ಎಸ್. ಸಿ. ಎಸ್. ಪಿ) ಪ.ಜಾ ಮೀಸಲು	–	12690–00
8.	100 ಎಂ ಟಿ ಸಾಮರ್ಥ್ಯದ ಗೋದಾಮು–2 (ಎಸ್.ಸಿ. ಎಸ್.ಪಿ) ಪ.ಜಾ ಮೀಸಲು	–	12690–00
	ಟೆಂಡರ್–ಕಂ–ಬಹಿರಂಗ ಹರಾಜು ಮೂಲಕ ಹಂಚಿಕೆ ಮಾಡುವ ಕಟ್ಟಡದ ವಿವರ		
9.	02 ಸಂಖ್ಯೆ ಸಣ್ಣ ಅಂಗಡಿ ಮಳಿಗೆಗಳ ಪೈಕಿ ಅಂಗಡಿ ಮಳಿಗೆ ಸಂಖ್ಯೆ 1	5000–00	2313–00
	ಚಾಮರಾಜನಗರ ಅರಿಶಿಣ ಮಾರುಕಟ್ಟೆ ಪ್ರಾಂಗಣ		
10.	1000 ಎಂ. ಟಿ ಸಾಮರ್ಥ್ಯದ ಗೋದಾಮು:	188278–00	94139–00
11.	100 ಎಂ. ಟಿ ಸಾಮರ್ಥ್ಯದ ಗೋದಾಮು (ಟಿ.ಎಸ್.ಪಿ) ಪ.ಪಂ ಮೀಸಲು	–	17515–00
12.	200 ಎಂ.ಟಿ ಸಾಮರ್ಥ್ಯದ ಅರಿಶಿಣ ಸಂಸ್ಕರಣಾ ಗೋದಾಮು–01	50496–00	25248–00

1) ಗೋದಾಮನ್ನು ಪಡೆಯಲಿಚ್ಛಿಸುವ ಪೇಟೆ ಕಾರ್ಯಕರ್ತರು ರೂ. 150–00 ಗಳನ್ನು ಪಾವತಿಸಿ ನೊಂದಣಿ ಮಾಡಿಕೊಂಡು ರೂ. 300–00 (ತೆರಿಗೆ ಪ್ರತ್ಯೇಕ) ಗಳನ್ನು ಪಾವತಿಸಿ ನಿಗಧಿತ ಅರ್ಜಿ ಹಾಗೂ ಷರತ್ತು ಮತ್ತು ನಿಬಂಧನೆಗಳ ವಿವರಗಳನ್ನು ಪಡೆಯುವ ಕೊನೆಯ ದಿನಾಂಕ: 13–09–2024

2) ಭರ್ತಿ ಮಾಡಿದ ಅರ್ಜಿ ಹಾಗೂ ಭದ್ರತಾ ಠೇವಣಿಯನ್ನು (ಡಿ ಡಿ) ಈ ಕಛೇರಿಗೆ ಸಲ್ಲಿಸಲು ಕೊನೆಯ ದಿನಾಂಕ: 19–09–2024 ರಂದು ಸಾಯಂಕಾಲ 5–00 ಗಂಟೆ ವರೆಗೆ

3) ಟೆಂಡರ್–ಕಂ–ಬಹಿರಂಗ ಹರಾಜು ನಡೆಸುವ ಕ್ರಸಂ 9 ರ ಅಂಗಡಿ ಮಳಿಗೆಗೆ ಭರ್ತಿ ಮಾಡಿದ ಟೆಂಡರ್ ಫಾರಂನ್ನು ಸಲ್ಲಿಸಲು ಕೊನೆಯ ದಿನಾಂಕ: 20–09–2024 ರಂದು ಮಧ್ಯಾಹ್ನ 2–00 ಗಂಟೆ ಒಳಗೆ ಸಾಧ್ಯವಾದಲ್ಲಿ ಅದೇ ದಿನ ಬಹಿರಂಗ ಹರಾಜು ನಡೆಸಲಾಗುವುದು.

4) ಸರ್ಕಾರದ ಅಧಿಸೂಚನೆಯನ್ವಯ ಮೀಸಲಾತಿ ನೀಡಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ.

5) ಕಟ್ಟಡ ಹಂಚಿಕಯನ್ನು ಅಂಗೀಕರಿಸುವ ಅಥವಾ ತಿರಸ್ಕರಿಸುವ ಹಕ್ಕನ್ನು ಸಮಿತಿಯು ಕಾಯ್ದಿರಿಸಿಕೊಂಡಿರುತ್ತದೆ. ಹೆಚ್ಚಿನ ಮಾಹಿತಿಯನ್ನು ರಜಾ ದಿನಗಳನ್ನು ಹೊರತುಪಡಿಸಿ ಕಛೇರಿ ವೇಳೆಯಲ್ಲಿ ಕಾರ್ಯದರ್ಶಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಚಾಮರಾಜನಗರ ಇವರಿಂದ ಪಡೆದುಕೊಳ್ಳುವುದು.

ಸಹಿ/– (ಪ್ರಕಾಶ್‌ಕುಮಾರ್ ಟಿ.ವಿ.), ಕಾರ್ಯದರ್ಶಿ, ಕೃಉಮಾಸ, ಚಾಮರಾಜನಗರ
ಸಹಿ/– (ಹೆಚ್. ಎನ್ ಮಹದೇವಸ್ವಾಮಿ ಉರುಫ್ ಸೋಮೇಶ್) ಅಧ್ಯಕ್ಷರು ಕೃಉಮಾಸ, ಚಾಮರಾಜನಗರ

ಸಂ:ವಾಸಾಸಂಇ:ಚಾನಗರ:199:2024.25

ನಕ್ಕರೆ ಅದೇ ಸ್ವರ್ಗ

ಗಂಡ : ತರಕಾರಿಗೆ ಅಂತ 1000 ರೂಪಾಯಿ ತಗೊಂಡ್ಯಲ್ಲ ಏನಾಯ್ತು?
ಹೆಂಡತಿ : ಅಯ್ಯೋ, ನಿಮ್ಮಮ್ಮ ಹೇಳಿದ್ದಾರೆ ಸಂಸಾರ ಅಂದ್ಮೇಲೆ ಸಾವಿರ ಬರುತ್ತೆ ಹೋಗುತ್ತೆ ಅದೆಲ್ಲ ಲೆಕ್ಕ ಇಡಬಾರದು ಅಂತ.

ಮೈಸೂರು ಮಿತ್ರ

ಮಂಗಳವಾರ, 27 ಆಗಸ್ಟ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ಅವಳ ಮಾಯೆಗೆ ಹೆಸರಿಡಲಿ ಏನಂತ? ಅವಳು ಬಂದು ಹೋದ ಮೇಲೆ ಬದುಕೆಲ್ಲ ಭಾವ ದಿಗಂತ – ನುಡಿಮುತ್ತು

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಮಾಡಬಾರದ್ದನ್ನು ಮಾಡಿ ತೀರ್ಥಯಾತ್ರೆಗೆ ಹೊರಟಂತೆ.

ನಿಮ್ಮ ಪತ್ರಗಳು

■ ಸುತ್ತೂರಲ್ಲಿ ಏರ್‌ಟೆಲ್ ನೆಟ್‌ವರ್ಕ್ ಸಿಗದೇ ಗ್ರಾಹಕರ ಪರದಾಟ

ಮಾನ್ಯರೆ,

ನಂಜನಗೂಡು ತಾಲೂಕಿನ ಸುತ್ತೂರು ಗ್ರಾಮದಲ್ಲಿ ಏರ್‌ಟೆಲ್ ನೆಟ್‌ವರ್ಕ್ ಸರಿಯಾಗಿ ಸಿಗದೇ ಅನೇಕ ತಿಂಗಳುಗಳಿಂದ ಗ್ರಾಹಕರು ಕಂಗಾಲಾಗಿದ್ದಾರೆ. ಕರೆ ಮಾಡಿದರೆ ನಾವು ಮಾಡುವ ವ್ಯಕ್ತಿಗೆ ತಲುಪದೇ ಬೇರೆಯವರಿಗೆ ಹೋಗುತ್ತದೆ. ಒಂದು ಕಡೆ ಮಾತ್ರ ಮಾತು ಕೇಳುತ್ತದೆ. ಮತ್ತೊಂದು ಕಡೆಯ ಮಾತು ಕೇಳಿಸುವುದೇ ಇಲ್ಲ. ಇಂಟರ್‌ನೆಟ್ 2ಜಿ ಕೂಡ ಕಾರ್ಯ ನಿರ್ವಹಿಸುತ್ತಿಲ್ಲ. ಸುಮ್ಮನೆ ನಿಧಾನವಾಗಿ ಸುತ್ತುತ್ತಿರುತ್ತದೆ. ಇದರಿಂದ ಬೇಸತ್ತು ಇನ್ನಿತರ ಕಂಪನಿಗಳ ಸಿಮ್‌ಗಳಿಗೆ ಪೋರ್ಟ್ ಹೋಗುತ್ತಿದ್ದಾರೆ. ಇದಲ್ಲದೆ ಇತ್ತೀಚಿನ ದಿನಗಳಲ್ಲಿ ರೀಚಾರ್ಜ್ ಹಣವನ್ನು ಕೂಡ ಹೆಚ್ಚಳ ಮಾಡಿದ್ದು ಸರಿ ಅಷ್ಟೇ. ಹಣಕ್ಕೆ ತಕ್ಕಂತೆ ಗ್ರಾಹಕರಿಗೆ ಸೇವೆಯು ಲಭಿಸುತ್ತಿಲ್ಲ. ಒಟ್ಟಿನಲ್ಲಿ ಈ ತೊಂದರೆಯಿಂದ ಏರ್‌ಟೆಲ್ ಗ್ರಾಹಕರು ಹಿಡಿಶಾಪ ಹಾಕುತ್ತಿದ್ದಾರೆ. ಜಾಹೀರಾತುಗಳಲ್ಲಿ 4ಜಿ, 5ಜಿ ಎಂದು ಬೊಬ್ಬೆ ಹೊಡೆದು ರಾರಾಜಿಸುತ್ತ ಪ್ರಚಾರ ಮಾಡುತ್ತಾರೆ. ಆದರೆ ಇತ್ತ ನೆಟ್‌ವರ್ಕ್ ಸಿಗದೇ ಗ್ರಾಹಕರು ಪರದಾಡುತ್ತಿದ್ದಾರೆ. ಸುತ್ತೂರಿನಲ್ಲಿ ಬ್ಯಾಂಕುಗಳು, ಶಾಲಾ, ಕಾಲೇಜುಗಳು, ಗ್ರಾಮ ಪಂಚಾಯಿತಿ, ಆಸ್ಪತ್ರೆಗಳು, ಹಾಸ್ಟೆಲ್‌ಗಳು ಇದ್ದು, ಇಲ್ಲಿಯ ಬಹುಸಂಖ್ಯಾತ ನೌಕರರು ನೆಟ್‌ವರ್ಕ್ ಸಿಗದೇ ಸಂಕಷ್ಟವನ್ನು ಎದುರಿಸುತ್ತಿದ್ದಾರೆ. ಆನ್‌ಲೈನ್ ಕೆಲಸಗಳು ತುಂಬಾ ನಿಧಾನವಾಗಿ ಆಗುತ್ತಿವೆ. ದಯವಿಟ್ಟು ಇದಕ್ಕೆ ಸಂಬಂಧಿಸಿದ ಕಂಪನಿಯ ಅಧಿಕಾರಿಗಳು ತುರ್ತಾಗಿ ನೆಟ್‌ವರ್ಕ್ ಸಮಸ್ಯೆಯನ್ನು ಪರಿಹರಿಸಬೇಕಾಗಿ ಮನವಿ.

–ಪರಶಿವಮೂರ್ತಿ ಎನ್.ಪಿ, ನಂಜೇಪುರ, ಸರಗೂರು ತಾ.

■ ಕುಸಿಯದಿರಲಿ ಪ್ರಶಸ್ತಿಗಳ ಮೌಲ್ಯ

ಮಾನ್ಯರೆ,

ಶಿಕ್ಷಕರ ದಿನಾಚರಣೆಯ ಪ್ರಯುಕ್ತ ಉತ್ತಮ ಕಾರ್ಯ ನಿರ್ವಹಣೆ ತೋರಿದ ಶಿಕ್ಷಕರಿಗೆ ಪ್ರತಿ ವರ್ಷ ಜಿಲ್ಲಾ ಮತ್ತು ರಾಜ್ಯ ಮಟ್ಟದ ಉತ್ತಮ ಶಿಕ್ಷಕ ಪ್ರಶಸ್ತಿ ನೀಡುತ್ತಾ ಬಂದಿರುವುದು ವಾಡಿಕೆ. ಆದರೆ ಇತ್ತೀಚೆಗೆ ಪ್ರಶಸ್ತಿಗಳನ್ನು ಪಡೆಯುತ್ತಿರುವ ಶಿಕ್ಷಕರನ್ನು ಗಮನಿಸಿದಾಗ ಆ ಪ್ರಶಸ್ತಿಗೆ ಆ ಶಿಕ್ಷಕರು ನಿಜವಾಗಿಯೂ ಅರ್ಹರೇ? ಎಂಬ ಅನುಮಾನ ಬಾರದಿರದು. ಉತ್ತಮ ಶಿಕ್ಷಕ ಪ್ರಶಸ್ತಿ ಪಡೆಯಲು ಒಬ್ಬ ಶಿಕ್ಷಕ ಆನ್‌ಲೈನ್‌ನಲ್ಲಿ ಅರ್ಜಿ ಹಾಕಿಕೊಳ್ಳಬೇಕು. ಹಾಗೂ ತನ್ನ ಸ್ವವಿವರ, ಕರ್ತವ್ಯದ ಅವಧಿಯ ಕಾರ್ಯ ಪಾಲನಾ ವರದಿಗಳನ್ನು ಪ್ರಶಸ್ತಿ ನೀಡುವ ಪ್ರಾಧಿಕಾರಕ್ಕೆ ಸಲ್ಲಿಸಬೇಕು. ಇವೆಲ್ಲ ಕೇವಲ ನೆಪಮಾತ್ರಕ್ಕೆ ಅಷ್ಟೇ ಎಂಬ ಮಾತು ಕೇಳಿ ಬರುತ್ತಿದೆ. ನಿಜವಾಗಿಯೂ ಪ್ರಶಸ್ತಿಗೆ ಅರ್ಹ ಶಿಕ್ಷಕ ಇದರ ಗೊಡವೆಗೆ ಹೋಗುವುದಿಲ್ಲ. ಎಲೆಮರೆಕಾಯಿಯಂತೆ ತನ್ನ ಕರ್ತವ್ಯದಲ್ಲಿ ನಿರತನಾಗಿರುತ್ತಾನೆ. ಇಲಾಖೆಯೇ ಅಂತಹ ಶಿಕ್ಷಕರನ್ನು ಗುರುತಿಸಿ, ಪ್ರಶಸ್ತಿಗೆ ಆಯ್ಕೆ ಮಾಡುವಂತೆ ಆಗಬೇಕು. ಅದನ್ನು ಬಿಟ್ಟು ಇತ್ತೀಚೆಗೆ ಹೆಚ್ಚಾಗಿ ಅಧಿಕಾರಿಗಳ, ರಾಜಕಾರಣಿಗಳ, ಸಂಘ–ಸಂಸ್ಥೆಯವರ ಬಾಲ ಹಿಡಿಯುವ ಅನರ್ಹ ಶಿಕ್ಷಕರಿಗೆ ಪ್ರಶಸ್ತಿ ನೀಡಲಾಗುತ್ತಿದೆ. ಈ ಮೂಲಕ ಆ ಪ್ರಶಸ್ತಿಗಳ ಮೌಲ್ಯವು ಕುಸಿಯುತ್ತಿದೆ. ಇದು ಬದಲಾಗಬೇಕು. ಪ್ರಶಸ್ತಿಗೆ ಆಯ್ಕೆ ಮಾಡುವ ಸಮಿತಿಯು ನಿಷ್ಪಕ್ಷಪಾತವಾಗಿ ಯಾವುದೇ ಆಮಿಷ ಮತ್ತು ಒತ್ತಡಕ್ಕೆ ಒಳಗಾಗದೆ, ಉತ್ತಮ ಶಿಕ್ಷಕರನ್ನು ಆಯ್ಕೆ ಮಾಡುವಂತಹ ದಿಟ್ಟ ಧೈರ್ಯವನ್ನು ಈ ಸಲವಾದರೂ ತೋರುವರೇ? ಕಾದು ನೋಡಬೇಕು.

– ದೇವರಹಳ್ಳಿ ಲೋಕೇಶ್, ಪಾಂಡವಪುರ.

■ ಸಾಮರಸ್ಯ ಕಾಪಾಡಿ

ಮಾನ್ಯರೆ,

ಆ. 24 ರಂದು ಕರ್ನಾಟಕ ಜನರಂಗ ನೇತೃತ್ವದಲ್ಲಿ ಮೈಸೂರಿನ ಚಿಕ್ಕಗಡಿಯಾರದ ಬಳಿ ನಡೆದ ಅಹೋರಾತ್ರಿ ಪ್ರತಿಭಟನೆ ಸಂದರ್ಭದಲ್ಲಿ ಕನ್ನಡದ ಖ್ಯಾತ ಸಂಗೀತ ನಿರ್ದೇಶಕರಾದ ಹಂಸಲೇಖರವರು ಮಾತನಾಡುತ್ತಾ ಪ್ರಜಾಪ್ರಭುತ್ವದ ಗೌರವ ವನ್ನು ಜಗತ್ತಿಗೇ ತೋರಿಸಿದ ಬಸವಣ್ಣ ಕಟ್ಟಿದ ಕರ್ನಾಟಕ ಇದು. ಆದರೆ ಇಂದು ಜನಿವಾರ ಹಾಕಿಕೊಂಡು, ದಾಡಿ ಬಿಟ್ಟುಕೊಂಡು 'ವಚನ ದರ್ಶನ' ಎಂದು ವಿಕೃತಿ ಮಾಡುತ್ತಿದ್ದಾರೆ. ನಾವು ಇದನ್ನು ಸುಮ್ಮನೆ ಕುಳಿತು ನೋಡಬೇಕೇ? ಎಂದು ಪ್ರಚೋದನಾತ್ಮಕ ಮಾತುಗಳನ್ನು ಆಡಿದ್ದಾರೆ. ಇದು ಅಕ್ಷಮ್ಯ.

ಸಂವಿಧಾನವು ನಮಗೆ ವಾಕ್ ಸ್ವಾತಂತ್ರ್ಯವನ್ನು ನೀಡಿದೆ. ಹಾಗೆಂದು ಪ್ರತಿಭಟನಾ ಸಂದರ್ಭಕ್ಕೆ ತಕ್ಕಂತೆ ಸಭಾ ನಡವಳಿಕೆ ಇರಬೇಕಾದ್ದು, ಸ್ವಗೌರವವನ್ನು ಉಳಿಸಿಕೊಳ್ಳಬೇಕಾದ್ದು ರಾಜ್ಯಕ್ಕೆ ದೊಡ್ಡವರೆನಿಕೊಂಡಿರುವವರ ಕರ್ತವ್ಯವಾಗಬೇಕು.

ಇಲ್ಲಿ ಚರ್ಚಾ ವಿಷಯ ಮುಖ್ಯಮಂತ್ರಿಗಳ ಪ್ರಾಸಿಕ್ಯೂಷನ್‌ಗೆ ರಾಜ್ಯಪಾಲರು ಅನುಮತಿ ನೀಡಿರುವ ಕುರಿತು. ಅನುಮತಿ ಕೇಳಿರುವವರು, ನೀಡಿರುವವರು, ದೂರು ಕೊಟ್ಟಿರುವವರು ಯಾರಿಗೂ ಮತ್ತು 'ವಚನ ದರ್ಶನ' ಕೃತಿಗೂ ಬ್ರಾಹ್ಮಣರಿಗೂ ಯಾವುದೇ ಸಂಬಂಧವಿಲ್ಲ.

ಹೀಗಿರುವಾಗ ಪದೇ ಪದೆ ತಮ್ಮ ಸಿದ್ಧಾಂತಗಳ ಬೇಳೆ ಬೇಯಿಸಿಕೊಳ್ಳಲು ಜಾತಿ ಜನಾಂಗಗಳ ವಿರುದ್ಧ ಎತ್ತಿಕಟ್ಟಲು ವೈದಿಕ, ಶಾಸ್ತ್ರ, ವೇದ, ಪುರಾಣ, ಜನಿವಾರ ಇವುಗಳ ವಿನಾಕಾರಣ ಪದ ಬಳಕೆ ಒಬ್ಬ ಸಂಗೀತ ವಿದ್ವಾಂಸರಿಗೆ ಈ ವಯಸ್ಸಿನಲ್ಲಿ ಶೋಭೆ ತರುವುದಿಲ್ಲ. ನಿಮ್ಮ ಸಂಗೀತವನ್ನು ಎಲ್ಲಾ ಜಾತಿ – ಜನಾಂಗದವರು ಕೇಳಿ ಆನಂದಿಸಿದ್ದೇವೆ.

ಬ್ರಾಹ್ಮಣರು ಸೇರಿದಂತೆ ಹಲವು ಆಸ್ತಿಕರು ಪ್ರತಿನಿತ್ಯ ಹೇಳುವ ವೇದವ್ಯಾಸ ಮಹರ್ಷಿ ರಚಿತ ವಿಷ್ಣುಸಹಸ್ರನಾಮದ ಒಂದು ಭಾಗವಾದ 'ವೇದಾಂತಗೋ ಬ್ರಾಹ್ಮಣ: ಸ್ಯಾತ್ ಕ್ಷತ್ರಿಯೋ ವಿಜಯೀ ಭವೇತ್‌ಟ ವೈಶ್ಯೋ ಧನಸಮೃದ್ಧ: ಸ್ಯಾತ್ ಶೂದ್ರಃ ಸುಖಮವಾಪ್ನುಯಾತ್‌ಟಟ' ಎಂದು ಹೇಳಿ ಕೊನೆಯಲ್ಲಿ ಸರ್ವೇಜನಾ: ಸುಖಿನೋ ಭವಂತು; ಸಮಸ್ತ ಸನ್ಮಂಗಳಾನಿ ಭವಂತು ಎಂದು ಎಲ್ಲರಿಗೂ ಒಳ್ಳೆಯದನ್ನು ಬಯಸುತ್ತಾನೆ.

ಇನ್ನು ಸರ್ವಜನಾಂಗದ ವತಿಯಿಂದ ಆಯ್ಕೆಯಾಗಿರುವ ಮುಖ್ಯಮಂತ್ರಿಗಳಾದ ಮೈಸೂರಿನ ಸುಪುತ್ರ ಸಿದ್ದರಾಮಯ್ಯನವರೂ ನನಗೆ ಎಲ್ಲ ವರ್ಗದವರ ಬೆಂಬಲ ಮತ್ತು ಒಡನಾಟವಿದೆ ಎಂದು ಹಲವಾರು ಬಾರಿ ಹೇಳಿದ್ದಾರೆ.

ಹೀಗಿರುವಾಗ ಸಂವಿಧಾನಾತ್ಮಕವಾದ ಹಕ್ಕುಗಳನ್ನು ದುರುಪಯೋಗಪಡಿಸಿ ಕೊಂಡು ಜನಸಾಮಾನ್ಯರ ಸಾಮರಸ್ಯದ ಜೀವನ ಹದಗೆಡಿಸಲು ಯಾವುದೇ ಜವಾಬ್ದಾರಿಯುತ ಗಣ್ಯ ವ್ಯಕ್ತಿಗಳು ವ್ಯರ್ಥ ಪ್ರಯತ್ನಪಡಬಾರದೆಂದು ಸರ್ವಜನಾಂಗದ ಶಾಂತಿಯ ತೋಟ ರಸಿಕರ ಕಂಗಳ ಸೆಳೆಯುವ ನೋಟ ಎಂಬ ರಸ–ಋಷಿ ಕುವೆಂಪು ಅವರ ಗೀತೆಯ ವಾಕ್ಯವನು ನಾದಬ್ರಹ್ಮರಿಗೆ ನೆನಪಿಸುತ್ತಾ ಈ ಅಭಿಮಾನಪೂರ್ವಕ ಮನವಿ.

–ಜಯಸಿಂಹ, ಮೈಸೂರು.



ಕಾರ್ಕಳ ಆನಂದ ಭಟ್
ಮೊ: 7676554198
ಫ್ಲಾಟ್ ನಂ. 204, ಮೂರನೇ ಮಹಡಿ, ಏಕದಂತ ಅಪಾರ್ಟ್‌ಮೆಂಟ್ಸ್, OPP
H.P. ಗ್ಯಾಸ್ ಪೆರ್ವಾಜೆ ರಸ್ತೆ, ಕಾರ್ಕಳ– 574 104, ಉಡುಪಿ ಜಿಲೆ

ದಿಕ್ಕುದೆಸೆ

ಪ್ರಥಮ ಪರಮವೀರ ಮೇಜರ್ ಸೋಮನಾಥ ಶರ್ಮಾ

ಈ ರಾಷ್ಟ್ರದ ಗಡಿಗಳಲ್ಲಿ ನಮ್ಮ ರಾಷ್ಟ್ರಧ್ವಜವು ಹಾರುತ್ತಿರುವುದು ಬೀಸುವ ಗಾಳಿಯಿಂದಲ್ಲ, ಅದನ್ನು ರಕ್ಷಿಸಲು ಸರ್ವೋಚ್ಚ ತ್ಯಾಗ ಮಾಡಿದ ನಮ್ಮ ಧೀರ ಯೋಧರ ಕೊನೆಯುಸಿರಿನಿಂದ ಎಂಬ ವಿಚಾರ ರಾಷ್ಟ್ರ ರಕ್ಷಣೆಗೆ ಪ್ರಾಣಾರ್ಪಣೆ ಮಾಡಿರುವ ಸೈನಿಕರ ಮಹತ್ವವನ್ನು ತಿಳಿಸುತ್ತದೆ.

ಯುದ್ಧಸ್ಯ ವಾರ್ತಾ ರಮ್ಯ: ಯುದ್ಧದ ವಾರ್ತೆಗಳು ಕೇಳಲು ಕರ್ಣಾನಂದವಾಗಿರುತ್ತವೆ. ಆದರೆ ಪ್ರತ್ಯಕ್ಷ ರಣಾಂಗಣದಲ್ಲಿ ಸೈನಿಕರು ಅನುಭವಿಸುವ ನೋವು, ಯಾತನೆಗಳು, ಭೀಕರ ಸನ್ನಿವೇಶಗಳು ಎದುರಾದಾಗ ಅವರು ತೋರುವ ಅಸೀಮ ಪರಾಕ್ರಮದ, ಹೋರಾಟದ ಕಥನ ಗಳನ್ನು ಕೇಳುವಾಗ, ಓದುವಾಗ ನಮಗೆ ತಿಳಿಯದಂತೆ ನಮ್ಮ ಕಣ್ಣಾಲಿಗಳು ತೇವಗೊಳ್ಳುತ್ತವೆ. ಒಬ್ಬೊಬ್ಬ ಸೈನಿಕರ ಹೋರಾಟದ ರೀತಿಗಳು ವಿಭಿನ್ನವೂ, ರೋಮಾಂಚಕಾರಿಯೂ ಆಗಿರುತ್ತದೆ. ಆದರೆ ಬಲಿದಾನದ ಸಮಯ ಬಂದಾಗ ಎಲ್ಲ ಸೈನಿಕರ ಮನೋಭಾವನೆಯಲ್ಲಿ ಏಕ ರೂಪತೆಯನ್ನು ಕಾಣಬಹುದು. ಎಲ್ಲ ಸೈನಿಕರು ತಮ್ಮ ಗುಂಡಿಗೆಯಲ್ಲಿ ಗುಂಡುಗಳನ್ನು ಸ್ವೀಕರಿಸಿ ದೇಶಕ್ಕಾಗಿ ಪ್ರಾಣಾರ್ಪಣೆ ಮಾಡಲು ಬಯಸುತ್ತಾರೆ.

ಜಗತ್ತಿನಲ್ಲಿ ಇದುವರೆಗೆ ನಡೆದ ನೂರಾರು ಯುದ್ಧಗಳಲ್ಲಿ ಅತ್ಯಂತ ಕಠಿಣ ಸ್ಥಿತಿ ಎದುರಾದ ಸಂದರ್ಭಗಳಲ್ಲಿ ಓರ್ವ ಸೈನಿಕ ಅಥವಾ ಕೆಲವೇ ಕೆಲವು ಸೈನಿಕರು ತಮ್ಮ ಮನೋಬಲ, ಹೋರಾಟದ ಕೆಚ್ಚಿನಿಂದ ಯುದ್ಧಗಳ ಅಂತಿಮ ಫಲಿತಾಂಶ ಬದಲಾಯಿಸಿದ ನಿದರ್ಶನಗಳಿವೆ.

ಪ್ರಥಮ ಮಹಾಯುದ್ಧದಲ್ಲಿ ಫ್ರಾನ್ಸಿನ ಮಾರ್ನ ನದಿ ಬಳಿ ಜರ್ಮನ್ ಸೇನೆ ತಲುಪಿತ್ತು. ಆಗ ಫ್ರೆಂಚ್ ಜನರಲ್ ಜೆಫ್ರಿಯವರು ತಮ್ಮ ಸೇನಾಧಿಕಾರಿಗಳನ್ನು ಕರೆದು, ಈಗ ಹಿಂದೆ ಸರಿಯಲಾಗುವುದಿಲ್ಲ. ಪ್ರತ್ಯಾಕ್ರಮಣದ ಹೊರತು ಬೇರೆ ಪರ್ಯಾಯವಿಲ್ಲ. ಆದ್ದರಿಂದ ಪ್ರತ್ಯಾಕ್ರಮಣ ಆರಂಭಿಸಿ ಮುಂದಿನ ಇಪ್ಪತ್ತನಾಲ್ಕು ಗಂಟೆಗಳೊಳಗೆ ಟೆಲಿಗ್ರಾಂ ನೀಡಲು ಆದೇಶಿಸಿದರು. ಓರ್ವನನ್ನು ಹೊರತುಪಡಿಸಿ ಉಳಿದೆಲ್ಲ ಅಧಿಕಾರಿಗಳು ಆರಂಭದಲ್ಲೇ ಸೋಲೊಪ್ಪಿದರು. ಜರ್ಮನ್ ಸೇನೆ ಪ್ಯಾರಿಸ್‌ನಿಂದ 20 ಮೈಲು ದೂರದಲ್ಲಿದ್ದಾಗ ಕೇವಲ ಓರ್ವ ಸೇನಾಧಿಕಾರಿ ನರಲ್ ಫ್ಲಾರವರು ಜ. ಜೆಫ್ರಿಗೆ ನೀಡಿದ ಟೆಲಿಗ್ರಾಂ ಈ ರೀತಿ ಇತ್ತು; ನನ್ನ ಬಲಭಾಗ ಹಿಮ್ಮೆಟ್ಟಿದೆ. ನನ್ನ ಕೇಂದ್ರ ಕುಸಿದಿದೆ. ಪರಿಸ್ಥಿತಿ ಅತ್ಯುತ್ತಮವಿದೆ. ನಾನು ಆಕ್ರಮಿಸಲಿರುವೆ. ಫ್ಲಾ ಏಕಾಂಕಿಯಾಗಿ ಮಹಾನ್ ವಿಜಯ ಗಳಿಸಿದ್ದ. ಸುದ್ದಿಗಾರರ ಪ್ರಶ್ನೆಗೆ ನಾನು ಪರಾಜಿತನಾಗಬಾರದು ಎಂಬ ಸರಳ ನಿರ್ಧಾರದಿಂದ ನಾನು ಜಯಶಾಲಿಯಾದೆ ಎಂದು ಉತ್ತರಿಸುತ್ತಾರೆ. ಈ ರೀತಿ ಕೆಲವು ವ್ಯಕ್ತಿಗಳು ಸಾಧನಗಳ ಸಹಾಯವಿಲ್ಲದೇ ಕೇವಲ ತಮ್ಮ ಸಾಮರ್ಥ್ಯದಿಂದ ಕಾರ್ಯದಲ್ಲಿ ಯಶಸ್ವಿಯಾಗಿ ಇತಿಹಾಸ ನಿರ್ಮಿಸುತ್ತಾರೆ. ಭಾರತದಲ್ಲಿಯೂ ಇದೇ ರೀತಿ ಮಾತೃಭೂಮಿಯ ರಕ್ಷಣೆಯ ಸಂದರ್ಭದಲ್ಲಿ ರಣರಂಗದಲ್ಲಿ ಅಪ್ರತಿಮ ಶೌರ್ಯ ಸಾಹಸಗಳೊಂದಿಗೆ ಹೋರಾಡಿ ಅಂತಿಮವಾಗಿ ದೇಶಕ್ಕಾಗಿ ಬಲಿದಾನ ನೀಡಿದ ಅಸಂಖ್ಯಾತ ಯೋಧರ ಉದಾಹರಣೆಗಳಿವೆ. ಇಂತಹ ಅಸಂಖ್ಯಾತ ಯೋಧರಲ್ಲಿ ಪ್ರಥಮ ಪರಮವೀರ ಚಕ್ರ ಪುರಸ್ಕೃತರಾದ **ಹುತಾತ್ಮ ಮೇ. ಸೋಮನಾಥ ಶರ್ಮ** ಒಬ್ಬರಾಗಿದ್ದಾರೆ. ಕಾಶ್ಮೀರದ ಶ್ರೀನಗರ ಮತ್ತು ಶ್ರೀನಗರದ ವಿಮಾನ ನಿಲ್ದಾಣವನ್ನು ರಕ್ಷಿಸಲು ಮೇ. ಶರ್ಮಾ ಮತ್ತು ಕೆಲವೇ ಸೈನಿಕರು ಭೀಕರ ಹೋರಾಟವನ್ನು ನಡೆಸಿದರು. ಭಾರತ ಮಾತೆಯ ಕಿರೀಟದಂತಿರುವ ಕಾಶ್ಮೀರವನ್ನು ರಕ್ಷಿಸುವ ಈ ಯುದ್ಧದಲ್ಲಿ ಪ್ರಾಣಾರ್ಪಣೆಯ ಕೆಲವೇ ಕ್ಷಣಗಳ ಮೊದಲು ಮೇ. ಶರ್ಮಾರು ತಮ್ಮ ಬ್ರಿಗೇಡ್ ಕೇಂದ್ರಕ್ಕೆ ಕಳಿಸಿದ ಅಂತಿಮ ಸಂದೇಶದಲ್ಲಿ ಅವರ ಹೃದಯದಲ್ಲಿ ಹೋರಾಟದ ಕಿಚ್ಚು ಅದೆಷ್ಟು ಉಗ್ರವಾಗಿತ್ತು, ಹೃದಯದಲ್ಲಿ ಹೊತ್ತಿ ಉರಿಯುತ್ತಿದ್ದ ದೇಶಭಕ್ತಿಯ ಜ್ವಾಲೆ ಅದೆಷ್ಟು ಪ್ರಖರವಾಗಿತ್ತು ಎಂಬುದನ್ನು ತಿಳಿಯಬಹುದು. ಮೇ. ಸೋಮನಾಥ ಶರ್ಮಾರು ಕಳಿಸಿದ ಅಂತಿಮ ಸಂದೇಶ ಈ ರೀತಿ ಇತ್ತು. **"ಶತ್ರುಗಳು ನಮ್ಮಿಂದ ಕೇವಲ ಐವತ್ತು ಗಜಗಳಷ್ಟು ದೂರದಲ್ಲಿದ್ದಾರೆ. ನಾವು ಕಡಿಮೆ ಸಂಖ್ಯೆಯಲ್ಲಿದ್ದೇವೆ. ನಾನೂ ವಿನಾಶಕಾರಿ ಬೆಂಕಿಯಲ್ಲಿದ್ದೇವೆ. ಆದರೂ ನಾನು ಒಂದು ಇಂಚು ಹಿಂದೆ ಸರಿಯುವುದಿಲ್ಲ. ನಮ್ಮ ಕೊನೆಯ ಸೈನಿಕ ಮತ್ತು ಕೊನೆಯ ಬುಲೆಟ್ ಇರುವವರೆಗೆ ಹೋರಾಡುತ್ತೇವೆ"** ಶ್ರೀನಗರ ರಕ್ಷಿಸುವಲ್ಲಿ ಸರ್ವೋಚ್ಚ ಬಲಿದಾನ ಮಾಡಿದ ಮೇ. ಶರ್ಮಾರ ಈ ಸಂದೇಶ ಕೇಂದ್ರ ಕಚೇರಿ ತಲುಪುವ ಹೊತ್ತಿಗೆ ತೂರಿ ಬಂದ ಹತ್ತಾರು ಗುಂಡುಗಳಿಗೆ ಅವರ ಶರೀರ ಕ್ಷತವಿಕ್ಷತವಾಗಿತ್ತು. ಅಲ್ಲಿ ಸಂಭವಿಸಿದ ಭೀಕರ ಯುದ್ಧಕ್ಕೆ ಸಾಕ್ಷಿಯಾಗಿತ್ತು. ಕೇವಲ 24ನೇ ವಯಸ್ಸಿಗೆ ತಮ್ಮ ಅತ್ಯಮೂಲ್ಯ ಪ್ರಾಣವನ್ನು ಭಾರತ ಮಾತೆಯ ಪದತಲದಲ್ಲಿ ಸಮರ್ಪಿಸಿ ಮೇ. ಶರ್ಮಾ ಅಮರ ಸೇನಾನಿಯಾದರು.



ಮೇಜರ್ ಸೋಮನಾಥ ಶರ್ಮಾ

> ಶ್ರೀನಗರವನ್ನು ರಕ್ಷಿಸುವಲ್ಲಿ ಮೇಜರ್ ಸೋಮನಾಥ ಶರ್ಮಾ ತೋರಿದ ಅಸೀಮ ಪರಾಕ್ರಮಕ್ಕಾಗಿ ಅವರಿಗೆ ಮರಣೋತ್ತರವಾಗಿ 21.06.1950ರಂದು ಸ್ವಾತಂತ್ರ್ಯ ಭಾರತದ ಮೊಟ್ಟ ಮೊದಲ ಪರಮವೀರ ಚಕ್ರ ಪುರಸ್ಕಾರ ನೀಡುವುದಾಗಿ ಭಾರತ ಸರಕಾರದ ಗೆಜೆಟ್‌ನಲ್ಲಿ ಪ್ರಕಟಿಸಲಾಯಿತು. ಕಾಕತಾಳೀಯವೆಂಬಂತೆ ಶರ್ಮಾರ ಸೋದರತ್ತೆ ಸಾವಿತ್ರಿ ಖಾನೋಲ್ಕರ್‌ರವರು ಪರಮವೀರ ಚಕ್ರದ ವಿನ್ಯಾಸ ರಚಿಸಿದ್ದರು. ನಮ್ಮ ಮುಂದಿನ ಸುಭದ್ರ ಭವಿಷ್ಯಕ್ಕಾಗಿ ತಮ್ಮ ಇಂದಿನ ಸುಖವನ್ನು ತ್ಯಾಗಮಾಡಿ ರಾಷ್ಟ್ರ ರಕ್ಷಣೆಯಲ್ಲಿ ತೊಡಗಿಕೊಂಡಿರುವ ಸೈನಿಕರಿಗೆ ಗೌರವವನ್ನು ಸಲ್ಲಿಸುವುದು ಈ ನಾಡಿನ ನಾಗರಿಕರಾದ ನಮ್ಮ ಆದ್ಯ ಕರ್ತವ್ಯವಾಗಿದೆ.

ಮೇ. ಶರ್ಮಾರ ಆರಂಭಿಕ ಜೀವನ ಮತ್ತು ಶಿಕ್ಷಣ

ಹಿಮಾಚಲ ಪ್ರದೇಶದ ಕಾಂಗ್ರಾದ ದಾದ್‌ನಲ್ಲಿ ಡೊಗ್ರಾ ಬ್ರಾಹ್ಮಣ ಕುಟುಂಬದಲ್ಲಿ ಮೇ. ಸೋಮನಾಥ ಶರ್ಮಾರು ದಿ. 31.01.1923ರಲ್ಲಿ ಜನಿಸಿದರು. ಶರ್ಮಾರದು ಪರಾಕ್ರಮಿ ಸೇನಾ ಮನೆತನವಾಗಿತ್ತು. ತಂದೆ ಅಮರನಾಥ ಶರ್ಮಾ ಮಿಲಿಟರಿ ಅಧಿಕಾರಿಯಾಗಿದ್ದರು. ಕಿರಿಯ ಸಹೋದರ ವಿಶ್ವನಾಥ ಶರ್ಮಾ ಭಾರತೀಯ ಸೇನೆಯ ಸೇನಾ ಸಿಬ್ಬಂದಿಗಳ 14ನೇ ಮುಖ್ಯಸ್ಥರಾಗಿದ್ದರು. ಸೋಮನಾಥ ಶರ್ಮಾ ನೈನಿತಾಲ್‌ನ ಶೆರ್ಘುಡ್ ಕಾಲೇಜಿನಲ್ಲಿ ತಮ್ಮ ಶಿಕ್ಷಣ ಪೂರ್ಣಗೊಳಿಸಿ ಮುಂದೆ ಸ್ಟ್ಯಾಂಡ್ ಹರ್ಸ್ಟನ್ ರಾಯಲ್ ಮಿಲಿಟರಿ ಕಾಲೇಜ್‌ನಲ್ಲಿ ಅಧ್ಯಯನದ ನಂತರ ಡೆಹ್ರಾಡೂನ್‌ನಲ್ಲಿರುವ ಪ್ರಿನ್ಸ್ ಆಫ್ ವೇಲ್ಸ್ ರಾಯಲ್ ಸೈನಿಕ ಕಾಲೇಜಿನಲ್ಲಿ ಸೈನಿಕ ಶಿಕ್ಷಣ ಪೂರೈಸಿದರು. ಬಾಲ್ಯದಲ್ಲಿ ತಾತ ಕಲಿಸಿದ ಭಗವದ್ಗೀತೆಯಲ್ಲಿನ ಕೃಷ್ಣ ಮತ್ತು ಅರ್ಜುನನ ಬೋಧನೆಗಳಿಂದ ಶರ್ಮಾರವರು ಪ್ರಭಾವಿತರಾಗಿದ್ದರು.

ಸೇನೆ ಸೇರಿದ ಶರ್ಮಾ

ರಾಯಲ್ ಮಿಲಿಟರಿ ಕಾಲೇಜಿನಿಂದ ಪದವಿ ಪಡೆದ ನಂತರ 1942ರಲ್ಲಿ ಶರ್ಮಾರನ್ನು ಬ್ರಿಟಿಷ್ ಭಾರತೀಯ ಸೇನೆಯ ಹೈದರಾಬಾದ್ ರೆಜಿಮೆಂಟಿಗೆ ನಿಯೋಜಿಸಲಾಯಿತು. ಸ್ವಾತಂತ್ರ್ಯಾ ನಂತರ ಈ ಸೇನಾಪಡೆಯು ಭಾರತೀಯ ಸೇನೆಯ ಕುಮಾವ್ ರೆಜಿಮೆಂಟ್‌ನ 4ನೇ ಬೆಟಾಲಿಯನ್ ಆಗಿ ಬದಲಾವಣೆಗೊಂಡಿತು. ಎರಡನೇ ಮಹಾಯುದ್ಧದಲ್ಲಿ ಬ್ರಿಟಿಷ್ ಸೇನೆಯಲ್ಲಿ ಕರ್ನಲ್ ಆಗಿದ್ದ ಕೆ.ಎಸ್. ತಿಮ್ಮಯ್ಯ ನೇತೃತ್ವದಲ್ಲಿ ಶರ್ಮಾರು ಅರಕಾನ್ ಅಭಿಯಾನ ನಿಮಿತ್ತ ಜಪಾನಿ ಸೇನೆಯ ವಿರುದ್ಧ ಕಾರ್ಯಾಚರಣೆ ನಡೆಸಿದರು. ತಮ್ಮ ಸೇನಾ ಜೀವನದುದ್ದಕ್ಕೂ ಶರ್ಮಾರವರು ಚಿಕ್ಕಪ್ಪ ಹಾಗೂ 8ನೇ ಬೆಟಾಲಿಯನ್‌ನಲ್ಲಿ ಕ್ಯಾಪ್ಟನ್ ಆಗಿದ್ದ ಕೆ.ಡಿ.ವಾಸುದೇವರಿಂದ ಹೆಚ್ಚು ಪ್ರಭಾವಿತರಾಗಿದ್ದರು. ಮಲಯನ್ ಅಭಿಯಾನದಲ್ಲಿ ಜಪಾನಿ ಸೇನೆಯ ವಿರುದ್ಧ ನಡೆದ ಯುದ್ಧದಲ್ಲಿ ನೇತೃತ್ವ ವಹಿಸಿದ್ದ ಕೆ.ಡಿ. ವಾಸುದೇವರು ತಮ್ಮ ನೂರಾರು ಸೈನಿಕರ ಪ್ರಾಣ ಕಾಪಾಡುವಲ್ಲಿ ಸ್ವತಃ ಪ್ರಾಣಾರ್ಪಣೆ ಮಾಡಿದ್ದ ಅಪ್ರತಿಮ ಸೇನಾನಿ.

ಬಡ್ಗಾಮ್ ಕದನ

ಭಾರತದೊಂದಿಗೆ ಕಾಶ್ಮೀರ ವಿಲೀನಕ್ಕೆ ಸಂಬಂಧಿಸಿದಂತೆ ಕಾಶ್ಮೀರ ಸಂಸ್ಥಾನದ ಮಹಾರಾಜಾ ಹರಿಸಿಂಗ್ ಅನುಸರಿಸಿದ ವಿಳಂಬ ನೀತಿ ಮತ್ತು ಪ್ರಧಾನಿ ನೆಹರೂರಲ್ಲಿದ್ದ ಅನಿಶ್ಚಿತತೆ, ಅಸ್ಪಷ್ಟತೆಯಿಂದ ವಿಲೀನ ಪ್ರಕ್ರಿಯೆ ನಿಧಾನಗೊಂಡಿತು. ಪರಿಸ್ಥಿತಿ ಅರಿತ ಪಾಕ್ ಸೇನೆಯು ಗಿಲ್ಗಿಟ್–ಬಾಲ್ಟಿಸ್ಥಾನ, ಮುಜಫರಾಬಾದ್ ಒಳಗೊಂಡ ಕಾಶ್ಮೀರದ ಮೂರನೇ ಒಂದರಷ್ಟು ಪ್ರದೇಶ ವಶಪಡಿಸಿಕೊಂಡು ಶ್ರೀನಗರದತ್ತ ಮುನ್ನುಗ್ಗುತ್ತಿತ್ತು. ಅಪಾಯ ಅರಿತ ಮಹಾರಾಜ ಹರಿಸಿಂಗ್‌ರು ಕ್ಷಿಪ್ರವಾಗಿ ವಿಲೀನ ಒಪ್ಪಂದಕ್ಕೆ ಸಮ್ಮತಿಸಿದರು. ಪರಿಸ್ಥಿತಿ ಗಂಭೀರವಾಗಿತ್ತು. ಉಳಿದ ಕಾಶ್ಮೀರವನ್ನು ರಕ್ಷಿಸಲು ಶ್ರೀನಗರ ಮತ್ತು ವಿಮಾನ ನಿಲ್ದಾಣವನ್ನು ರಕ್ಷಿಸಬೇಕಾದ ಗಂಭೀರ ಪರಿಸ್ಥಿತಿ ಸೇನೆಗೆ ಎದುರಾಗಿತ್ತು.

ಕಾಶ್ಮೀರ ಕಣಿವೆಯಿಂದ ಪಾಕ್ ಆಕ್ರಮಣವನ್ನು ಹಿಮ್ಮೆಟ್ಟಿಸಲು ಅಕ್ಟೋಬರ್ 27, 1947ರಂದು ಭಾರತೀಯ ಸೇನೆಯ ಒಂದು ತಂಡವನ್ನು ನಿಯೋಜಿಸಲಾಯಿತು. ಅಕ್ಟೋಬರ್ 31ರಂದು ಮೇಜರ್ ಸೋಮನಾಥ ಶರ್ಮಾ ನೇತೃತ್ವದ ಕುಮಾವ್ ರೆಜಿಮೆಂಟ್‌ನ 4ನೇ ಬೆಟಾಲಿಯನ್‌ನ ಡಿ ಕಂಪನಿಯನ್ನು ಶ್ರೀನಗರಕ್ಕೆ ಕಳಿಸಲಾಯಿತು. ಹಾಕಿ ಆಡುವಾಗ ಎಡಕೈಗೆ ಆದ ಗಾಯಕ್ಕೆ ಪ್ಲಾಸ್ಟರ್ ಹಾಕಿದ್ದರಿಂದ ಶರ್ಮಾರಿಗೆ ಅನುಮತಿ ನೀಡಲಿಲ್ಲ. ಆದರೆ ಶರ್ಮಾರ ತೀವ್ರ ಒತ್ತಾಯದ ಮೇರೆಗೆ ಯುದ್ಧರಂಗಕ್ಕೆ ತೆರಳಲು ಅನುಮತಿ ನೀಡಲಾಯಿತು. ಬಡ್ಗಾಮ್ ರಕ್ಷಿಸಲು ನವೆಂಬರ್ 3 ರಂದು ನಿಯೋಜಿಸಿದ ಮೂರು ಕಂಪನಿ ಸೇನೆಯಲ್ಲಿ ಎರಡು ಕಂಪನಿಯನ್ನು ಶತ್ರುಗಳ ಕಡೆಯಿಂದ ಯಾವುದೇ ಚಲನವಲನಗಳಿಲ್ಲದ ಕಾರಣ ಶ್ರೀನಗರಕ್ಕೆ ವಾಪಸು ಕಳಿಸಲಾಯಿತು. ಪ್ರಾಯಶಃ ಇದೊಂದು ವ್ಯೂಹಾತ್ಮಕವಾಗಿ ಸೇನೆ ಕೈಗೊಂಡ ತಪ್ಪು ನಿರ್ಣಯವೆಂದು ನಂತರ ತಿಳಿಯಿತು. ಶರ್ಮಾರ 'ಡಿ' ಕಂಪನಿಗೆ ಮಧ್ಯಾಹ್ನ ಮೂರು ಗಂಟೆವರೆಗೆ ಸ್ಥಾನದಲ್ಲಿರುವಂತೆ ಆದೇಶಿಸಲಾಗಿತ್ತು. ಇದ್ದಕ್ಕಿದ್ದಂತೆ ಬಡ್ಗಾಮ್‌ನ ಸ್ಥಾನೀಯ ಮನೆಗಳಿಂದ ಸೇನೆಯತ್ತ ಗುಂಡಿನ ದಾಳಿ ಆರಂಭವಾಯಿತು. ಮೇ. ಶರ್ಮಾರು ಸೇನಾಧಿಕಾರಿಯಾಗಿದ್ದರೂ ಅಂತಃಕರಣದಲ್ಲಿ ಮಾನವೀಯತೆ ತುಂಬಿತ್ತು. ಆದರೆ ಮನೆಗಳಲ್ಲಿ ಅವಿತುಕೊಂಡಿದ್ದವರಲ್ಲಿ ಪಾಶವೀಯತೆ ತುಂಬಿತ್ತು. ಮೇ. ಶರ್ಮಾರು ನಾಗರಿಕರನ್ನು ರಕ್ಷಿಸಲು ಪ್ರತಿ ದಾಳಿಗೆ ಆದೇಶ ನೀಡಲಿಲ್ಲ. ಮುಂದಿನ ಕೆಲವೇ ನಿಮಿಷಗಳಲ್ಲಿ ಪಾಕ್ ಸೇನೆಯ ಬೆಂಬಲದೊಂದಿಗೆ ಸುಮಾರು 700ಕ್ಕೂ ಹೆಚ್ಚಿನ ಸಂಖ್ಯೆಯಲ್ಲಿದ್ದ ರಜಾಕಾರ್‌ರು, ಕಬಾಯಲಿ ನುಸುಳುಕೋರರು ಗುಲ್ಮಾರ್ಗ್‌ನಿಂದ ಬಡ್ಗಾಮ್‌ಗೆ ತಲುಪಿ ಶರ್ಮಾರ 'ಡಿ' ಕಂಪನಿಯನ್ನು ಮೂರು ದಿಕ್ಕಿನಿಂದ ದಿಗ್ಬಂಧಿಸಿ ನಡೆಸಿದ ಭಾರಿ ಗುಂಡಿನ ದಾಳಿಯಲ್ಲಿ ಡಿ ಕಂಪನಿಯಲ್ಲಿ ಭಾರಿ ಪ್ರಮಾಣದಲ್ಲಿ ಸಾವು ನೋವು ಸಂಭವಿಸಿತು.

ಮೇ. ಶರ್ಮಾರವರು ತನ್ನೊಂದಿಗಿದ್ದ ಕೇವಲ ನೂರು ಸೈನಿಕರೊಂದಿಗೆ ವಿಮಾನ ನಿಲ್ದಾಣ ರಕ್ಷಿಸುವ ಸಂಕಲ್ಪ ಕೈಗೊಂಡರು. ಸೈನಿಕರನ್ನು ಹೋರಾಡಲು ಪ್ರೇರೇಪಿಸಿದರು. ಪ್ರಳಯ ಸ್ವರೂಪಿಯಂತೆ ಶರ್ಮಾ ಒಂದೆಡೆಯಿಂದ ಇನ್ನೊಂದೆಡೆ ಧಾವಿಸುವಾಗ ಶತ್ರುಗಳ ಅನೇಕ ಗುಂಡುಗಳು ತಗಲುತ್ತವೆ. ಭಾರಿ ಸಾವು ನೋವುಗಳಿಂದ ಸೈನಿಕರ ಹೋರಾಟದ ಶಕ್ತಿಯ ಮೇಲೆ ತೀವ್ರ ಪರಿಣಾಮ ಬೀರಿದ್ದನ್ನು ಅರಿತ ಮೇ. ಶರ್ಮಾರು ಸೈನಿಕರಿಗೆ ಮದ್ದು ಗುಂಡು ವಿತರಿಸುವ ಲಘು ಸ್ವಯಂಚಾಲಿತ ಬಂದೂಕುಗಳನ್ನು ನಿರ್ವಹಿಸುವ ಕೆಲಸವನ್ನು ತಾವೇ ವಹಿಸಿಕೊಂಡರು. ಶತ್ರುವೊಬ್ಬ ಎಸೆದ ಹ್ಯಾಂಡ್ ಗ್ರೇನೇಡ್ ಮದ್ದು ಗುಂಡುಗಳ ಸಂಗ್ರಹದ ಮೇಲೆ ಬಿದ್ದು ಸ್ಫೋಟಿಸಿತು. ಶರ್ಮಾರ ಅದಾಗಲೇ ಜರ್ಝರಿತವಾಗಿದ್ದ ಶರೀರದಿಂದ ಪ್ರಾಣ ಪಕ್ಷಿ ಹಾರುವ ಮೊದಲು ಆರಂಭದಲ್ಲಿ ತಿಳಿಸಿರುವ ಸಂದೇಶವನ್ನು ತಮ್ಮ ಬ್ರಿಗೇಡ್‌ನ ಪ್ರಧಾನ ಕಚೇರಿಗೆ ರವಾನಿಸಿದ್ದರು. ಮೇ ಶರ್ಮಾರು ತೋರಿದ ಅಪ್ರತಿಮ ಪರಾಕ್ರಮದಿಂದ ಪಾಕಿಗಳ ಮನೋಬಲ ನಾಶವಾಗಿತ್ತು. ಶತ್ರುಗಳು ಹಿಮ್ಮೆಟ್ಟಿದರು. ಶ್ರೀನಗರ ಹಾಗೂ ವಿಮಾನ ನಿಲ್ದಾಣಕ್ಕೆ ಎದುರಾದ ಅಪಾಯ ನಿವಾರಣೆಯಾಯಿತು. ಯುದ್ಧದಲ್ಲಿ ಮೇ. ಶರ್ಮಾರೊಂದಿಗೆ ಓರ್ವ ಕಿರಿಯ ಅಧಿಕಾರಿ, ಇಪ್ಪತ್ತು ಸೈನಿಕರು ಹುತಾತ್ಮರಾಗಿದ್ದರು. ಮೂರು ದಿನಗಳ ನಂತರ ಶರ್ಮಾರ ಪಾರ್ಥಿವ ಶರೀರ ಪತ್ತೆ ಹಚ್ಚಲಾಯಿತು. ಶರ್ಮಾರ ದೇಹ ಗುರುತಿಸಲಾಗಷ್ಟು ವಿರೂಪಗೊಂಡಿದ್ದರೂ ಅವರ ಪಿಸ್ತೂಲಿನ ಚರ್ಮದ ಪರ್ಸ್ ಮತ್ತು ಎದೆಯ ಕಿಸೆಯಲ್ಲಿದ್ದ ಭಗವದ್ಗೀತೆಯ ಕೆಲವು ಪುಟಗಳ ಮೂಲಕ ಗುರುತಿಸಲಾಯಿತು. ಮೇ. ಸೋಮನಾಥ ಶರ್ಮಾ ಅಮರರಾದರು. ಗುಲ್ಮಾರ್ಗ್ ಹೆಸರೇ ಸೂಚಿಸುವಂತೆ ಹೂವಿನ ರಸ್ತೆಯಂತಿದೆ. ಒಂದು ಬದಿಯಿಂದ ಎತ್ತರದ ಪೀರ್ ಪಂಜಾಬ್ ಪರ್ವತಗಳು ಹಿಮಪಾತದಿಂದ ಬೆಳ್ಳಿ ಹೊದಿಕೆ ಹೊತ್ತಂತೆ ಕಂಡರೆ ರಸ್ತೆಗಳ ಅಕ್ಕಪಕ್ಕದ ವಿಶಾಲ ಪ್ರದೇಶದಲ್ಲಿ ರುವ ಸಹಸ್ರಾರು ಹೂವಿನಿಂದ ತುಂಬಿರುವ ಗಿಡ ಮರಗಳಿಂದ ದೇವಲೋಕ ಧರೆಗಿಳಿದಂತೆ ಭಾಸವಾಗುತ್ತದೆ. ಕೆಲವೊಮ್ಮೆ ರಸ್ತೆಗಳು, ಹೂವಿನ ಹಾಸಿಗೆಯಂತೆ ಕಂಗೊಳಿಸುತ್ತವೆ. ಆದರೆ ಆ ಹೂಗಳಲ್ಲಿರುವ ಕೆಂಪು ಬಣ್ಣದ ಚುಕ್ಕೆಗಳು, ಚಿತ್ತಾರಗಳು, ಕಲೆಗಳು ಭಾರತೀಯ ಯೋಧರು ಹರಿಸಿರುವ ರಕ್ತವನ್ನು ನೆನಪಿಸುತ್ತದೆ.


ಭಕ್ತರಿಲ್ಲಿ ರಸ್ತೆ, ಬಯಲಲ್ಲೇ ಮಲಗುವ ದುಸ್ಥಿತಿ!

- ನಂಜನಗೂಡು ಶ್ರೀಕಂಠೇಶ್ವರಸ್ವಾಮಿ ದೇವಾಲಯದ ಮುಂಭಾಗವೇ ಭಕ್ತರ ಆಶ್ರಯ ತಾಣ
- ಆದಾಯಕ್ಕೇನೂ ಕಮ್ಮಿ ಇಲ್ಲ, ಆದರೂ ಸೌಲಭ್ಯ ಕಲ್ಪಿಸಲು ಆಡಳಿತ ವರ್ಗಕ್ಕೆ ಮನಸ್ಸಿಲ್ಲ

ಮೈಸೂರು, ಆ.26(ಬಿಸಿಟಿ, ಪಿಎಂ)– ದೇವಸ್ಥಾನ ಆಡಳಿತ ಮಂಡಳಿಗೆ ಮೂಲ ಸೌಕರ್ಯ ಕಲ್ಪಿಸುವಂತೆ ಹಲವು ವರ್ಷಗಳಿಂದ ದೇವಸ್ಥಾನದ ಹುಂಡಿಗೆ ಭಕ್ತರು ಪತ್ರ ಬರೆದು ಹಾಕುತ್ತಿದ್ದರೂ ಪ್ರಯೋಜನವಾಗಿಲ್ಲ. ಟೆಂಪಲ್ ಟೌನ್ ಅಥವಾ ದಕ್ಷಿಣ ಕಾಶಿ ಎಂದೇ ಕರೆಯಲ್ಪಡುವ ನಂಜನಗೂಡಿನ ಪ್ರಸಿದ್ಧ ಶ್ರೀಕಂಠೇಶ್ವರಸ್ವಾಮಿ ದೇವಾಲಯವು ಭಕ್ತರ ಕಾಣಿಕೆಯಿಂದ ವಾರ್ಷಿಕ 30 ಕೋಟಿ ರೂ.ಗೂ ಅಧಿಕ ಆದಾಯ ಗಳಿಸುತ್ತಿದೆ. ಆದರೆ ಅದೇ ಭಕ್ತರು ರಸ್ತೆ ಬದಿ ಮತ್ತು ದೇವಾಲಯದ ಮುಂಭಾಗದ ತೆರೆದ ಆವರಣದಲ್ಲಿ ಮಲಗುವ ದುಸ್ಥಿತಿ ಎದುರಾಗಿದೆ.

ದೇವಾಲಯದ ಆದಾಯವನ್ನು ಮಾಸಿಕವಾಗಿ ಎಣಿಸಲಾಗುತ್ತಿದ್ದು, ಜುಲೈ ತಿಂಗಳೊಂದರಲ್ಲೇ ಹುಂಡಿಯಲ್ಲಿ 1,12,92,056 ರೂ. ಸಂಗ್ರಹವಾಗಿದೆ. ಅಲ್ಲದೆ ಹೆಚ್ಚುವರಿಯಾಗಿ 51.380 ಗ್ರಾಂ ಚಿನ್ನ, 18 ಕೆಜಿ ಬೆಳ್ಳಿ ಮತ್ತು 40 ವಿದೇಶಿ ಕರೆನ್ಸಿಗಳನ್ನು ಭಕ್ತರು ಕಾಣಿಕೆಯಾಗಿ ನೀಡಿದ್ದಾರೆ. 2023ರಲ್ಲಿ ದೇವಾಲಯವು 30.73 ಕೋಟಿ ಗಳಿಸಿದೆ. ಇಂತಹ ಸಂಪತ್ತು ಹೊಂದಿದ್ದರೂ ಭಕ್ತರು ಮಾತ್ರ ದೇವಾಲಯದ ಹೊರಾವಣದಲ್ಲಿ ಮಲಗುವ ಪರಿಸ್ಥಿತಿ ಇರುವುದು ದುರಂತ. ರಾತ್ರಿ ತಂಗುದಾಣ ಸೇರಿದಂತೆ ಮೂಲ ಸೌಕರ್ಯಗಳ ಕೊರತೆ ಇದ್ದು, ಶೌಚಾಲಯಗಳೂ ಸಮರ್ಪಕವಾಗಿಲ್ಲ.

ಅಲ್ಲದೆ, ಪೂಜಾ ವಿಧಿವಿಧಾನ ನಡೆಸಲು, ಇಲ್ಲಿನ ಕಪಿಲಾ ನದಿ ಸ್ನಾನ ಘಟ್ಟಗಳಲ್ಲಿ ಸ್ನಾನ ಮಾಡುವ ಮಹಿಳೆಯರಿಗೆ ಬಟ್ಟೆ ಬದಲಿಸಲು ಸೂಕ್ತ ಸೌಲಭ್ಯಗಳಿಲ್ಲ. ಹಾಗಾಗಿ ಮಹಿಳೆಯರು ಇಲ್ಲಿ ಸಾಕಷ್ಟು ಮುಜುಗರಕ್ಕೆ ಒಳಗಾಗುತ್ತಿದ್ದಾರೆ. ಜೊತೆಗೆ ಶುದ್ಧ ಕುಡಿಯುವ ನೀರಿನ ವ್ಯವಸ್ಥೆಯೂ ಇಲ್ಲ. ನದಿಯ ಸ್ನಾನ ಘಟ್ಟಗಳಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲು ಕ್ರಮ ಕೈಗೊಂಡಿಲ್ಲ.



ದೇವಸ್ಥಾನದ ಮುಂಭಾಗದ ರಸ್ತೆಯಲ್ಲಿ ಭಕ್ತರು ಮಲಗಿರುವುದು

ಹುಂಡಿ ಸಂಗ್ರಹದಿಂದ ರಾಜ್ಯ ಸರ್ಕಾರಕ್ಕೆ ಚಿನ್ನ, ಬೆಳ್ಳಿ ಕಾಣಿಕೆ ಮಾತ್ರವಲ್ಲದೆ, ಸಾಕಷ್ಟು ಆದಾಯ ಬರುತ್ತಿದ್ದರೂ, ಭಕ್ತರಿಗೆ ಮೂಲಸೌಕರ್ಯ ಕಲ್ಪಿಸುವಲ್ಲಿ ಅಧಿಕಾರಿ ವರ್ಗ ನಿರ್ಲಕ್ಷ್ಯ ವಹಿಸಿದೆ. ಪರಿಣಾಮ ಮಹಿಳೆಯರು, ಯುವತಿಯರು, ಮಕ್ಕಳು ದೇವಸ್ಥಾನದ ಮುಂಭಾಗ ನೆಲದ ಮೇಲೆ ಮಬ್ಬುಗತ್ತಲೆಯಲ್ಲಿ ಮಲಗುವ ದುಸ್ಥಿತಿ ಇದೆ.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಯುವ ಬ್ರಿಗೇಡ್ ಜಿಲ್ಲಾ ಸಂಚಾಲಕ ಎಸ್.ಚಂದ್ರಶೇಖರ್, ಇಂತಹ ದುಸ್ಥಿತಿ ಬಗ್ಗೆ ಕಳವಳ ವ್ಯಕ್ತಪಡಿಸಿದರು. ಈ ವರ್ಷ ಜುಲೈನಲ್ಲಿ ಹುಂಡಿಗಳನ್ನು ತೆರೆದಾಗ, ದೇವಾಲಯಕ್ಕೆ ಮೂಲ ಸೌಲಭ್ಯ ಕಲ್ಪಿಸುವಂತೆ ದೇವರಲ್ಲಿ ಕೋರಿರುವ ಪತ್ರಗಳು ಕಂಡು ಬಂದವು. ಇಲ್ಲಿನ ಅವ್ಯವಸ್ಥೆ ಬಗ್ಗೆ ಬೇಸತ್ತ ಭಕ್ತರು ಅನೇಕ ಪತ್ರಗಳನ್ನು ಬರೆದು ದೇವರಲ್ಲೇ ಸೌಲಭ್ಯ ಕಲ್ಪಿಸುವಂತೆ ಕೋರಿದ್ದಾರೆ. ನಂಜುಂಡೇಶ್ವರನಿಗೆ ಬೇಡಿಕೆ ಇಟ್ಟರೆ ಸಮಸ್ಯೆಗಳು ಪರಿಹಾರ ಆಗುತ್ತದೆ ಎಂಬ ನಂಬಿಕೆ ಭಕ್ತರಲ್ಲಿ ಬಲವಾಗಿದೆ ಎಂದರು.

ಕೆಲ ಭಕ್ತರು ನಂಜುಂಡೇಶ್ವರನಿಗೆ ಬರೆದ ಪತ್ರದಲ್ಲಿ ದೇವಾಲಯ ಆವರಣದಲ್ಲಿ ತಂಗಿದ್ದಾಗ ತಮ್ಮ ಮೇಲೆ ನಡೆದ ದೌರ್ಜನ್ಯದ ಬಗ್ಗೆ ಉಲ್ಲೇಖಿಸಿದ್ದಾರೆ. ಪೊಲೀಸರು ಲಾಠಿಯಿಂದ ಹೊಡೆದಿರುವುದು, ಬೂಟುಗಳಿಂದ ತುಳಿದಿರುವುದು, ಲಾಡ್ಜ್‌ಗಳಲ್ಲಿ ರೂಂ ಪಡೆಯುವಂತೆ ಕಿಡಿಕಾರಿರುವುದು ಸೇರಿದಂತೆ ಮೊದಲಾದ ಸಂಗತಿಗಳು ಪತ್ರದಲ್ಲಿ ಪ್ರಸ್ತಾಪಗೊಂಡಿವೆ. ಗಮನಾರ್ಹವೆಂದರೆ 2020ರ ಅಕ್ಟೋಬರ್ 1ರಂದು ದೇವಾಲಯದ ಆವರಣದಲ್ಲಿ ಮಲಗಿದ್ದ ಮಹಿಳೆಯಿಂದ ಹೆಣ್ಣು ಮಗು ಅಪಹರಿಸಲಾಗಿತ್ತು. ಅದೃಷ್ಟವಶಾತ್ ನಂಜನಗೂಡು ಪೊಲೀಸರು ಅಪಹರಣಕಾರನ್ನು ಬಂಧಿಸಿ ಮಗುವನ್ನು ಸುರಕ್ಷಿತವಾಗಿ ತಾಯಿಗೆ ಒಪ್ಪಿಸಿದ್ದರು.

ಬೆಂಗಳೂರು, ಮದ್ದೂರು, ಬನ್ನೂರು ಮತ್ತು ಚನ್ನಪಟ್ಟಣದ ಮಹಿಳಾ ಭಕ್ತರು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿ, ದೇವಾಲಯದಲ್ಲಿರುವ ಕೊರತೆಗಳನ್ನು ಹಂಚಿಕೊಂಡರು. 'ಶ್ರೀಕಂಠೇಶ್ವರ ನಮ್ಮ ಕುಲದೈವವಾದ ಹಿನ್ನೆಲೆಯಲ್ಲಿ ಇಲ್ಲಿಗೆ ಆಗಾಗ್ಗೆ ಬರುತ್ತೇವೆ. ಆದರೆ ಇಲ್ಲಿ ಶೌಚಾಲಯ, ಬಟ್ಟೆ ಬದಲಾಯಿಸಲು ಕೊಠಡಿ, ರಾತ್ರಿ ತಂಗುದಾಣದ ವ್ಯವಸ್ಥೆ ಇಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ನಮಗೆ ಇಲ್ಲಿ ಉಳಿದುಕೊಳ್ಳಲು ದೊಡ್ಡ ಸಭಾಂಗಣ ಅಥವಾ ಛತ್ರದ ವ್ಯವಸ್ಥೆ ಇಲ್ಲ. ಆದ್ದರಿಂದ ನಾವು ರಸ್ತೆಯಲ್ಲೇ ಮಲಗಬೇಕಾದ ಅನಿವಾರ್ಯತೆ ಸೃಷ್ಟಿಯಾಗಿದೆ. ಈ ಹೊರಾವರಣದಲ್ಲಿ ಮಲಗಿದ್ದಾಗ, ಮಧ್ಯರಾತ್ರಿ ಆಗುತ್ತಿದಂತೆ ಚಳಿ ಹೆಚ್ಚಾಗುತ್ತದೆ. ಮಳೆ ಬಂದರೆ ನಾವು ನೆನೆಯದೇ ಬೇರೆ ದಾರಿ ಇಲ್ಲ. ನಾವು ನದಿಯಲ್ಲಿ ಸ್ನಾನ ಮಾಡುವಾಗ ಕೆಲ ಪುರುಷರು ಆಗಾಗ್ಗೆ ನೋಡುವುದೂ ಇದೆ' ಎಂದು ಅಳಲು ತೋಡಿಕೊಂಡರು.

ತನ್ನ ಮೂವರು ಮಕ್ಕಳನ್ನು ಕರೆತಂದಿದ್ದ ಮತ್ತೊಬ್ಬ ಭಕ್ತೆ ಮಾತನಾಡಿ, ಧರ್ಮಸ್ಥಳದಂತಹ ಕ್ಷೇತ್ರದಲ್ಲಿ ಸಕಲ ವ್ಯವಸ್ಥೆಗಳನ್ನು ಕಲ್ಪಿಸಲಾಗಿದೆ. ಆದರೆ ಇಲ್ಲಿ ಯಾವುದೇ ಸಮರ್ಪಕ ಸೌಲಭ್ಯ ಇಲ್ಲ. ನಾವೇನು ಐಷಾರಾಮಿ ಸೌಲಭ್ಯ ನೀಡುವಂತೆ ಕೇಳುತ್ತಿಲ್ಲ. ಕನಿಷ್ಠ ಮೂಲ ಸೌಲಭ್ಯ ಕಲ್ಪಿಸಿದರೆ ಸಾಕು ಎಂದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಶ್ರೀ ಕೃಷ್ಣ ಜನ್ಮಾಷ್ಟಮಿ; ಗೋಪೂಜೆ: ಮೇವು ವಿತರಣೆ



ಅಪೂರ್ವ ಸ್ನೇಹ ಬಳಗದ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಗೋ ಪೂಜೆ ಸಲ್ಲಿಸಿ ಗೋವುಗಳಿಗೆ ಮೇವು ವಿತರಿಸಲಾಯಿತು.

ಮೈಸೂರು,ಆ.26–ಮೈಸೂರಿನ ನಂಜುಮಳಿಗೆ ಸಮೀಪ ಇರುವ ಶ್ರೀ ವೇಣು ಗೋಪಾಲ ಕೃಷ್ಣ ಸ್ವಾಮಿ ದೇವಸ್ಥಾನ ಮುಂಭಾಗ ಅಪೂರ್ವ ಸ್ನೇಹ ಬಳಗದ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ಗೋ ಪೂಜೆ ಸಲ್ಲಿಸಿ ಗೋವುಗಳಿಗೆ ಮೇವು ವಿತರಿಸಲಾಯಿತು.

ಬಳಿಕ ನಗರಪಾಲಿಕೆ ಮಾಜಿ ಸದಸ್ಯ ಮಾ.ವಿ.ರಾಮಪ್ರಸಾದ್ ಮಾತನಾಡಿ, ಕೃಷ್ಣ ಪರಮಾತ್ಮ ಬೋಧಿಸಿದ ಗೀತೋಪದೇಶದ ತತ್ವಗಳನ್ನು ಬದುಕಿನಲ್ಲಿ ಅಳವಡಿಸಿಕೊಂಡು, ಉತ್ತಮವಾದ ಸಮಾಜ ನಿರ್ಮಾಣ ಮಾಡೋಣ. ಭಾರತದಲ್ಲಿ ಮಾತ್ರವಲ್ಲದೇ ಜಗತ್ತಿನ ಎಲ್ಲ ರಾಷ್ಟ್ರಗಳಲ್ಲೂ ಕೃಷ್ಣನನ್ನು ಆರಾಧಿಸುತ್ತಾರೆ. ಜಯಂತಿಯನ್ನು ವಿಶ್ವದಾದ್ಯಂತ ವಿಜೃಂಭಣೆಯಿಂದ ಆಚರಿಸುತ್ತಿರುವುದು ಕೃಷ್ಣನ ಜನಪ್ರಿಯತೆಯನ್ನು ಪ್ರತಿಬಿಂಬಿಸುತ್ತದೆ ಎಂದರು. ಬಳಗದ ಅಧ್ಯಕ್ಷ ಅಪೂರ್ವ ಸುರೇಶ್, ಮುಖಂಡರಾದ ಅಂಬಲೆ ಶಿವಣ್ಣ, ರಾಕೇಶ್, ಆನಂದ್, ಪ್ರಕಾಶ್, ಧನರಾಜ್ ಮತ್ತಿತರರು ಉಪಸ್ಥಿತರಿದ್ದರು.

ರೋಟರಿ ಉತ್ತರ ಪ್ರಾಥಮಿಕ ಶಾಲೆಯಲ್ಲಿ ಶ್ರೀಕೃಷ್ಣಜನ್ಮಾಷ್ಟಮಿ...



ಮೈಸೂರು ತಾಲೂಕಿನ ವಾಜಮಂಗಲದ ರೋಟರಿ ಮೈಸೂರು ಉತ್ತರ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಮಕ್ಕಳು ರಾಧಾ, ಕೃಷ್ಣ, ರುಕ್ಮಿಣಿ, ಗೋಪಿಕಾ ಸ್ತ್ರೀಯರ ವೇಷ ಧರಿಸಿ, ಸಂಭ್ರಮಿಸಿದರು.

ವೈಭವ ಶ್ರೀ ಕೃಷ್ಣೋತ್ಸವ ಕಾರ್ಯಕ್ರಮ ಆಯೋಜನೆ

ಮೈಸೂರು,ಆ.26– ಕರ್ನಾಟಕ ಸರ್ಕಾರ ಹಾಗೂ ಧಾರ್ಮಿಕ ದತ್ತಿ ಇಲಾಖೆ ವತಿಯಿಂದ ಆಗಸ್ಟ್ 28 ರಿಂದ ಸೆಪ್ಟೆಂಬರ್ 5ರವರೆಗೆ ಅರಮನೆ ಕೋಟೆ ಆವರಣದ ಶ್ರೀ ಪ್ರಸನ್ನ ಕೃಷ್ಣಸ್ವಾಮಿ ದೇವಸ್ಥಾನದಲ್ಲಿ ಪ್ರತಿದಿನ ಸಂಜೆ 6 ಗಂಟೆಗೆ ವೈಭವ ಶ್ರೀ ಕೃಷ್ಣೋತ್ಸವವನ್ನು ಆಯೋಜಿಸಲಾಗಿದೆ. ಆ.28ರಂದು ಶಿಕ್ಯೋತ್ಸವ, 29ರಂದು ಪೂತನಿ ಸಂಹಾರ, 30ರಂದು ಶಕಟಾಸುರ ಸಂಹಾರ, 31ರಂದು ಬಕಾಸುರ ವಧೆ, ಸೆ.1ರಂದು ಯಮಳಾರ್ಜುನ ಮೋಕ್ಷ, 2ರಂದು ಮೋಹಿನಿ ಅಲಂಕಾರ, 3ರಂದು ಮಲ್ಲಯುದ್ಧ, 4ರಂದು ರಾಸಕ್ರೀಡೆ (ಗೋವಿಗೆ ಕಾಮಧೇನು ಅಲಂಕಾರ) ರಾಸ ಕ್ರೀಡೆಯಾದ ನಂತರ ರಾತ್ರಿ 8ಕ್ಕೆ ದೇವಸ್ಥಾನದಲ್ಲಿ ಕಂಸವಧೆ ನಡೆಯುತ್ತದೆ. ಸೆ. 5ರಂದು ರುಕ್ಮಿಣಿ ಕಲ್ಯಾಣೋತ್ಸವ ನಡೆಯಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ತೊಟ್ಟಿಲ ತೂಗಿ ಕೃಷ್ಣ ಜನ್ಮಾಷ್ಟಮಿ ಆಚರಿಸಿದ ರಾಮಕೃಷ್ಣ ವಿದ್ಯಾಕೇಂದ್ರದ ಮಕ್ಕಳು

ಮೈಸೂರು,ಆ.26–ಮೈಸೂರಿನ ರಾಮಕೃಷ್ಣನಗರದ ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯ ವತಿಯಿಂದ ಸೋಮವಾರ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು. ಭಗವಾನ್ ಶ್ರೀ ಕೃಷ್ಣನಿಗೆ ರಾಮಕೃಷ್ಣ ಸೇವಾಸಂಘದ ಕಾರ್ಯದರ್ಶಿ ಎಂ.ದೊರೆರಾಜು ಭಕ್ತಿಪೂರ್ವಕವಾಗಿ ಆರತಿ ಬೆಳಗಿ ಪೂಜಿಸಿದರು.

ಶಿಕ್ಷಕರ ಮಾರ್ಗದರ್ಶನದಲ್ಲಿ ನರ್ಸರಿ ಮಕ್ಕಳು ಶ್ರೀ ಕೃಷ್ಣನ ಕುರಿತಾದ ಪ್ರಾರ್ಥನೆಯನ್ನು ಸುಮಧುರವಾಗಿ ಹಾಡಿದರು. ಅನಂತರ ಎಲ್ಲಾ ಮಕ್ಕಳು 'ಕೃಷ್ಣ ಸಂಕೀರ್ತನೆ' ಮಾಡಿದರು. ರಾಧಾ ಕೃಷ್ಣರ ವೇಷವನ್ನು ಧರಿಸಿದ ಮಕ್ಕಳು 'ತೂಗುವೆ ಕೃಷ್ಣ ತೂಗುವೆ ರಂಗನಾ' ಹಾಡಿಗೆ ನೃತ್ಯವನ್ನು ಮಾಡಿದರು. ಜೋ.... ಜೋ..... ಕೃಷ್ಣ ಎಂದು ಹೇಳುತ್ತಾ ತೊಟ್ಟಿಲನ್ನು ತೂಗಿ ಸಂಭ್ರಮಿಸಿದರು.



ಮೈಸೂರಿನ ರಾಮಕೃಷ್ಣ ವಿದ್ಯಾಕೇಂದ್ರ ಶಾಲೆಯ ವತಿಯಿಂದ ಶ್ರೀ ಕೃಷ್ಣ ಜನ್ಮಾಷ್ಟಮಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

1 ಮತ್ತು 2ನೇ ತರಗತಿಯ ವಿದ್ಯಾರ್ಥಿಗಳು ನೃತ್ಯ ಮಾಡಿದರು. ಮಕ್ಕಳು ಕೃಷ್ಣನ ಕುರಿತಾದ ಕೆಲವು ವಿಷಯಗಳನ್ನು ತಮ್ಮ ಮಾತಿನ ಮೂಲಕ ಹಂಚಿಕೊಂಡರು.

ಕೃಷ್ಣಾಷ್ಟಮಿಯಂದೇ ನರ್ಸರಿ ಮಕ್ಕಳ ಚಟುವಟಿಕೆ ಕೊಠಡಿಯನ್ನು ಪೋಷಕರಿಂದಲೇ ಉದ್ಘಾಟಿಸಲಾಯಿತು.

ರಾಮಕೃಷ್ಣ ಸೇವಾ ಸಂಘದ ಅಧ್ಯಕ್ಷ ಎಂ.ಪಾಪೇಗೌಡ ಅಧ್ಯಕ್ಷತೆ ವಹಿಸಿದ್ದರು.

ಕಾರ್ಯನಿರ್ವಾಹಕ ಅಧಿಕಾರಿ ಜಿ.ಚಂದ್ರಶೇಖರ್, ರಾಮಕೃಷ್ಣ ವಿದ್ಯಾಕೇಂದ್ರದ ಪ್ರೌಢಶಾಲಾ ಮುಖ್ಯೋಪಾಧ್ಯಾಯ ಜಿ.ಎನ್.ವಿಶ್ವನಾಥ್ ಮತ್ತು ಪ್ರಾಥಮಿಕ ಶಾಲೆಯ ಮುಖ್ಯೋಪಾಧ್ಯಾಯಿನಿ ವೀಣಾ ಕೆ.ಹೆಗಡೆ, ಸಂಘದ ಖಜಾಂಚಿ ಹೆಚ್.ಜಿ.ರಮೇಶ್ ಹಾಗೂ ಶಾಲೆಯ ವಿದ್ಯಾರ್ಥಿಗಳು, ಶಿಕ್ಷಕ–ಶಿಕ್ಷಕೇತರರು ಹಾಗೂ ಪೋಷಕರು ಭಾಗವಹಿಸಿದ್ದರು.

ಮಕ್ಕಳಿಗೆ ಶ್ರೀ ಕೃಷ್ಣನ ವಿಚಾರಧಾರೆಗಳು ಪ್ರೇರಣೆದಾಯಕ

ಶ್ರೀ ಕೃಷ್ಣಧಾಮ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಮಕ್ಕಳಿಗೆ ಕೃಷ್ಣ, ರಾಧೆ ವೇಷಭೂಷಣ ಸ್ಪರ್ಧೆ



ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀಕೃಷ್ಣ ಧಾಮದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ ಮತ್ತು ಶ್ರೀ ಕೃಷ್ಣ ಟ್ರಸ್ಟ್ ಆಯೋಜಿಸಿದ್ದ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮಕ್ಕಳಿಗೆ ಕೃಷ್ಣ ರಾಧೆ ವೇಷಭೂಷಣ ಸ್ಪರ್ಧೆ ಕಾರ್ಯಕ್ರಮ ನಡೆಯಿತು.

ಮೈಸೂರು, ಆ. 26– ಮಹಾಭಾರತದಲ್ಲಿ ಬರುವ ಪ್ರತಿಯೊಂದು ಪಾತ್ರವೂ ಜೀವನ ಸಾರವನ್ನು ತಿಳಿಸುತ್ತದೆ. ಶಿಷ್ಟರ ರಕ್ಷಣೆಗಾಗಿ ದುಷ್ಟರ ಸಂಹಾರ ಮಾಡುವ ಮೂಲಕ ಶ್ರೀಕೃಷ್ಣ ಬಾಲ್ಯದ ಲೀಲೆಗಳು ಮಕ್ಕಳಿಗೆ ಪ್ರೇರಣದಾಯಕವಾಗಲಿದೆ ಎಂದು ಶ್ರೀ ಕೃಷ್ಣ ಟ್ರಸ್ಟ್ ಉಪಾಧ್ಯಕ್ಷ ರವಿ ಶಾಸ್ತ್ರಿ ಹೇಳಿದರು.

ಮೈಸೂರಿನ ಸರಸ್ವತಿಪುರಂನಲ್ಲಿರುವ ಶ್ರೀಕೃಷ್ಣಧಾಮದಲ್ಲಿ ಶ್ರೀ ಕೃಷ್ಣ ಮಿತ್ರ ಮಂಡಳಿ ಮತ್ತು ಶ್ರೀ ಕೃಷ್ಣ ಟ್ರಸ್ಟ್ ಆಯೋಜಿಸಿದ್ದ ಶ್ರೀ ಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಮಕ್ಕಳಿಗೆ ಕೃಷ್ಣ ರಾಧೆ ವೇಷಭೂಷಣ ಸ್ಪರ್ಧೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಮಕ್ಕಳಿಗೆ ಮಹಾಭಾರತ, ರಾಮಾಯಣ ಹಾಗೂ ಇತಿಹಾಸ ಪುರುಷರ ಜೀವನ ಚರಿತ್ರೆಗಳನ್ನು ತಿಳಿಸುವ ಮೂಲಕ ಅವರನ್ನು ಉತ್ತಮ ಪ್ರಜೆಗಳನ್ನಾಗಿ ರೂಪಿಸುವುದು ಪೋಷಕರ ಜವಾಬ್ದಾರಿಯಾಗಿದೆ. ಕಲಿಕೆಯಲ್ಲಿ ಮಕ್ಕಳಿಗೆ ಉತ್ತಮ ನೀತಿ ಪಾಠಗಳು ಹಾಗೂ ಶ್ರೀ ಕೃಷ್ಣ ಲೋಕ ಕಲ್ಯಾಣಕ್ಕಾಗಿ ಮಾಡಿದ ಸಾಧನೆಗಳ ಬಗ್ಗೆ ತಿಳುವಳಿಕೆ ಮೂಡಿಸಬೇಕು ಎಂದರು.

ಸ್ಪರ್ಧೆಯಲ್ಲಿ ನೂರಕ್ಕೂ ಹೆಚ್ಚು ಮಕ್ಕಳು ಶ್ರೀ ಕೃಷ್ಣ ಮತ್ತು ರಾಧೆಯ ವೇಷಭೂಷಣ ಧರಿಸಿ, ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಉತ್ತಮವಾಗಿ ಶ್ರೀ ಕೃಷ್ಣ, ರಾಧೆ ವೇಷ ಧರಿಸಿದ ಮಕ್ಕಳಿಗೆ ಬಹುಮಾನವನ್ನು ನೀಡಲಾಯಿತು. ಸ್ಪರ್ಧಿಸಿದ ಮಕ್ಕಳಿಗೆ ನೆನಪಿನ ಕಾಣಿಕೆ ನೀಡಲಾಯಿತು. ಶ್ರೀಕೃಷ್ಣ ಮಿತ್ರ ಮಂಡಳಿ ಅಧ್ಯಕ್ಷ ಪ್ರವೀಣ್‌ರಾವ್, ಉಪಾಧ್ಯಕ್ಷ ಗೋಪಾಲಕೃಷ್ಣ, ಕಾರ್ಯದರ್ಶಿ ರಾಘವೇಂದ್ರ, ಶ್ರೀವತ್ಸ, ಮುರಳಿ, ಮಂಗಳ ಹಾಗೂ ಇನ್ನಿತರ ಪದಾಧಿಕಾರಿಗಳು ಹಾಜರಿದ್ದರು.

ವಿವಿಧ ವೇಷಭೂಷಣ ಸ್ಪರ್ಧೆ...



ಪೇರೆಂಟ್ಸ್ ಅಸೋಸಿಯೇಷನ್ ಆಫ್ ಡೆಫ್ ಚಿಲ್ಡ್ರನ್ ಅವರು ನಡೆಸುತ್ತಿರುವ ಇನ್‌ಸ್ಟಿಟ್ಯೂಟ್ ಆಫ್ ಮದರ್ ಅಂಡ್ ಡೆಫ್ ಚೈಲ್ಡ್ ಸಂಸ್ಥೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಶಾಲೆಯ ಮಕ್ಕಳು ಕೃಷ್ಣನ ವಿವಿಧ ವೇಷ ಭೂಷಣ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ತೀರ್ಪುಗಾರರಾಗಿ ಅಂಬುಜಾ ಶ್ರೀಧರ್, ಚಂದ್ರಿಕಾ ಮತ್ತು ಅರುಣ ದಿನಕರ್ ಶೆಟ್ಟಿ ಆಗಮಿಸಿದ್ದರು. ಛಾಯಾಚಿತ್ರದಲ್ಲಿ ಭಾಗವಹಿಸಿದ್ದ ಮಕ್ಕಳು ಹಾಗೂ ಬಹುಮಾನ ವಿಜೇತರೊಂದಿಗೆ ತೀರ್ಪುಗಾರರು, ಶಾಲಾ ಶಿಕ್ಷಕ ವೃಂದದವರು ಇದ್ದಾರೆ.

ವಿಶ್ವಪ್ರಜ್ಞ ಶಾಲೆಯಲ್ಲಿ ಕೃಷ್ಣಜನ್ಮಾಷ್ಟಮಿ...



ಮೈಸೂರಿನ ದಟ್ಟಗಳ್ಳಿಯಲ್ಲಿರುವ ವಿಶ್ವಪ್ರಜ್ಞ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿಯ ಪ್ರಯುಕ್ತ ನರ್ಸರಿ ವಿಭಾಗದ ಕಿಡ್ಸ್ ಪ್ಯಾರಡೈಸ್‌ನಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಮಕ್ಕಳು ಕೃಷ್ಣ, ರಾಧೆಯರ ವೇಷಭೂಷಣದಲ್ಲಿ ಕಂಗೊಳಿಸಿದರು. ಪೂಜೆ, ಭಜನೆಗಳ ಮೂಲಕ ಕೃಷ್ಣನನ್ನು ಆರಾಧಿಸಿ, ಮಡಕೆ ಒಡೆಯುವುದರೊಂದಿಗೆ ಸಂಭ್ರಮಿಸಲಾಯಿತು. ಶಾಲೆಯ ಆಡಳಿತ ಮಂಡಳಿ ಕಾರ್ಯಾಧ್ಯಕ್ಷ ಎಂ.ಎನ್.ಕೃಷ್ಣಸ್ವಾಮಿ, ಮುಖ್ಯೋಪಾಧ್ಯಾಯಿನಿ ಜಿ.ಎನ್.ಸುಧಾ, ಸಹಶಿಕ್ಷಕಿಯರು ಮತ್ತು ಪೋಷಕರು ಉಪಸ್ಥಿತರಿದ್ದರು.

ಶ್ರೀ ಕೃಷ್ಣ ಜನ್ಮಾಷ್ಟಮಿ ಅಂಗವಾಗಿ ವಿವಿಧ ವೇಷಭೂಷಣ...



ಮೈಸೂರಿನ ಡಿ.ಎ.ವಿ ಪಬ್ಲಿಕ್ ಶಾಲೆಯಲ್ಲಿ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಈ ವೇಳೆ ನರ್ಸರಿ ವಿಭಾಗದ ಮಕ್ಕಳು ಶ್ರೀಕೃಷ್ಣ ಮತ್ತು ರಾಧೆಯ ವೇಷಭೂಷಣ ತೊಟ್ಟು ಎಲ್ಲರ ಗಮನ ಸೆಳೆದರು. ಶಾಲೆಯ ಸಿಇಓ ಜಯಶ್ರೀ ಎಸ್.ಮೂರ್ತಿ, ಪ್ರಾಂಶುಪಾಲರಾದ ಶೋಭ, ಉಪಪ್ರಾಂಶುಪಾಲರಾದ ಕಾವ್ಯ ಬಸಪ್ಪ, ಮುಖ್ಯೋಪಾಧ್ಯಾಯಿನಿ ಬಿಂದುಶ್ರೀ, ಶಿಕ್ಷಕ ವೃಂದ, ಮಕ್ಕಳು ಭಾಗವಹಿಸಿದ್ದರು.

ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಕೃಷ್ಣ ಜನ್ಮಾಷ್ಟಮಿ



ಮೈಸೂರಿನ ಅಗ್ರಹಾರದಲ್ಲಿರುವ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಕೃಷ್ಣನ ವಿಗ್ರಹಕ್ಕೆ ವಿಶೇಷವಾಗಿ ಅಲಂಕರಿಸಿ ಪೂಜಿಸಿ, ಸಾರ್ವಜನಿಕರಿಗೆ ಪ್ರಸಾದ ವಿತರಿಸಲಾಯಿತು.

ಮೈಸೂರು, ಆ. 26– ಅಗ್ರಹಾರದಲ್ಲಿರುವ ಕೃಷ್ಣರಾಜ ಪೊಲೀಸ್ ಠಾಣೆಯಲ್ಲಿ ಪ್ರತಿ ವರ್ಷದಂತೆ ಈ ವರ್ಷವೂ ಠಾಣೆಯಲ್ಲಿರುವ ಕೃಷ್ಣನ ವಿಗ್ರಹಕ್ಕೆ ವಿಶೇಷವಾಗಿ ಅಲಂಕರಿಸಿ ಪೂಜಿಸಿ, ನಂತರ ಪ್ರಸಾದ ವಿತರಿಸಲಾಯಿತು.

ಕೆ.ಆರ್.ಠಾಣೆಯ ವೃತ್ತ ನಿರೀಕ್ಷಕ ನಾಗೇಗೌಡ, ಕೆಆರ್ ಪೊಲೀಸ್ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಹರೀಶ್ ಹಾಗೂ ಪಿ.ಆರ್.ಮಂಜು ಮತ್ತು ಮಹಿಳಾ ಪೇದೆಗಳಾದ ನಂದಿನಿ, ಅರ್ಪಿತ, ಆಶಿ ಲೋಕೇಶ್, ಸ್ಥಳೀಯ ಮುಖಂಡರಾದ ಕೆಆರ್ ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ, ನಜರ್‌ಬಾದ್ ನಟರಾಜ್, ರಾಘವೇಂದ್ರ, ನವೀನ್ ಕೆಂಪಿ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ವಿನೋದ್ ರಾಜ್, ಸಂತೋಷ್ ಕಿರಾಲು, ನಿವೃತ್ತ ಪೊಲೀಸ್ ಅಧಿಕಾರಿ ಬೀರೇಗೌಡ, ಹರೀಶ್ ನಾಯ್ಡು, ಎಸ್.ಎನ್.ರಾಜೇಶ್, ರಾಕೇಶ್, ರವಿಚಂದ್ರ, ಕನಕ ಮೂರ್ತಿ ಹಾಗೂ ಸಿಬ್ಬಂದಿ ಹಾಜರಿದ್ದರು.

ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ



ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು.

ಮೈಸೂರು, ಆ.26–ಮೈಸೂರು ಜಯನಗರದ ಶ್ರೀ ವಿವೇಕ ಬಾಲೋದ್ಯಾನ ಪಬ್ಲಿಕ್ ಶಾಲೆಯಲ್ಲಿ ಶ್ರೀ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಶ್ರೀ ಕೃಷ್ಣ ವಿಗ್ರಹಕ್ಕೆ ಪೂಜೆಯನ್ನು ನೆರವೇರಿಸಿ, ವಿದ್ಯಾರ್ಥಿಗಳಿಂದ ಶ್ರೀ ಕೃಷ್ಣನ ಸುಮಧುರವಾದ ಭಕ್ತಿ ರಸಭರಿತವಾದ ಗೀತೆಗಳು, ಭಜನೆಗಳನ್ನು ಹಾಗೂ ಶ್ರೀ ಕೃಷ್ಣನ ಬಾಲಲೀಲೆಗಳನ್ನು ಲೀಲಾ ವಿನೋದಗಳನ್ನು ಪ್ರತಿಬಿಂಬಿಸುವ ನೃತ್ಯಗಳನ್ನು ಪ್ರದರ್ಶಿಸಲಾಯಿತು. ಆಡಳಿತ ಮಂಡಳಿ ಕಾರ್ಯದರ್ಶಿ ನಾಗೇಶ್ ಮಾತನಾಡಿ, ಶ್ರೀ ಕೃಷ್ಣನ ಜನನದಿಂದ ಹಿಡಿದು ಶ್ರೀ ಕೃಷ್ಣನು ಮಾಡಿದ ಲೀಲಾ ವಿನೋದಗಳ ಬಗ್ಗೆ ಹಾಗೂ ಧರ್ಮ ಸಂಸ್ಥಾಪನಾಚಾರ್ಯನಾಗಿ ಕಾರ್ಯನಿರ್ವಹಿಸಿದ ಬಗ್ಗೆ ತಿಳಿಸುತ್ತಾ, ಇಡೀ ಲೋಕಕ್ಕೆ ಭಗವದ್ಗೀತೆಯಂತಹ ಒಂದು ಉತ್ತಮ ಉಪದೇಶವನ್ನು ನೀಡಿದ ಶ್ರೀ ಕೃಷ್ಣನು ಅಜರಾಮರ. ಅವನು ನಿಸ್ವಾರ್ಥಿ ಎಂಬ ವಿಷಯಗಳನ್ನು ಮಕ್ಕಳಿಗೆ ತಿಳಿಸಿಕೊಟ್ಟರು.

ಶಾಲೆಯ ಮುಖ್ಯ ಆಡಳಿತ ಅಧಿಕಾರಿ ಭವಾನಿ ನಾಗೇಶ್, ಪ್ರಾಂಶುಪಾಲರಾದ ಡಾ. ಎನ್.ಭಾರತೀಯ ಶಂಕರ್, ಶ್ರೀ ಕೃಷ್ಣ ಜನ್ಮಾಷ್ಟಮಿಯ ಮಹತ್ವವನ್ನು ಕುರಿತು ಮಾತನಾಡಿದರು.

ಕೃಷ್ಣ, ರಾಧೆ ವೇಷಭೂಷಣದಲ್ಲಿ ಮಿಂಚಿದ ವಾಸವಿ ಕಾನ್ವೆಂಟ್ ಪುಟಾಣಿಗಳು



ಮೈಸೂರು ಕೂರ್ಗಳ್ಳಿಯ ವಾಸವಿ ಕಾನ್ವೆಂಟ್‌ನಲ್ಲಿ ಏರ್ಪಡಿಸಿದ್ದ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶಾಲಾ ಮಕ್ಕಳು ಕೃಷ್ಣ, ರಾಧೆ ವೇಷಭೂಷಣ ಪ್ರದರ್ಶಿಸಿದರು.

ಮೈಸೂರು,ಆ.26– ಮೈಸೂರು ಕೂರ್ಗಳ್ಳಿಯ ವಾಸವಿ ಕಾನ್ವೆಂಟ್‌ನಲ್ಲಿ ಸಮೃದ್ಧಿ ವಾರ್ತಾ ಪತ್ರಿಕೆ ಹಾಗೂ ಕೆಎಂಪಿಕೆ ಟ್ರಸ್ಟ್ ಸಂಯುಕ್ತ ಆಶ್ರಯದಲ್ಲಿ ಏರ್ಪಡಿಸಿದ್ದ ಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಶಾಲಾ ಮಕ್ಕಳು ಕೃಷ್ಣ, ರಾಧೆ ವೇಷಭೂಷಣ ಪ್ರದರ್ಶಿಸಿದರು.

ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿದ ಶಾಲೆಯ ಕಾರ್ಯದರ್ಶಿ ವಿ.ಅನಂತ್ ರಾಮ್, ಮಕ್ಕಳಿಗೆ ಸಂಪ್ರದಾಯ, ಸಂಸ್ಕೃತಿ ಕಲಿಸುವ ಕೆಲಸ ಶಾಲಾ–ಕಾಲೇಜು ಮತ್ತು ಮನೆಗಳಲ್ಲಿಯೂ ಆಗಬೇಕಿದೆ. ಆರೋಗ್ಯವಂತ ಮಕ್ಕಳಿದ್ದರೆ ಆರೋಗ್ಯವಂತ ದೇಶ ನಿರ್ಮಾಣ ಸಾಧ್ಯ. ಮಕ್ಕಳು ಉತ್ತಮ ವಿದ್ಯೆ, ಸಂಸ್ಕಾರ ಕಲಿಯಬೇಕೆಂದರೆ ಉತ್ತಮ ಶಿಕ್ಷಕರ ಅಗತ್ಯವಿದೆ ಎಂದರು.

ಈ ಸಂದರ್ಭದಲ್ಲಿ ಶಾಲೆಯ ಮುಖ್ಯ ಶಿಕ್ಷಕರಾದ ಜಯರಾಮೇಗೌಡ, ಸಮೃದ್ಧಿ ವಾರ್ತಾಪತ್ರಿಕೆ ಸಂಪಾದಕಿ ಸಹನಾ, ಜೀವಧಾರ ರಕ್ತನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಕೆಎಂಪಿಕೆ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ಧನಲಕ್ಷ್ಮಿ ರಾಮು, ಮುರಳಿಧರ್ ಹಾಗೂ ಶಿಕ್ಷಕ ವೃಂದ ಹಾಜರಿದ್ದರು.

ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಪ್ರಕ್ರಿಯೆ ತಡೆ ತೆರವು ಕೋರಿದ ಅರ್ಜಿ ವಿಚಾರಣೆ ಸೆ.5ಕ್ಕೆ

ಬೆಂಗಳೂರು, ಆ.26– ಮೈಸೂರಿನ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆ ಪ್ರಕ್ರಿಯೆಗೆ ನೀಡಿರುವ ತಡೆ ತೆರವು ಕೋರಿ ರಾಜ್ಯ ಸರ್ಕಾರ ಸಲ್ಲಿಸಿರುವ ಮಧ್ಯಂತರ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಸೆಪ್ಟೆಂಬರ್ 5ಕ್ಕೆ ನಿಗದಿಪಡಿಸಿದೆ.

ಪ್ರಕರಣ ಸಂಬಂಧ ವಿಚಾರಣೆ ನಡೆಸಿದ್ದ ನ್ಯಾಯಾಲಯ, ಪ್ರಾಧಿಕಾರ ರಚನೆ ಕುರಿತ ಕಾಯ್ದೆ ಜಾರಿಗೊಳಿಸಬಾರದು ಎಂದು ಜುಲೈ 26ರಂದು ಆದೇಶಿಸಿತ್ತು. ಆದರೆ ಸರ್ಕಾರ ಜೂನ್ 28ರಂದೇ ಕಾಯ್ದೆ ಜಾರಿಗೆ ಆದೇಶ ಹೊರಡಿಸಿದ್ದು, ಜುಲೈ 1ರಿಂದಲೇ ಕಾಯ್ದೆ ಜಾರಿಗೆ ಬಂದಿದೆ. ಹಾಗಾಗಿ, ನ್ಯಾಯಾಲಯ ಆದೇಶವನ್ನು ತೆರವು ಮಾಡಬೇಕು ಎಂದು ಸರ್ಕಾರ ತನ್ನ ಮಧ್ಯಂತರ ಅರ್ಜಿಯಲ್ಲಿ ಕೋರಿದೆ. ಸರ್ಕಾರದ ಈ ಮಧ್ಯಂತರ ಅರ್ಜಿಯನ್ನು ಆಗಸ್ಟ್ 22ರಂದು ನ್ಯಾಯಮೂರ್ತಿ ಹೇಮಂತ್ ಚಂದನಗೌಡರ್ ಅವರಿದ್ದ ಏಕಸದಸ್ಯ ಪೀಠ ವಿಚಾರಣೆ ನಡೆಸಿತ್ತು. ವಿಚಾರಣೆ ವೇಳೆ ಸರ್ಕಾರದ ಪರ ವಕೀಲರು, ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ ರಚನೆಗೆ ಆಕ್ಷೇಪ ವ್ಯಕ್ತಪಡಿಸಿ ಪ್ರಮೋದಾದೇವಿ ಒಡೆಯರ್ ಸಲ್ಲಿಸಿರುವ ಅರ್ಜಿ ಸಂಬಂಧ ಜುಲೈ 26ರಂದು ಮುಂದಿನ ಆದೇಶದವರೆಗೆ ಪ್ರಾಧಿಕಾರ ರಚನೆ ಕಾಯ್ದೆ ಜಾರಿಗೊಳಿಸಬಾರದು ಎಂದು ನ್ಯಾಯಾಲಯ ಮಧ್ಯಂತರ ಆದೇಶ ನೀಡಿತ್ತು. ಆ ನಂತರ ಮಧ್ಯಂತರ ಆದೇಶವನ್ನು ಮತ್ತೆ ವಿಸ್ತರಿಸಿದೆ ಎಂದರು. ಅಲ್ಲದೆ, ವಾಸ್ತವವಾಗಿ ಕೋರ್ಟ್ ಆದೇಶ ನೀಡುವ ಮುನ್ನವೇ ಅಂದರೆ ಜೂನ್ 28ರಂದೇ ಸರ್ಕಾರ ಪ್ರಾಧಿಕಾರ ರಚನೆ ಕುರಿತು ಅಧಿಸೂಚನೆ ಹೊರಡಿಸಿದ್ದು, ಜುಲೈ 1ರಿಂದ ಕಾಯ್ದೆ ಜಾರಿಗೆ ಬಂದಿದೆ. ಪ್ರಾಧಿಕಾರದ ಕಾರ್ಯದರ್ಶಿಯನ್ನಾಗಿ ಕೆಎಎಸ್ ಅಧಿಕಾರಿ ಎಂ.ಜೆ.ರೂಪಾ ಅವರನ್ನು ನೇಮಕ ಮಾಡಲಾಗಿದೆ. ಹಾಗಾಗಿ, ನ್ಯಾಯಾಲಯದ ಮಧ್ಯಂತರ ಆದೇಶ ಊರ್ಜಿತವಲ್ಲ ಎಂದು ನ್ಯಾಯಪೀಠಕ್ಕೆ ವಿವರಿಸಿದರು.

ಆದರೆ, ಪ್ರಮೋದಾದೇವಿ ಒಡೆಯರ್ ಪರ ವಕೀಲರು, ಮತ್ತೆ ಮಧ್ಯಂತರ ಆದೇಶವನ್ನು ನೀಡಬೇಕು ಎಂದು ಕೋರಿದರು. ಆ ಹಿನ್ನೆಲೆಯಲ್ಲಿ ನ್ಯಾಯಾಲಯ, ಪ್ರಕರಣ ಸಂಬಂಧ ಆಕ್ಷೇಪಣೆ ಸಲ್ಲಿಸುವಂತೆ ಒಡೆಯರ್ ಪರ ವಕೀಲರಿಗೆ ಸೂಚನೆ ನೀಡಿ, ವಿಚಾರಣೆಯನ್ನು ಸೆ.5ಕ್ಕೆ ಮುಂದೂಡಿತು.

ನೈರುತ್ಯ ರೈಲ್ವೆ ಮೈಸೂರು ವಿಭಾಗದಲ್ಲಿ ಕ್ಯೂಆರ್ ಕೋಡ್ ಆಧಾರಿತ ಟಿಕೆಟಿಂಗ್ ವ್ಯವಸ್ಥೆ ಜಾರಿ

ಮೈಸೂರು, ಆ.26(ಎಸ್‌ಬಿಡಿ)– ನೈರುತ್ಯ ರೈಲ್ವೆ ಮೈಸೂರು ವಿಭಾಗವು ಅತ್ಯಾಧುನಿಕ ಕ್ಯೂಆರ್ ಕೋಡ್ ಆಧಾರಿತ ಟಿಕೆಟಿಂಗ್ ವ್ಯವಸ್ಥೆ ಜಾರಿಗೆ ತಂದಿದೆ.

ಈ ನವೀನ ಸೌಲಭ್ಯವು ಮೈಸೂರು ಸೇರಿದಂತೆ 81 ನಿಲ್ದಾಣಗಳ 94 ಅನ್ ರಿಸರ್ವ್ಡ್ ಟಿಕೆಟಿಂಗ್ ಸಿಸ್ಟಮ್(UTS) ಕೌಂಟರ್‌ಗಳಲ್ಲಿ ಲಭ್ಯವಿದೆ. ಇದರಿಂದ ಸಾಮಾನ್ಯ ವರ್ಗದ ಟಿಕೆಟ್ ಮತ್ತು ಪ್ಲಾಟ್‌ಫಾರ್ಮ್ ಟಿಕೆಟ್‌ಗಳನ್ನು ಖರೀದಿಗೆ ಅನುಕೂಲವಾಗಿದೆ.

ಕ್ಯೂಆರ್ ಕೋಡ್ ವ್ಯವಸ್ಥೆಯಲ್ಲಿ ಪ್ರಯಾಣಿಕರು ತಮ್ಮ ಮೊಬೈಲ್ ವ್ಯಾಲೆಟ್‌ಗಳು ಅಥವಾ ಯುಪಿಐ(UPI) ಸಕ್ರಿಯಗೊಳಿಸಿದ ಬ್ಯಾಂಕ್ ಖಾತೆಗಳನ್ನು ಅತ್ಯಂತ ಸರಳವಾಗಿ ಹಣ ಪಾವತಿ ಮಾಡಬಹುದು. ಇದಲ್ಲದೆ, 25 ಸ್ವಯಂಚಾಲಿತ ಟಿಕೆಟ್ ವಿತರಣಾ ಯಂತ್ರಗಳನ್ನು (ಎಟಿವಿಎಂ) 12 ಸ್ಥಳಗಳಲ್ಲಿ ಸ್ಥಾಪಿಸಲಾಗಿದ್ದು, ಪ್ರಯಾಣಿಕರು ಕಾಯ್ದಿರಿಸದ ಪ್ರಯಾಣದ ಟಿಕೆಟ್‌ಗಳು ಮತ್ತು ಪ್ಲಾಟ್‌ಫಾರ್ಮ್ ಟಿಕೆಟ್‌ಗಳನ್ನು ಸುಲಭವಾಗಿ ಖರೀದಿಸಲು ಅನುವಾಗಿದೆ. ಟಿಕೆಟ್ ಬುಕಿಂಗ್ ಹೆಚ್ಚಿಸುವ ಪ್ರಯತ್ನದಲ್ಲಿ, ನೈರುತ್ಯ ರೈಲ್ವೆಯ ನಾಲ್ಕು ನಿಲ್ದಾಣಗಳಲ್ಲಿ ಪ್ರಯಾಣಿಕರ ಕಾಯ್ದಿರಿಸುವಿಕೆ ವ್ಯವಸ್ಥೆ(PRS)ಯಡಿ ಟಿಕೆಟ್ ಬುಕಿಂಗ್‌ಗಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಸೌಲಭ್ಯವನ್ನು ಪ್ರಾಯೋಗಿಕವಾಗಿ ಜಾರಿಗೆ ತರಲಾಗಿದೆ. ಪ್ರಯಾಣಿಕರು ಟಿಕೆಟ್ ದರದ ಮೊತ್ತವನ್ನು ಯುಪಿಐ ಅಪ್ಲಿಕೇಶನ್‌ಗಳ ಮೂಲಕ ಪಾವತಿ, ದೃಢೀಕರಣದ ನಂತರ ಟಿಕೆಟ್‌ಗಳನ್ನು ಸ್ವೀಕರಿಸುವ ಪ್ರಕ್ರಿಯೆ ಸುಲಭವಾಗಲಿದೆ.



ರೈಲು ಪ್ರಯಾಣಿಕರೊಬ್ಬರು ಟಿಕೆಟ್ ದರ ಪಾವತಿಗೆ ಕ್ಯೂಆರ್ ಕೋಡ್ ಬಳಸುತ್ತಿರುವುದು.

ಇದು ಪ್ರಯಾಣಿಕರ ಸೌಲಭ್ಯಗಳನ್ನು ಹೆಚ್ಚಿಸುವುದರ ಜೊತೆಗೆ ಡಿಜಿಟಲ್ ವಹಿವಾಟುಗಳನ್ನು ಉತ್ತೇಜಿಸಲು ರೈಲ್ವೆ ಸಚಿವಾಲಯದ ಸಂಘಟಿತ ಪ್ರಯತ್ನಗಳ ಭಾಗವಾಗಿದೆ. ಕ್ಯೂಆರ್ ಕೋಡ್ ಪಾವತಿ ಸೌಲಭ್ಯವು ಈಗ ಎಲ್ಲಾ ವಿಭಾಗೀಯ ಅಂಗಡಿಗಳು, ಆಹಾರ ಪ್ಲಾಜಾಗಳು, ಶೌಚಾಲಯಗಳ ಬಳಕೆಗೆ ಪಾವತಿ ಮತ್ತು ಪಾರ್ಕಿಂಗ್ ಸ್ಥಳಗಳಲ್ಲಿ ಹೆಚ್ಚು ಅನುಕೂಲಕರವಾಗಿದೆ.

ರೈಲ್ವೆ ಸೇವೆಯಲ್ಲಿ ಕ್ಯೂಆರ್ ಕೋಡ್ ಸೌಲಭ್ಯವು ಮಹತ್ವದ ಮೈಲಿಗಲ್ಲಾಗಿದೆ. ಪ್ರಯಾಣಿಕರಿಗೆ ಉತ್ತಮ ಸೇವೆ ಕಲ್ಪಿಸುವುದರೊಂದಿಗೆ ತಂತ್ರಜ್ಞಾನಗಳ ಬಳಕೆಯೊಂದಿಗೆ ಅವರ ಪ್ರಯಾಣದ ಪ್ರಕ್ರಿಯೆಗಳನ್ನು ಸರಳಗೊಳಿಸುವ ನಿಟ್ಟಿನಲ್ಲಿ ಈ ವ್ಯವಸ್ಥೆ ಸಹಕಾರಿಯಾಗಿದೆ ಎಂದು ಮೈಸೂರು ವಿಭಾಗೀಯ ರೈಲ್ವೆ ವ್ಯವಸ್ಥಾಪಕಿ ಶ್ರೀಮತಿ ಶಿಲ್ಪಿ ಅಗರ್ವಾಲ್ ಸಂತಸ ವ್ಯಕ್ತಪಡಿಸಿದ್ದಾರೆಂದು ವಿಭಾಗೀಯ ವಾಣಿಜ್ಯ ವ್ಯವಸ್ಥಾಪಕರೂ ಆದ ಸಾರ್ವಜನಿಕ ಸಂಪರ್ಕ ಅಧಿಕಾರಿ ಗಿರೀಶ್ ಕಲಗೊಂಡ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ರಾಜಕೀಯ ಪ್ರಭಾವಕ್ಕೆ ಒಳಗಾಗದೇ ಯೋಜನೆಗಳನ್ನು ಜನರಿಗೆ ತಲುಪಿಸಿ

ದಿಶಾ ಸಭೆಯಲ್ಲಿ ಅಧಿಕಾರಿಗಳಿಗೆ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಾಕೀತು

ಮಂಡ್ಯ,ಆ.26(ಮೋಹನ್‌ರಾಜ್)– ಜಿಲ್ಲೆಯ ಅಧಿಕಾರಿಗಳ ವರ್ಗ ಯಾವುದೇ ರಾಜಕೀಯ ಪ್ರಭಾವಕ್ಕೆ ಒಳಗಾಗದೇ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಎಲ್ಲಾ ಯೋಜನೆಗಳನ್ನು ಅರ್ಹ ಫಲಾನುಭವಿಗಳಿಗೆ ಸೂಕ್ತ ರೀತಿಯಲ್ಲಿ ತಲುಪಿಸಬೇಕೆಂದು ಕೇಂದ್ರ ಉಕ್ಕು ಹಾಗೂ ಭಾರಿ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ತಾಕೀತು ಮಾಡಿದರು.

ಸೋಮವಾರ ನಗರದ ಜಿಲ್ಲಾ ಪಂಚಾಯತ್‌ನ ಕಾವೇರಿ ಸಭಾಂಗಣದಲ್ಲಿ ದಿಶಾ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಅಧಿಕಾರಿಗಳು ಸರ್ಕಾರಿ ಯೋಜನೆಗಳನ್ನು ಒದಗಿಸಲು ಫಲಾನುಭವಿಗಳನ್ನು ಆಯ್ಕೆ ಮಾಡುವಾಗ ಪಾರದರ್ಶಕ ಹಾಗೂ ಅರ್ಹತೆಯನ್ನು ನೋಡಬೇಕು. ಅರ್ಹ ಫಲಾನುಭವಿಗಳಿಗೆ ಯೋಜನೆಯ ಉಪಯೋಗ ಸಿಕ್ಕಾಗ ಸಾರ್ಥಕತೆ ಇರುತ್ತದೆ. ಕೆಲ ರಾಜಕಾರಣಿಗಳು ಇಂತಹ ಸಂದರ್ಭದಲ್ಲಿ ಅಧಿಕಾರಿಗಳ ಮೇಲೆ ಪ್ರಭಾವ ಬೀರುತ್ತಾರೆ. ರಾಜಕಾರಣಿಗಳ ಉದ್ದೇಶ ಒಳ್ಳೆಯದಾಗಿದ್ದರೆ ಪ್ರಭಾವಕ್ಕೆ ಮಣಿಯಿರಿ. ಆದರೆ ದುರುದ್ದೇಶಪೂರ್ವಕವಾಗಿದ್ದರೆ ಅವರ ಪ್ರಭಾವಕ್ಕೆ ಯಾವುದೇ ಕಾರಣಕ್ಕೂ ಒಳಗಾಗದಂತೆ ಎಚ್ಚರಿಸಿದರು.

ಮಂಡ್ಯ ಜಿಲ್ಲೆಯಲ್ಲಿ ಅಧಿಕಾರಿಗಳಿಗೆ ರಾಜಕೀಯ ಒತ್ತಡ ಇರುವ ಬಗ್ಗೆ ನನಗೆ ಮಾಹಿತಿ ಇದೆ. ರಾಜಕಾರಣಿಗಳು ಮಾತ್ರ ರಾಜಕಾರಣ ಮಾಡಬೇಕು. ಅಧಿಕಾರಿಗಳು ರಾಜಕೀಯ ಮಾಡುವುದನ್ನು ನಾನು ಸಹಿಸುವುದಿಲ್ಲ. ಇದರಿಂದ ಜನರ ಮೇಲೆ ಪರಿಣಾಮ ಬೀರುವ ಸಾಧ್ಯತೆ ಇದ್ದು, ಅಧಿಕಾರಿಗಳು ಜನಸೇವೆಗೆ ಹಾಗೂ ಅಭಿವೃದ್ಧಿಯ ಕಡೆಗೆ ಗಮನ ಹರಿಸಬೇಕು. ಯಾರನ್ನೋ ಮೆಚ್ಚಿಸಲು ಅಧಿಕಾರಿಗಳು ಕೆಲಸ ಮಾಡುವ ಅವಶ್ಯಕತೆ ಇಲ್ಲ. ರಾಜಕೀಯವನ್ನು ಬದಿಗಿಟ್ಟು ಜನರಿಗೆ ಒಳಿತಾಗುವ ಕೆಲಸಕ್ಕೆ ಮುಂದಾಗಬೇಕೆಂದು ಸಲಹೆ ನೀಡಿದರು.



ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಂಡ್ಯದಲ್ಲಿ ದಿಶಾ ಸಭೆ ನಡೆಸಿದರು.

ನರೇಗಾ ಯೋಜನೆ ಅನುಷ್ಠಾನ ಆಗುತ್ತಿಲ್ಲ: ಸಭೆಯಲ್ಲಿ ಮಾತನಾಡಿದ ಶಾಸಕ ಹೆಚ್.ಟಿ. ಮಂಜು, ಕೆ.ಆರ್.ಪೇಟೆಯಲ್ಲಿ ನರೇಗಾ ಯೋಜನೆ ಸಮರ್ಪಕವಾಗಿ ಅನುಷ್ಠಾನ ಆಗಿಲ್ಲ. ಇದರಿಂದ ಜನರಿಗೆ ಅನಾನುಕೂಲವಾಗುತ್ತಿದೆ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಇದಕ್ಕೆ ಉತ್ತರ ನೀಡಿದ ಜಿಪಂ ಸಿಇಓ ಶೇಕ್ ತನ್ವೀರ್ ಆಸೀಫ್, ಕೆಲವು ಕಡೆ ಲೋಪವಾಗಿರುವ ಬಗ್ಗೆ ನಮಗೂ ಮಾಹಿತಿ ಬಂದಿದೆ. ಇನ್ಮುಂದೆ ಯೋಜನೆಗಳು ಸಮರ್ಪಕವಾಗಿ ಅನುಷ್ಠಾನ ಮಾಡುವ ನಿಟ್ಟಿನಲ್ಲಿ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸುವುದಾಗಿ ತಿಳಿಸಿದರು.

ಸ್ಲಂ ಜನರಿಗೆ ಸಾಲ ದೊರೆಯುತ್ತಿಲ್ಲ: ಸ್ಲಂ ಪ್ರದೇಶದಲ್ಲಿ ವಾಸಿಸುವ ಜನರಿಗೆ ತಮ್ಮ ಮನೆ ಅಥವಾ ನಿವೇಶನಗಳ ಮೇಲೆ ಸಾಲ ದೊರೆಯುತ್ತಿಲ್ಲ. ಕೆಲವರಿಗೆ ಹಕ್ಕುಪತ್ರ ವಿತರಣೆಯಾಗಿದ್ದರೂ ಸಾಲ ಮಂಜೂರಾಗುತ್ತಿಲ್ಲ. ಸ್ಲಂ ಜನರಿಗೆ ಸಾಲ ನೀಡಲು ಅಧಿಕಾರಿಗಳು ಹಿಂದೆ ಮುಂದೆ ನೋಡುತ್ತಾರೆ. ಮಂಡ್ಯದ ಗಾಂಧಿ ನಗರದಲ್ಲಿ ಇಂತಹ ಸಮಸ್ಯೆಯಾಗಿದೆ ಎಂದು ಶಾಸಕ ರವಿಕುಮಾರ್ ಗಣಿಗ ಬೇಸರ ಹೊರಹಾಕಿದರು. ಇದಕ್ಕೆ ಉತ್ತರಿಸಿದ ಅಧಿಕಾರಿಗಳು, ಕೆಲವರಿಗೆ ಹಕ್ಕುಪತ್ರ ಸಮರ್ಪಕ ರೀತಿಯಲ್ಲಿ ವಿತರಣೆಯಾಗದ ಹಿನ್ನೆಲೆಯಲ್ಲಿ ಸಾಲ ಕೊಡಲು ಸಮಸ್ಯೆಯಾಗಿದೆ. ಈ ಸಮಸ್ಯೆ ಬಗೆಹರಿಸುವುದಾಗಿ ಭರವಸೆ ನೀಡಿದರು.

ಇದಕ್ಕೆ ಧನಿಗೂಡಿಸಿದ ಜಿಲ್ಲಾಧಿಕಾರಿ ಡಾ.ಕುಮಾರ ಮಂಡ್ಯ ಜಿಲ್ಲೆಯ ಅನೇಕ ಪ್ರದೇಶಗಳಲ್ಲಿ ಸ್ಲಂ ಜನರನ್ನು ಬೇರೆಡೆಗೆ ವರ್ಗಾಯಿಸುವ ಕೆಲಸವಾಗುತ್ತಿದೆ. ಇದಕ್ಕೆ ಸ್ಲಂ ಜನರು ಒಪ್ಪುತ್ತಿಲ್ಲ. ಉದಾಹರಣೆಗೆ ಮಂಡ್ಯ ನಗರದ ಮಿಮ್ಸ್ ಬಳಿ ಇರುವ ಸ್ಲಂ ಜನರಿಗೆ ಚಿಕ್ಕಮಂಡ್ಯ ಕೆರೆ ಅಂಗಳದಲ್ಲಿ ಜಿ ಪ್ಲಸ್ ತ್ರಿ ಮನೆಗಳು ಅಲಾಟ್ ಆಗಿದೆ. ಆದರೆ ಹಾಲಹಳ್ಳಿ ಬಡಾವಣೆ ಮಾದರಿಯ ಜಿ ಪ್ಲಸ್ ಒನ್ ರೀತಿಯ ಮನೆಗಳೇ ನಮಗೆ ಬೇಕೆಂದು ಹೈಕೋರ್ಟ್‌ಗೆ ಮೊರೆ ಹೋಗಿದ್ದಾರೆ ಎಂದು ಸಭೆಗೆ ತಿಳಿಸಿದಾಗ ಈ ಬಗ್ಗೆ ಮಾತನಾಡಿದ ಹೆಚ್.ಡಿ.ಕುಮಾರಸ್ವಾಮಿ, ಅವರ ಬಳಿ ಮಾತನಾಡಿ, ಮನವೊಲಿಸಿ ಎಂದು ಮನವಿ ಮಾಡಿದರು. ಆಗ ಡಿಸಿ ಈ ಬಗ್ಗೆ ಮಾತುಕತೆ ನಡೆಸಿ ಅವರನ್ನು ಸ್ಥಳಾಂತರಕ್ಕೆ ಒಪ್ಪಿಸಲಾಗುವುದು. ಜೊತೆಗೆ ಮಿಮ್ಸ್ ಆಸ್ಪತ್ರೆಯನ್ನು ವಿಸ್ತರಿಸಲಾಗುವುದು ಎಂದು ತಿಳಿಸಿದರು.

ಸಭೆಯಲ್ಲಿ ರೈತರ ಆತ್ಮಹತ್ಯೆ ಬಗ್ಗೆ ಹೆಚ್.ಡಿ.ಕುಮಾರಸ್ವಾಮಿ ವರದಿ ಕೇಳಿದಾಗ ಉತ್ತರಿಸಿದ ಕೃಷಿ ಇಲಾಖೆ ಜಂಟಿ ನಿರ್ದೇಶಕ ಅಶೋಕ್, ಕಳೆದ ವರ್ಷ ಬರದಿಂದ 45 ರೈತರು ಆತ್ಮಹತ್ಯೆ ಮಾಡಿಕೊಂಡಿದ್ದರು. ಈ ಪೈಕಿ 43 ಮಂದಿ ರೈತರಿಗೆ ಪರಿಹಾರ ಒದಗಿಸಿದ್ದು, ಈ ವರ್ಷ ಬರ ಇಲ್ಲ ಆದರೂ ಏಳು ರೈತರು ಆತ್ಮಹತ್ಯೆ ಮಾಡಿಕೊಂಡಿದ್ದು, ಪರಿಹಾರ ಒದಗಿಸಿದ್ದೇವೆ. ರೈತರ ಆತ್ಮಹತ್ಯೆ ಜಿಲ್ಲೆಯಲ್ಲಿ ಕಡಿಮೆಯಾಗಿದೆ ಎಂದು ವಿವರ ನೀಡಿದರು.

ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಕುಮಾರ, ಜಿ.ಪಂ. ಸಿಇಓ ಶೇಕ್ ತನ್ವೀರ್ ಆಸೀಫ್, ಶಾಸಕರಾದ ಹೆಚ್.ಟಿ.ಮಂಜು, ರವಿಕುಮಾರ್ ಗಣಿಗ, ಕೇಂದ್ರ ಸಚಿವ ಕುಮಾರಸ್ವಾಮಿ ಅವರ ಆಪ್ತ ಕಾರ್ಯದರ್ಶಿಗಳಾದ ಡಾ.ಕೃಷ್ಣಯ್ಯ, ತೇಜಸ್ವಿ ನಾಯಕ್ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

ಗಣಿಗ ಹೊರತುಪಡಿಸಿ ಕಾಂಗ್ರೆಸ್ ಶಾಸಕರು ಗೈರು

ಹೆಚ್.ಡಿ.ಕುಮಾರಸ್ವಾಮಿ ಅಧ್ಯಕ್ಷತೆಯಲ್ಲಿ ನಡೆದ ದಿಶಾ ಸಭೆಗೆ ಕಾಂಗ್ರೆಸ್ ಶಾಸಕ ಗಣಿಗ ರವಿಕುಮಾರ್ ಹೊರತುಪಡಿಸಿ ಜಿಲ್ಲೆಯ ಕಾಂಗ್ರೆಸ್‌ನ ಎಲ್ಲಾ ಶಾಸಕರು, ವಿಧಾನಪರಿಷತ್ ಸದಸ್ಯರು ಗೈರು ಹಾಜರಾಗಿದ್ದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಕೃಷಿ ಅಧ್ಯಯನ ಪ್ರವಾಸಕ್ಕೆ ವಿದೇಶಕ್ಕೆ ಹೋಗಿದ್ದರೆ, ಉಳಿದ ಶಾಸಕರುಗಳು ಗೈರು ಹಾಜರಾಗಿದ್ದರು. ಜೆಡಿಎಸ್‌ನ ಹೆಚ್.ಟಿ.ಮಂಜು ಭಾಗವಹಿಸಿದ್ದರೆ, ಇತ್ತ ಕಾಂಗ್ರೆಸ್‌ನ ರವಿಕುಮಾರ್ ಗಣಿಗ ಸಭೆಯಲ್ಲಿ ಭಾಗವಹಿಸಿ ಕುಮಾರಸ್ವಾಮಿಗೆ ಅಭಿನಂದಿಸಿ, ಕಾಲಿಗೆ ಬಿದ್ದು ಆಶೀರ್ವಾದ ಪಡೆದಿದ್ದು, ವಿಶೇಷವಾಗಿತ್ತು

ಸಭೆ ನಡುವೆ ಮುದ್ದೆ ಸವಿದ ಹೆಚ್ಡಿಕೆ



ಸಭೆ ನಡೆಯುತ್ತಿದ್ದ ಸಂದರ್ಭದಲ್ಲೇ ಅಧಿಕಾರಿ ವರ್ಗಕ್ಕೆ ಊಟದ ವ್ಯವಸ್ಥೆ ಮಾಡಲಾಗಿತ್ತು. ಈ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಶಾಸಕರಿಗೆ ಸಿದ್ಧಪಡಿಸಿರುವ ಊಟವನ್ನು ಸವಿಯುವಿರೋ ಅಥವಾ ಬೇರೆ ವ್ಯವಸ್ಥೆ ಮಾಡಬೇಕೇ ಎಂದು ಕುಮಾರಸ್ವಾಮಿ ಅವರನ್ನು ಪ್ರಶ್ನಿಸಿದರು.

ಎಲ್ಲರೂ ಮಾಡುವ ಊಟವನ್ನೇ ನನಗೂ ಕೊಡಿ ಎಂದು ಮುದ್ದೆ, ಉಪ್ಸಾರು, ಮೊಸರು, ಕೇಸರಿಬಾತ್ ಹಾಗೂ ಡ್ರೈ ಜಾಮೂನ್ ಅನ್ನು ಕೇಂದ್ರ ಸಚಿವರು ಸವಿದರು.

ಟಿಎಪಿಸಿಎಂಎಸ್ ವೇ-ಬ್ರಿಡ್ಜ್ ಉದ್ಘಾಟನೆ



ಪಾಂಡವಪುರ ಪಟ್ಟಣದಲ್ಲಿ ಟಿಎಪಿಸಿಎಂಎಸ್ ವತಿಯಿಂದ ನೂತನವಾಗಿ ನಿರ್ಮಿಸಿರುವ ವೇ-ಬ್ರಿಡ್ಜ್ ಅನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಉದ್ಘಾಟಿಸಿದರು. ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಡಿ.ಶ್ರೀನಿವಾಸ್, ಕೆ.ಎಸ್.ದಯಾನಂದ್ ಇತರರು ಇದ್ದರು.

ಪಾಂಡವಪುರ,ಆ.26–ಪಟ್ಟಣದ ಟಿಎಪಿಸಿಎಂಎಸ್ ರೈತ ಸಭಾಂಗಣದ ಬಳಿ ಸಂಸ್ಥೆ ವತಿಯಿಂದ ನೂತನವಾಗಿ ನಿರ್ಮಿಸಲಾಗಿರುವ 80 ಟನ್ ಸಾಮರ್ಥ್ಯದ ವೇ-ಬ್ರಿಡ್ಜ್ ಅನ್ನು ಶಾಸಕ ದರ್ಶನ್ ಪುಟ್ಟಣ್ಣಯ್ಯ ಹಾಗೂ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೋಮವಾರ ಉದ್ಘಾಟಿಸಿದರು.

ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಮಾತನಾಡಿ, ಟಿಎಪಿಸಿಎಂಎಸ್ ಆಡಳಿತ ಮಂಡಳಿ ಪದಾಧಿಕಾರಿಗಳು ರೈತರಿಗೆ ಅನುಕೂಲ ಕಲ್ಪಿಸುವ ನಿಟ್ಟಿನಲ್ಲಿ ಅನೇಕ ಶ್ಲಾಘನೀಯ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಬರುತ್ತಿದ್ದಾರೆ. ಸಂಸ್ಥೆ ವತಿಯಿಂದ ವೇ-ಬ್ರಿಡ್ಜ್ ತೆರೆಯಬೇಕು ಎಂಬುದು ರೈತರ ಬಹಳ ದಿನಗಳ ಬೇಡಿಕೆಯಾಗಿತ್ತು. ಅದರಂತೆ ಶಾಸಕರನ್ನು ಕರೆಯಿಸಿ ವೇ-ಬ್ರಿಡ್ಜ್ ಅನ್ನು ಉದ್ಘಾಟಿಸಲಾಗಿದೆ. ಇದರಿಂದ ವ್ಯಾಪಾರಸ್ಥರು ಮತ್ತು ರೈತರು ಕಬ್ಬು ಇತರೆ ಬೆಳೆಗಳನ್ನು ತೂಕ ಮಾಡಿಸಲು ಅನುಕೂಲವಾಗಿದೆ ಎಂದು ಹೇಳಿದರು.

ಈ ವೇಳೆ ರಾಜ್ಯ ಮಾರಾಟ ಮಹಮಂಡಳಿ ನಿರ್ದೇಶಕ ಶಿಳನೇರೆ ಮೋಹನ್, ಟಿಎಪಿಸಿಎಂಎಸ್ ಅಧ್ಯಕ್ಷ ಡಿ.ಶ್ರೀನಿವಾಸ್, ನಿರ್ದೇಶಕರಾದ ಕೆ.ಎಸ್.ದಯಾನಂದ್, ರಾಮಕೃಷ್ಣೇಗೌಡ, ಶ್ರೀಕಾಂತ್, ಬೆಟ್ಟಸ್ವಾಮಿಗೌಡ, ಮುಖಂಡರಾದ ಜೆಡಿಎಸ್ ತಾ ಅಧ್ಯಕ್ಷ ಎಸ್.ಎ.ಮಲ್ಲೇಶ್, ಎಂ.ಗಿರೀಶ್, ಎಪಿಎಂಸಿ ಸ್ವಾಮಿಗೌಡ, ಕಾರ್ಯದರ್ಶಿ ನವೀನ್ ಹಾಗೂ ಸಿಬ್ಬಂದಿ ವರ್ಗದವರು ಇತರರು ಇದ್ದರು.

ಇಂದು ವಿದ್ಯುತ್ ವ್ಯತ್ಯಯ

ಮಂಡ್ಯ,ಆ.26– ವಿ.ಸಿ.ಫಾರಂ ವಿದ್ಯುತ್ ವಿತರಣಾ ಕೇಂದ್ರದಿಂದ ಹೊರಡುವ ಫೀಡರ್‌ನಲ್ಲಿ ತುರ್ತು ಕಾರ್ಯನಿರ್ವಹಣೆ ಹಮ್ಮಿಕೊಂಡಿರುವುದರಿಂದ ಆಗಸ್ಟ್ 27 ರಂದು ಬೆಳಿಗ್ಗೆ 9 ಗಂಟೆಯಿಂದ ಸಂಜೆ 5 ಗಂಟೆಯವರೆಗೆ ವಿ.ಸಿ.ಫಾರಂ, ಮಾಚಗೌಡನಹಳ್ಳಿ, ಟಿ.ಮಲ್ಲಿಗೆರೆ, ಮಾಚಹಳ್ಳಿ, ಜಯಪುರ, ಹುಳ್ಳೇನಹಳ್ಳಿ, ಹಾಡ್ಯ, ಹುಲಿಕೆರೆ, ಹುಲಿಕೆರೆಕೊಪ್ಪಲು ಹಾಗೂ ಈ ಸುತ್ತಮುತ್ತಲಿನ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದೆ ಎಂದು ಮಂಡ್ಯ ಸೆಸ್ಕ್, ಕಾ ಮತ್ತು ಪಾ ವಿಭಾಗದ ಕಾರ್ಯ ನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ವಧು-ವರರ ಸಮಾವೇಶ

ಮಂಡ್ಯ: ರಾಜ್ಯ ಮಟ್ಟದ ಸವಿತಾ ಸಮುದಾಯದ ವಧು-ವರರ ಸಮಾವೇಶವನ್ನು ಸೆ.16ರಂದು ಬೆಳಿಗ್ಗೆ 10.30 ಗಂಟೆಗೆ ಬೆಂಗಳೂರಿನ ಮಾಗಡಿ ಮುಖ್ಯ ರಸ್ತೆ ಯಲಚಗುಪ್ಪೆಯ ಬೃಂದಾವನ ಫಾರ್ಮ್ ಹೌಸ್‌ನ ಪರಿಣಯ ಪಾರ್ಟಿ ಹಾಲ್‌ನಲ್ಲಿ ಆಯೋಜಿಸಲಾಗಿದೆ ಎಂದು ಸವಿತಾ ಸಮುದಾಯದ ಹಿರಿಯ ಮುಖಂಡ ಆಂಜನಪ್ಪ.ವಿ ತಿಳಿಸಿದ್ದಾರೆ. ನೋಂದಣಿಗೆ ವೆಂಕಟಾಚಲಪತಿ ಪಿ.ಬಿ ಮೊ. 9901196772, ಯಮುನಪ್ಪ ಮೊ. 9880936879 ಅವರನ್ನು ಸಂಪರ್ಕಿಸುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಭೂವರಾಹನಾಥ ಶ್ರೀ ಕ್ಷೇತ್ರಕ್ಕೆ ಮೇಘಾಲಯ ರಾಜ್ಯಪಾಲರ ಭೇಟಿ

ಕೆ.ಆರ್.ಪೇಟೆ,ಆ.26– ತಾಲೂಕಿನ ಪುರಾಣ ಪ್ರಸಿದ್ಧ ಪುಣ್ಯ ಕ್ಷೇತ್ರ ಕಲ್ಲಹಳ್ಳಿ ಭೂವರಾಹನಾಥ ಶ್ರೀ ಕ್ಷೇತ್ರಕ್ಕೆ ಮೇಘಾಲಯ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರು ಭೇಟಿ ನೀಡಿ ದೇವರ ದರ್ಶನ ಪಡೆದು, ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ದೇವಾಲಯದ ಮ್ಯಾನೇಜಿಂಗ್ ಟ್ರಸ್ಟಿ ಶ್ರೀನಿವಾಸ ರಾಘವನ್ ಅವರು ನೀಡಿದ ಅಭಿನಂದನೆ ಸ್ವೀಕರಿಸಿ ಮಾತನಾಡಿದ ಅವರು, ಭೂ ವರಾಹನಾಥ ಕ್ಷೇತ್ರವು ರಾಜ್ಯದ ಪ್ರಮುಖ ತೀರ್ಥಕ್ಷೇತ್ರವಾಗಿ ಅಭಿವೃದ್ಧಿ ಹೊಂದುತ್ತಿದೆ. 2ನೇ ಭೂವೈಕುಂಠವೆಂದೇ ಪ್ರಖ್ಯಾತಿಗಳಿಸಿರುವ ಕ್ಷೇತ್ರದ ಮಣ್ಣಿಗೆ ವಿಶೇಷ ಶಕ್ತಿಯಿದೆ. ಕಳೆದ ಆರು ತಿಂಗಳ ಹಿಂದೆ ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ಕ್ಷೇತ್ರಕ್ಕೆ ಬಂದು ಸ್ವಾಮಿಯ ಶಿಲಾಮೂರ್ತಿಗೆ ಪೂಜೆ ಸಲ್ಲಿಸಿ ಹೋಗಿದ್ದೆ. ಭೂವರಹನಾಥ ಸ್ವಾಮಿಯ ಕೃಪೆ ರಾಷ್ಟ್ರಪತಿಗಳಾದ ದ್ರೌಪದಿ ಮುರ್ಮು ಹಾಗೂ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಆಶೀರ್ವಾದದ ಬಲದಿಂದ ಇಂದು ರಾಜ್ಯಪಾಲ ಹುದ್ದೆಗೇರಿದ್ದೇನೆ. ಪುಣ್ಯ ಕ್ಷೇತ್ರಕ್ಕೆ ಭೇಟಿ ನೀಡಿದ್ದು ಸಂತೋಷ ತಂದಿದೆ ಹಾಗೂ ಸಂತೃಪಿಯ ಮನೋಭಾವನೆ ಮೂಡಿದೆ ಎಂದು ಸಿ.ಹೆಚ್.ವಿಜಯಶಂಕರ್ ಹೇಳಿದರು.

ಶ್ರೀ ಕ್ಷೇತ್ರಕ್ಕೆ ಆಗಮಿಸಿದ ರಾಜ್ಯಪಾಲ ವಿಜಯಶಂಕರ್ ಅವರನ್ನು ಮಾಜಿ ಸಚಿವ ಡಾ.ಕೆ.ಸಿ.ನಾರಾಯಣಗೌಡ, ದೇವಾಲಯ ವ್ಯವಸ್ಥಾಪನ ಸಮಿತಿಯ ಮ್ಯಾನೇಜಿಂಗ್ ಟ್ರಸ್ಟಿ ಶ್ರೀನಿವಾಸ ರಾಘವನ್, ತಹಸೀಲ್ದಾರ್ ಆದರ್ಶ ಹೃದಯಸ್ಪರ್ಶಿಯಾಗಿ ಸ್ವಾಗತಿಸಿ ಬರಮಾಡಿಕೊಂಡರು. ಪೂರ್ಣಕುಂಭ ಸ್ವಾಗತದೊಂದಿಗೆ ವೇದ ಮಂತ್ರಗಳನ್ನು ಪಠಿಸಿ ಶ್ರೀ ಕ್ಷೇತ್ರಕ್ಕೆ ಆಗಮಿಸಿದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರನ್ನು ಬರಮಾಡಿಕೊಳ್ಳಲಾಯಿತು. ಈ ಸಂದರ್ಭದಲ್ಲಿ ಮಂಡ್ಯ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಕೆ.ಶ್ರೀನಿವಾಸ್, ತಾಲೂಕು ಬಿಜೆಪಿ ಅಧ್ಯಕ್ಷ ಸಾರಂಗಿ ನಾಗಣ್ಣ, ಕಾರ್ಯದರ್ಶಿ ಚೋಕನಹಳ್ಳಿ ಪ್ರಕಾಶ್, ಉಪಾಧ್ಯಕ್ಷ ಭಾರತೀಪುರ ಪುಟ್ಟಣ್ಣ, ಜಿಲ್ಲಾ ಬಿಜೆಪಿ ನೇಕಾರ ಮೋರ್ಚಾ ಅಧ್ಯಕ್ಷ ಬಿಗ್ ಬಾಸ್ ಮೋಹನ್, ಜಿಲ್ಲಾ ಬಿಜೆಪಿ ಕಾರ್ಯಕಾರಿಣಿ ಸದಸ್ಯ ಶೀಳನೆರೆ ಭರತ್, ತಾಲೂಕು ಬಿಜೆಪಿ ಮಾಜಿ ಅಧ್ಯಕ್ಷ ಬಿ. ವರದರಾಜೇಗೌಡ, ರಾಜ್ಯ ಬಿಜೆಪಿ ಮಾಜಿ ಉಪಾಧ್ಯಕ್ಷೆ ಪ್ರಮೀಳಾ ವರದರಾಜೇಗೌಡ, ಪುರಸಭೆ ಸದಸ್ಯ ಕೆ.ಎಸ್. ಸಂತೋಷ್, ಕೆ.ವಿನೋದ್, ಬಿಜೆಪಿ ನಗರ ಮಹಿಳಾ ಘಟಕದ ಅಧ್ಯಕ್ಷೆ ಚಂದ್ರಕಲಾ ರಮೇಶ್, ನಾಗಮಂಗಲ ಡಿವೈಎಸ್‌ಪಿ ಡಾ.ಸುಮೀತ್, ಸರ್ಕಲ್ ಇನ್ಸ್‌ಪೆಕ್ಟರ್ ಆನಂದೇಗೌಡ, ನವೀನ್ ಸೇರಿದಂತೆ ಬಿಜೆಪಿ ಮುಖಂಡರು ಹಾಗೂ ನೂರಾರು ಅಭಿಮಾನಿಗಳು ಭಾಗವಹಿಸಿದ್ದರು.



ಶ್ರೀ ಕೃಷ್ಣ ಜನ್ಮಾಷ್ಟಮಿ



ಹಿಟ್ಟುವಳ್ಳಿ ಶ್ರೀ ವೇಣುಗೋಪಾಲ ಸ್ವಾಮಿ ದೇವಸ್ಥಾನದಲ್ಲಿ ವಿಜೃಂಭಣೆಯಿಂದ ಕೃಷ್ಣ ಜನ್ಮಾಷ್ಟಮಿ ಆಚರಿಸಲಾಯಿತು. ಶ್ರೀ ಕೃಷ್ಣನಿಗೆ ವಿಶೇಷ ಅಭಿಷೇಕ, ಪೂಜೆ ನೆರವೇರಿಸಲಾಯಿತು. ಈ ವೇಳೆ ದೇವಸ್ಥಾನದ ಟಿ.ಎನ್. ಅಜಯ್, ಟಿ.ಎಸ್. ಅರುಣ್, ಅಭಿಷೇಕ್, ನಾಗಮಣಿ ನಾಗರಾಜನ್, ಸ್ವಪ್ನ, ವೈಷ್ಣವಿ, ಹಿಟ್ಟುವಳ್ಳಿ ಗ್ರಾಮಸ್ಥರು ಉಪಸ್ಥಿತರಿದ್ದರು.

ಭೂಗಳ್ಳರು, ಗಣಿಗಳ್ಳರ ವಿರುದ್ಧ ತನಿಖೆಗೆ ಅನುಮತಿ ನೀಡದೇ ಸಿದ್ದರಾಮಯ್ಯರ ಟಾರ್ಗೆಟ್ ಮಾಡಲಾಗಿದೆ

ಮೈಸೂರು,ಆ.26(ಎಂಟಿವೈ)– ಭೂಗಳ್ಳರು, ಗಣಿಗಳ್ಳರ ವಿರುದ್ಧದ ಪ್ರಕರಣಗಳಿಗೆ ಸಂಬಂಧಿಸಿದ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದ ರಾಜ್ಯಪಾಲರು, ಯಾವುದೇ ಹುರುಳಿಲ್ಲದ ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವ ಮೂಲಕ ತಾವು ಕೇಂದ್ರ ಸರ್ಕಾರದ ಕೈಗೊಂಬೆ ಎಂಬುದನ್ನು ದೃಢಪಡಿಸಿದ್ದಾರೆ ಎಂದು ಕರ್ನಾಟಕ ದಲಿತ ಸಂಘರ್ಷ ಸಮಿತಿ ರಾಜ್ಯಾಧ್ಯಕ್ಷ ಡಾ.ಆರ್. ಅಶ್ವಥನಾರಾಯಣ ಅಂತ್ಯಜ ಆರೋಪಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರಾದ ಮುರುಗೇಶ್ ನಿರಾಣಿ, ಶಶಿಕಲಾ ಜೊಲ್ಲೆ, ಜನಾರ್ಧನರೆಡ್ಡಿ ವಿರುದ್ಧದ ಗಂಭೀರ ಆರೋಪ ಪ್ರಕರಣದ ಕಡತಗಳು ರಾಜ್ಯಪಾಲರ ಮುಂದಿದ್ದರೂ ತನಿಖೆಗೆ ಅವಕಾಶ ನೀಡದೆ, ಸಿಎಂ ಸಿದ್ದರಾಮಯ್ಯ ಅವರ ವಿರುದ್ಧ ಖಾಸಗಿ ವ್ಯಕ್ತಿ ನೀಡಿರುವ ದೂರನ್ನು ಪರಿಗಣಿಸಿ ಒಂದೇ ದಿನದಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿ ತಾರತಮ್ಯ ಮಾಡುತ್ತಿದ್ದಾರೆ.

ರಾಜ್ಯಪಾಲರು ಕೇಂದ್ರ ಸರ್ಕಾರದ ಕೈಗೊಂಬೆಯಾಗಿ

ರಾಜ್ಯಪಾಲರ ವಿರುದ್ಧ ದಸಂಸ ನಾಯಕರ ಆರೋಪ

ಮುಡಾ ಪ್ರಕರಣಕ್ಕೆ ಸಂಬಂಧಿಸಿದಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ವಿರುದ್ಧ ಖಾಸಗಿ ವ್ಯಕ್ತಿ ನೀಡಿರುವ ದೂರಿನ ಆಧಾರದ ಮೇಲೆ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದು ಸಾಂವಿಧಾನಿಕ ಹುದ್ದೆಗೆ ಅಗೌರವ ತಂದಿದ್ದಾರೆ. ಅಲ್ಲದೆ ರಾಜ್ಯಪಾಲರ ನಡವಳಿಕೆ ಪ್ರಜಾಪ್ರಭುತ್ವಕ್ಕೆ ಅವಮಾನಕರ. ತಕ್ಷಣವೇ ಸಿದ್ದರಾಮಯ್ಯ ವಿರುದ್ಧ ಪ್ರಾಸಿಕ್ಯೂಷನ್‌ಗೆ ನೀಡಿರುವ ಅನುಮತಿಯನ್ನು ರದ್ದುಗೊಳಿಸಬೇಕು. ಇಲ್ಲವಾದರೆ ಪಕ್ಷಪಾತ ಮಾಡಿರುವ ರಾಜ್ಯಪಾಲರನ್ನು ಈ ಕೂಡಲೇ ರಾಷ್ಟ್ರಪತಿಯವರು ವಾಪಸ್ಸು ಕರೆಸಿಕೊಳ್ಳಬೇಕು ಎಂದು ಒತ್ತಾಯಿಸಿದರು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಹುಮತಗಳಿಸಿ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಪಕ್ಷದ ಸರ್ಕಾರ ವನ್ನು ಪತನಗೊಳಿಸಲು ಬಿಜೆಪಿ ಮತ್ತು ಜೆಡಿಎಸ್ ಪಕ್ಷದವರು ಹುನ್ನಾರ ನಡೆಸುತ್ತಿದ್ದಾರೆ. ಸಿದ್ದರಾಮಯ್ಯ ಅವರ ನೇತೃತ್ವದ ಸರ್ಕಾರ ಪಂಚ ಗ್ಯಾರಂಟಿಗಳನ್ನು ಜಾರಿಗೊಳಿಸಿ ಬಡವರ ಪರವಾಗಿ ಅಭಿವೃದ್ಧಿ ಕಾರ್ಯಗಳನ್ನು ಮಾಡುತ್ತಿದ್ದಾರೆ. ಅಲ್ಲದೆ ಮುಡಾ ಹಗರಣಕ್ಕೆ ಸಂಬಂಧಿಸಿದಂತೆ ಸಿದ್ದರಾಮಯ್ಯ ಅವರ ವಿರುದ್ಧ ಯಾವುದೇ ಆಧಾರ ಮತ್ತು ದಾಖಲಾತಿಗಳಿಲ್ಲ. ಹೀಗಿದ್ದರೂ ಅವರ ವಿರುದ್ಧ ಇಲ್ಲಸಲ್ಲದ ಆರೋ ಪಗಳನ್ನು ಮಾಡುತ್ತಿದ್ದಾರೆ.

ಸಿದ್ದರಾಮಯ್ಯ ಅವರು ಒಬ್ಬರು ಜನನಾಯಕರಾಗಿ ಶೋಷಿತ, ಅಹಿಂದ ಮತ್ತು ಹಿಂದುಳಿದ ವರ್ಗಗಳ ಜನರ ಅಭಿವೃದ್ಧಿಗಾಗಿ ಪ್ರತಿನಿತ್ಯ ಶ್ರಮಿಸುತ್ತಿದ್ದಾರೆ. ಇದನ್ನು ಸಹಿಸದ ಜಾತಿವಾದಿ ಮತ್ತು ಕೋಮುವಾದಿ ಪಕ್ಷಗಳು ಸಿದ್ದರಾಮಯ್ಯ ಅವರನ್ನು ಮುಖ್ಯಮಂತ್ರಿ ಹುದ್ದೆಯಿಂದ ಕೆಳಗಿಳಿಸಲು ರಾಜ್ಯಪಾಲರ ಮೊರೆ ಹೋಗಿ, ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡುವಂತೆ ಮಾಡಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಅಹಿಂದ ಸಂಘಟನೆ ರಾಜ್ಯ ಅಧ್ಯಕ್ಷ ಎ.ಆರ್.ಸ್ವಾಮಿ, ಪ್ರಧಾನ ಕಾರ್ಯದರ್ಶಿ ಹನುಮಂತ ರಾಯಪ್ಪ, ರಾಜ್ಯ ನಾಯಕ ಸಮುದಾಯದ ಮುಖಂಡ ಅ.ನಾ.ಪ್ರಸಾದ್, ರಾಜ್ಯ ದಲಿತ ಸಂಘರ್ಷ ಸಮಿತಿ ಜಿಲ್ಲಾ ಸಂಯೋಜಕರಾದ ಎಸ್.ಪೂರ್ಣಿಮಾ, ಅಹಿಂದ ಮುಖಂಡರಾದ ಉಮಾವತಿ ರಂಗಸ್ವಾಮಿ, ಸಮಿತಿ ಸದಸ್ಯ ಹೆಚ್.ರಾಜಣ್ಣ ಇದ್ದರು.

ಒಂದನೇ ಪುಟದಿಂದ

ಜೈಲು ಅಧಿಕಾರಿಗಳ ಅಮಾನತು

ಪ್ರಭು ಎಸ್. ಖಂಡೇಲವಾಲ್, ಎಲ್.ಎಸ್. ತಿಪ್ಪೇಸ್ವಾಮಿ, ಶ್ರೀಕಾಂತ್ ತಳವಾರ, ವೆಂಕಪ್ಪ ಕೂರ್ತಿ, ಸಂಪತ್‌ಕುಮಾರ್ ಕಡಪಟ್ಟಿ, ಬಸಪ್ಪ ತೇಲಿ ಅವರುಗಳನ್ನು ಅಮಾನತು ಮಾಡಲಾಗಿದೆ ಎಂದರು. ಇಂತಹ ಬೆಳವಣಿಗೆಗಳು ನಡೆಯಬಾರದಿತ್ತು, ವಿಷಯ ಬಹಿರಂಗವಾಗುತ್ತಿದ್ದಂತೆ ಅಧಿಕಾರಿಗಳು ತಕ್ಷಣ ಕ್ರಮ ಕೈಗೊಂಡಿದ್ದಾರೆ. ಎರಡು ದಿನಗಳ ಹಿಂದೆಯಷ್ಟೇ ಹಿರಿಯ ಪೋಲಿಸ್ ಅಧಿಕಾರಿಗಳು ಪರಪ್ಪನ ಅಗ್ರಹಾರಕ್ಕೆ ತೆರಳಿ ಪರಿಶೀಲನೆ ನಡೆಸಿದ್ದರು, ಆ ವೇಳೆ ಯಾವುದೇ ಮೊಬೈಲ್ ಹಾಗೂ ಇನ್ನಿತರ ವಸ್ತುಗಳು ದೊರೆತಿರಲಿಲ್ಲ. ಪೂರ್ಣ ವರದಿ ಬಂದ ತಕ್ಷಣ ಪರಪ್ಪನ ಅಗ್ರಹಾರದ ಜೈಲ್ ಸೂಪರಿಂಟೆಂಡೆಂಟ್ ಅವರನ್ನು ವರ್ಗಾವಣೆ ಮಾಡಲಾಗುವುದು. ಪ್ರಕರಣಕ್ಕೆ ಸಂಬಂಧಿಸಿದಂತೆ ಹಿರಿಯ ಅಧಿಕಾರಿಗಳು ಶಾಮೀಲಾಗಿದ್ದರೂ ಅವರ ವಿರುದ್ಧವೂ ತನಿಖೆ ನಡೆಸಿ ಕ್ರಮ ಜರುಗಿಸಲಾಗುವುದು.

ಎಲ್ಲಾ ಜೈಲುಗಳಲ್ಲಿಯೂ ಮೊಬೈಲ್ ಜಾಮರ್‌ಗಳು ಮತ್ತು ಸಿಸಿಟಿವಿ ಕ್ಯಾಮೆರಾಗಳಿವೆ, ಇದೆಲ್ಲದರ ನಡುವೆಯೂ ಘಟನೆ ನಡೆದಿದ್ದು, ಮುಂದೆ ಇಂತಹ ಘಟನೆಗಳು ಮರುಕಳಿಸದಂತೆ ಕ್ರಮ ಕೈಗೊಳ್ಳಲಾಗುವುದು. ದರ್ಶನ್ ಪ್ರಕರಣವನ್ನು ದುರ್ಬಲಗೊಳಿಸುವ ಪ್ರಶ್ನೆಯೇ ಇಲ್ಲ, ಕಾನೂನು ಪ್ರಕಾರ ಕ್ರಮ ಕೈಗೊಳ್ಳಲಾಗುವುದು, ಶೀಘ್ರವೇ ರೇಣುಕಾಸ್ವಾಮಿ ಕೊಲೆ ಆರೋಪಿಗಳ ಪ್ರಕರಣದಲ್ಲಿ ಚಾರ್ಜ್‌ಶೀಟ್ ಸಲ್ಲಿಸಲಾಗುವುದು ಎಂದರು.

ಅಧಿಕಾರಿಗಳಿಗೆ ಖಡಕ್ ಸೂಚನೆ

ನೀಡುವಂತೆ ಸೂಚನೆ ಯನ್ನು ನೀಡಿದ್ದಾರೆ. ಕೈದಿಗಳ ದೈನಂದಿನ ಚಟುವಟಿಕೆ ಮೇಲೆ ನಿಗಾ ವಹಿಸದಿರುವುದು, ಪ್ರಮುಖ ಪ್ರಕರಣಗಳ ಆರೋಪಿಗಳ ಭೇಟಿ ಮಾಡಿ ಹೋದ ನಂತರ ಸಿಸಿ ಕ್ಯಾಮೆರಾ ದೃಶ್ಯಾವಳಿಗಳನ್ನು ಪರಿಶೀಲನೆ ನಡೆಸದಿರುವುದಕ್ಕೆ ಜೈಲಿನ ಚೀಫ್ ಸೂಪರಿಂಟ್‌ಡೆಂಡ್, ಸೂಪರಿಡೆಂಟ್ ಹಾಗೂ ಮತ್ತಿತರ ಜೈಲು ಅಧಿಕಾರಿಗಳನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಚಿತ್ರದುರ್ಗದ ರೇಣುಕಾಸ್ವಾಮಿ ಕೊಲೆಯಾದ ಬಳಿಕ ನಟ ದರ್ಶನ್ನನ್ನು ಬಂಧಿಸಿರುವುದು ಹಾಗೂ ಪ್ರಕರಣದ ಸ್ವರೂಪ ಏನೆಂಬುದು ಎಲ್ಲವೂ ಗೊತ್ತಿದೆ. ಆದಾಗ್ಯೂ ನಿಯಮಗಳನ್ನು ಮೀರಿ ಆರೋಪಿಗಳಿಗೆ ಟೀ, ಸಿಗರೇಟ್ ಮತ್ತಿತರ ಸವಲತ್ತುಗಳನ್ನು ಪೂರೈಕೆಯಾಗಿದೆ. ದಿನದ 24 ಗಂಟೆಯೂ ವಾರ್ಡರ್‌ಗಳು ಕರ್ತವ್ಯದಲ್ಲಿರುತ್ತಾರೆ. ಘಟನೆ ಎಲ್ಲರ ಕಣ್ತಪ್ಪಿ ನಡೆಯಲು ಹೇಗೆ ಸಾಧ್ಯ ಎಂದು ಅಧಿಕಾರಿಗಳನ್ನು ಪ್ರಶ್ನಿಸಿದರು. ಸಿಸಿಬಿ ಪೊಲೀಸರು ದಾಳಿ ನಡೆಸಿದಾಗ ಯಾವ ವಸ್ತುಗಳು ಪತ್ತೆಯಾಗಿಲ್ಲ. ಜೈಲಿನಲ್ಲಿ ಮೊಬೈಲ್ ಬಳಕೆಯಾಗುತ್ತಿದೆ ಎಂಬುದು ಕಂಡು ಬಂದಿದೆ. ಹೈಫ್ರಿಕ್ವೆನ್ಸಿ ಜಾಮರ್, ಅತ್ಯುತ್ತಮ ಗುಣಮಟ್ಟದ ಮೆಟಲ್ ಡಿಟೆಕ್ಟರ್ ಯಂತ್ರ, ಸಿಸಿ ಕ್ಯಾಮೆರಾ ಅಳವಡಿಸಲಾಗಿದೆ. ಇಷ್ಟೆಲ್ಲ ಬಂದೋಬಸ್ತ್, ಪರಿಶೀಲನೆ ನಡುವೆಯೂ ಕಾರಾಗೃಹದೊಳಗೆ ಸಿಗರೇಟ್, ಮೊಬೈಲ್ ತಲುಪಿರುವುದಕ್ಕೆ ಆಕ್ರೋಶ ವ್ಯಕ್ತಪಡಿಸಿದರು.ರಾಜ್ಯದ ಎಲ್ಲ ಬಂಧಿಖಾನೆಗಳಲ್ಲಿ ಮತ್ತಷ್ಟು ಕಠಿಣ ಕ್ರಮಗಳನ್ನು ಕೈಗೊಳ್ಳುವಂತೆ ರಾಜ್ಯ ಪೊಲೀಸ್ ಮಹಾನಿರ್ದೇಶಕ ಅಲೋಕ್ ಮೋಹನ್, ಕಾರಾಗೃಹ ಮತ್ತು ಸುಧಾರಣಾ ಸೇವೆ ಡಿಜಿಪಿ ಮಾಲಿನಿ ಕೃಷ್ಣಮೂರ್ತಿ ಅವರಿಗೆ ಸೂಚನೆ ನೀಡಿದರು.

ಮೂರು ಎಫ್‌ಐಆರ್ ದಾಖಲು: ಪರಪ್ಪನ ಅಗ್ರಹಾರ ಜೈಲಿನಲ್ಲಿ ಕೊಲೆ ಆರೋಪಿ ನಟ ದರ್ಶನ್‌ಗೆ ರಾಜಾತಿಥ್ಯ ನೀಡಿದ ವಿಚಾರಕ್ಕೆ ಸಂಬಂಧಿಸಿದಂತೆ ಬೆಂಗಳೂರಿನ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಮೂರು ಪ್ರತ್ಯೇಕ ಎಫ್‌ಐಆರ್‌ಗಳನ್ನು ದಾಖಲಿಸಲಾಗಿದೆ.

ಈ ಮೂರು ಪ್ರಕರಣಗಳ ಪೈಕಿ 2 ಕೇಸ್‌ನಲ್ಲಿ ನಟ ದರ್ಶನ್ ಎ 1 ಆರೋಪಿಯಾಗಿದ್ದಾನೆ. ಜೈಲಿನ ಗಾರ್ಡನ್ ಏರಿಯಾದಲ್ಲಿ ಸಿಗರೇಟ್ ಸೇದುತ್ತಾ ಕುಳಿತಿದ್ದ ಆರೋಪದ ಮೊದಲನೇ ಪ್ರಕರಣದಲ್ಲಿ ನಟ ದರ್ಶನ್ ಎ1, ಆತನ ಮ್ಯಾನೇಜರ್ ನಾಗರಾಜ್ ಎ2, ರೌಡಿಶೀಟರ್‌ಗಳಾದ ವಿಲ್ಸನ್ ಗಾರ್ಡನ್ ನಾಗ ಎ3, ಕುಳ್ಳ ಸೀನ ಎ4 ಆರೋಪಿಗಳಾಗಿದ್ದಾರೆ.

ಹೊರಗಿನ ವ್ಯಕ್ತಿ ಜೊತೆ ವಿಡಿಯೋ ಕಾಲ್‌ನಲ್ಲಿ ಮಾತನಾಡಿದ ಆರೋಪದ ಎರಡನೇ ಪ್ರಕರಣದಲ್ಲಿ ನಟ ದರ್ಶನ್ ಎ1, ರೌಡಿಶೀಟರ್‌ಗಳಾದ ಧರ್ಮ ಎ2, ಸತ್ಯ ಎ3 ಆರೋಪಿಗಳಾಗಿದ್ದರೆ, ಫೋಟೊ ಮತ್ತು ವಿಡಿಯೋ ವೈರಲ್ ಮಾಡಿದ ಆರೋಪದ ಮೂರನೇ ಪ್ರಕರಣದಲ್ಲಿ ಕೆ.ಎಸ್. ಸುದರ್ಶನ್ ಎ1, ಮುಜೀಬ್ ಎ2, ಪರಮೇಶ್ ನಾಯಕ ಲಮಾಣಿ ಎ3, ಕೆ.ಬಿ. ರಾಯಮನೆ ಎ4 ಆರೋಪಿಗಳಾಗಿದ್ದಾರೆ. ಕೇಂದ್ರ ಕಾರಾಗೃಹಗಳ ಉಪ ನಿರ್ದೇಶಕ ಸೋಮಶೇಖರ ಅವರ ದೂರು ಆಧರಿಸಿ ಪರಪ್ಪನ ಅಗ್ರಹಾರ ಪೊಲೀಸ್ ಠಾಣೆಯಲ್ಲಿ ಈ ಎಫ್‌ಐಆರ್‌ಗಳು ದಾಖಲಿಸಲಾಗಿದೆ.

ಕಲ್ಲಿದ್ದಲು ತುಂಬಿದ ಲಾರಿಯಲ್ಲಿ ಬೆಂಕಿ



ಮೈಸೂರು, ಆ.26(ಎಸ್‌ಪಿಎನ್)– ಕಲ್ಲಿದ್ದಲು ತುಂಬಿದ ಲಾರಿ (ಕೆಎ-09 ಎಎ 6004)ಇಂಜಿನ್‌ನಲ್ಲಿ ಕಾಣಿಸಿಕೊಂಡ ಬೆಂಕಿಯಿಂದಾಗಿ ಲಾರಿ ಮುಂಭಾಗದ ಕ್ಯಾಬಿನ್ ಸುಟ್ಟು ಕರಕಲಾಗಿರುವ ಘಟನೆ ಮೈಸೂರು-ಹುಣಸೂರು ರಸ್ತೆಯ ಹಿನಕಲ್ (ಕೆಇಬಿ ಜಂಕ್ಷನ್‌ನಲ್ಲಿ)ಸಮೀಪ ನಡೆದಿದೆ.

ಸೋಮವಾರ ಮಧ್ಯಾಹ್ನ 12.55ಕ್ಕೆ ಈ ಘಟನೆ ನಡೆದಿದ್ದು, ಹೆಬ್ಬಾಳ ಅಗ್ನಿಶಾಮಕ ದಳದ ಠಾಣಾಧಿಕಾರಿ ಲಕ್ಷ್ಮಣ್ ನೇತೃತ್ವದ ಸಿಬ್ಬಂದಿ ಲಾರಿಯಲ್ಲಿ ಕಾಣಿಸಿಕೊಂಡಿದ್ದ ಬೆಂಕಿಯನ್ನು ನಂದಿಸಿದ್ದಾರೆ.

ಲಾರಿ ಬ್ಯಾಟರಿಯಲ್ಲಿ ಶಾರ್ಟ್ ಸರ್ಕ್ಯೂಟ್‌ನಿಂದ ಅಥವಾ ಇಂಜಿನ್ ಬಿಸಿಯಾಗಿದ್ದಕ್ಕೆ ಬೆಂಕಿ ಕಾಣಿಸಿ ಕೊಂಡಿರಬಹುದು ಎಂದು ಲಾರಿ ಚಾಲಕ ತಿಳಿಸಿರುವುದಾಗಿ ಅಗ್ನಿಶಾಮಕ ದಳದ ಸಿಬ್ಬಂದಿ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು. ಈ ಕಾರ್ಯಾಚರಣೆಯಲ್ಲಿ ಅಗ್ನಿಶಾಮಕ ದಳ ಸಿಬ್ಬಂದಿಗಳಾದ ಪವನ್, ಮಂಜುನಾಥ್, ಪ್ರವೀಣ್, ಸಂದೀಪ್, ನಾಗರಾಜ್, ಕೆಂಪರಾಜು, ಮದನ್ ಇದ್ದರು. ವಿಜಯನಗರ ಠಾಣಾ ಪೊಲೀಸರು ಸ್ಥಳದಲ್ಲಿ ಹಾಜರಿದ್ದು, ಬೆಂಕಿ ನಂದಿಸಲು ಸಹಕರಿಸಿದ್ದಾರೆ.

ಹೆಚ್.ಕೆ. ರಾಮು ಅವರಿಗೆ ಅಭಿನಂದನೆ



ಅಕ್ಕ ಸಮ್ಮೇಳನದಲ್ಲಿ ಭಾಗವಹಿಸುತ್ತಿರುವ ಸರ್ಕಾರಿ ನೌಕರರ ಸಂಘ ಮಾಜಿ ಅಧ್ಯಕ್ಷರೂ ಆದ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಎಚ್.ಕೆ. ರಾಮು ಅವರನ್ನು ಬೆಂಗಳೂರಿನ ಆದಿಚುಂಚನಗಿರಿ ಮಠದಲ್ಲಿ ಅಭಿನಂದಿಸಲಾಯಿತು. ಈ ಸಂದರ್ಭದಲ್ಲಿ ಸಮಿತಿಯ ಪದಾಧಿಕಾರಿಗಳಾದ ಕೆ.ಟಿ.ಚಂದ್ರು, ಜಗದೀಶ್, ಮಾಲತೇಶ್ ಅಣ್ಣೆಗೇರಿ, ಕೃಷ್ಣ, ಸುರೇಶ್ ಬಾಬು, ಕಾರ್ಯದರ್ಶಿ ರಾಜು ಗೌಡ, ಯಶೋಧ ರಾಜಣ್ಣ ಇನ್ನಿತರಿದ್ದರು.

ಕೋರ್ಟ್ ಆದೇಶ ಧಿಕ್ಕರಿಸಿ ದರ್ಶನ್‌ಗೆ ಸೌಕರ್ಯ

ಅಚ್ಚರಿ ಮೂಡಿಸಿದೆ ಜೈಲ್ ಅಧಿಕಾರಿಗಳ ಚಮತ್ಕಾರ

ಬೆಂಗಳೂರು, ಆ. 26– ಚಿತ್ರದುರ್ಗ ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಬಂಧಿತನಾಗಿರುವ ನಟ ದರ್ಶನ್ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನ ಗಾರ್ಡನ್ ಏರಿಯಾದಲ್ಲಿ ಪ್ಲಾಸ್ಟಿಕ್ ಚೇರ್ ಮೇಲೆ ಕುಳಿತು ರೌಡಿಶೀಟರ್‌ಗಳಾದ ವಿಲ್ಸನ್ ಗಾರ್ಡನ್ ನಾಗ, ಕುಳ್ಳ ಸೀನ ಅವನೊಂದಿಗೆ ಸಿಗರೇಟ್ ಸೇದುತ್ತಿರುವ ಫೋಟೋ ಹಾಗೂ ಮತ್ತೋರ್ವ ರೌಡಿಶೀಟರ್‌ನೊಂದಿಗೆ ಸೇರಿ ತನ್ನ ಆತ್ಮೀಯನೊಂದಿಗೆ ವಿಡಿಯೋ ಕಾಲ್ ಮಾಡಿ ಮಾತನಾಡಿದ ವಿಡಿಯೋ ವೈರಲ್ ಆದ ಬೆನ್ನಲ್ಲೇ ದರ್ಶನ್‌ಗೆ ಜೈಲಿನಲ್ಲಿ ನ್ಯಾಯಾಲಯದ ಆದೇಶ ಉಲ್ಲಂಘಿಸಿ ಐಷರಾಮಿ ಸೌಲಭ್ಯಗಳನ್ನು ಒದಗಿಸಿರುವುದು ಬಹಿರಂಗವಾಗಿದೆ.

ತನಗೆ ಬೆಡ್ ಹಾಗೂ ಮನೆ ಊಟ ಬೇಕು ಎಂದು ದರ್ಶನ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದ್ದ. ಆದರೆ, ನ್ಯಾಯಾಲಯವು ದರ್ಶನ್ ಅರ್ಜಿಯನ್ನು ವಜಾಗೊಳಿಸಿ ಈ ಸೌಲಭ್ಯ ಒದಗಿಸಲು ನಿರಾಕರಿಸಿತ್ತು. ಆದರೆ ನ್ಯಾಯಾಲಯ ಸೌಲಭ್ಯ ನೀಡಲು ನಿರಾಕರಿಸಿದರೂ ಜೈಲು ಅಧಿಕಾರಿಗಳು ದರ್ಶನ್‌ಗೆ ಬೆಡ್ ಒದಗಿಸಿರುವ ಬಗ್ಗೆ ಫೋಟೊ ಇಂದು ವೈರಲ್ ಆಗಿದೆ. ಸೆಲ್‌ನಲ್ಲಿ ಬೆಡ್ ಮೇಲೆ ರೌಡಿಶೀಟರ್‌ನೊಂದಿಗೆ ಕುಳಿತಿರುವ ದರ್ಶನ್, ಒಂದು ಕೈಯ್ಯಲ್ಲಿ ಸಿಗರೇಟ್ ಹಿಡಿದಿದ್ದು, ಮತ್ತೊಂದು ಕೈಯ್ಯಲ್ಲಿ ಮೊಬೈಲ್ ನೋಡುತ್ತಿರುವ ದೃಶ್ಯ ಫೋಟೊದಲ್ಲಿ ಕಂಡುಬಂದಿದೆ.

ಇದೇ ವೇಳೆ ಗಾರ್ಡನ್ ಏರಿಯಾದಲ್ಲಿ ರೌಡಿಶೀಟರ್‌ಗಳೊಂದಿಗೆ ಕುಳಿತು ಕಾಫಿ ಕುಡಿಯುತ್ತಾ, ಸಿಗರೇಟ್ ಸೇದುತ್ತಿರುವ ಪ್ರಸಂಗ ಆಗಸ್ಟ್ 22ರಂದು ಸಂಜೆ ನಡೆದಿರಬಹುದು ಎಂದು ಬಂಧಿಖಾನೆ ಡಿಜಿಪಿ ಮಾಲಿನಿ ಕೃಷ್ಣಮೂರ್ತಿಯವರು ತಿಳಿಸಿದ್ದಾರೆ. ವಿಶೇಷವೆಂದರೆ ಅದೇ ದಿನ ಚಿತ್ರನಟಿ ರಚಿತಾ ರಾಮ್ ಅವರು ಜೈಲಿನಲ್ಲಿ ದರ್ಶನ್‌ನನ್ನು ಭೇಟಿ ಮಾಡಿದ್ದರು. ಅವರ ಭೇಟಿ ನಂತರ ಈ ಘಟನೆ ನಡೆದಿದೆ.

ಜೈಲಿನಲ್ಲಿ ದರ್ಶನ್‌ಗೆ ಕೇವಲ ಸಿಗರೇಟ್ ಮಾತ್ರವಲ್ಲದೇ, ಮಾಂಸಾಹಾರ ಹಾಗೂ ಮದ್ಯ ಸರಬರಾಜು ಮಾಡಲಾಗುತ್ತಿದೆ ಎಂದು ಸುದ್ದಿವಾಹಿನಿಗಳು ಪ್ರಸಾರ ಮಾಡಿವೆ.

ಯದುವೀರ್ ಒಡೆಯರ್‌ಗೆ ಆಹ್ವಾನ



ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಬಿಡುಗಡೆ ಮಾಡಿರುವ ಸದಸ್ಯತ್ವ ಕಾರ್ಯಾಗಾರ ಕೈಪಿಡಿಯನ್ನು ಸಂಸದ ಯದುವೀರ್ ಒಡೆಯರ್ ಅವರಿಗೆ ನೀಡಿ, ಕಾರ್ಯಾಗಾರಕ್ಕೆ ಆಹ್ವಾನ ನೀಡಲಾಯಿತು. ಈ ಸಂದರ್ಭದಲ್ಲಿ ಮೈಸೂರು ಜಿಲ್ಲಾ ಬಿಜೆಪಿ ಅಧ್ಯಕ್ಷ ಎಲ್.ಆರ್. ಮಹದೇವಸ್ವಾಮಿ, ಪ್ರಧಾನ ಕಾರ್ಯದರ್ಶಿ ಮಡವಾಡಿ ಮಹೇಶ್, ಸಾಲಿಗ್ರಾಮ ಮಂಡಲ ಅಧ್ಯಕ್ಷ ಸಾರಾ ತಿಲಕ್, ಯುವ ಮುಖಂಡ ಲಕ್ಷ್ಮಣ್, ವಿಜಯ್‌ಕುಮಾರ್ ಉಪಸ್ಥಿತರಿದ್ದರು.

ಮೈಸೂರು ಮಿತ್ರ

ಮಂಗಳವಾರ 27 ಆಗಸ್ಟ್ 2024

ಮಕ್ಕಳೊಂದಿಗೆ ಸಿ.ಹೆಚ್.ವಿಜಯಶಂಕರ್ ಸಂವಾದ



ಸುತ್ತೂರು ಮಠದಲ್ಲಿ ಏರ್ಪಡಿಸಿದ್ದ ಜಗದ್ಗುರು ಡಾ.ಶ್ರೀ ಶಿವರಾತ್ರಿ ರಾಜೇಂದ್ರ ಮಹಾಸ್ವಾಮಿಗಳವರ 109ನೇ ಜಯಂತಿ ಮಹೋತ್ಸವ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಮೇಘಾಲಯ ರಾಜ್ಯದ ರಾಜ್ಯಪಾಲ ಸಿ.ಹೆಚ್.ವಿಜಯಶಂಕರ್ ಅವರು ಸುತ್ತೂರು ಮಠದ ವಸತಿ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡುತ್ತಿರುವ ಮೇಘಾಲಯ ರಾಜ್ಯದ ಮಕ್ಕಳೊಂದಿಗೆ ಸಂವಾದ ನಡೆಸಿದ ಸಂದರ್ಭ.

ತಾಲೀಮು ವೇಳೆ ಲೋಹದ ಚೂರು ಚುಚ್ಚುವ ಸಾಧ್ಯತೆ: ದಸರಾ ಗಜಪಡೆಗೆ ಮೆಟಲ್ ಡಿಟೆಕ್ಟರ್‌ನಲ್ಲಿ ಪರೀಕ್ಷೆ



ಅರಮನೆ ಆವರಣದಲ್ಲಿ ಮೆಟಲ್ ಡಿಟೆಕ್ಟರ್‌ನಿಂದ ಆನೆಗಳ ಪಾದ ಪರೀಕ್ಷೆ ನಡೆಸಿದರು.

ಮೈಸೂರು, ಆ.26(ಎಂಟಿವೈ)– ದಸರಾ ಮಹೋತ್ಸವದಲ್ಲಿ ಪಾಲ್ಗೊಳ್ಳಲಿರುವ ಗಜಪಡೆ ತಾಲೀಮಿನ ವೇಳೆ ಆನೆಗಳ ಪಾದಕ್ಕೆ ಲೋಹದ ಚೂರುಗಳು ಸೇರಿರುವ ಶಂಕೆ ಹಿನ್ನೆಲೆಯಲ್ಲಿ ಸೋಮವಾರ ಸಂಜೆ ಆನೆಗಳ ಪಾದವನ್ನು ಮೆಟಲ್ ಡಿಟೆಕ್ಟರ್ ಮೂಲಕ ಪರೀಕ್ಷಿಸಲಾಯಿತು.

ಅರಮನೆ ಆವರಣದಲ್ಲಿ ಬೀಡುಬಿಟ್ಟಿರುವ ಮೊದಲ ತಂಡದ 9 ಆನೆಗಳ ತೂಕ ಪರೀಕ್ಷೆಗೆ ಶನಿವಾರ ಕರೆದೊಯ್ದಿದ್ದಾಗ ಕಂಜನ್ ಆನೆ ಕುಂಟಲಾರಂಭಿಸಿತ್ತು. ಆಗ ಸ್ಥಳದಲ್ಲೇ ಪರೀಕ್ಷಿಸಲಾಯಿತಾದರೂ ಮೊಳೆ ಅಥವಾ ಯಾವುದೇ ಲೋಹದ ಚೂರು ಪತ್ತೆಯಾಗಿರಲಿಲ್ಲ. ಅರಮನೆಗೆ ವಾಪಸ್ ಕರೆದೊಯ್ದ ಬಳಿಕವೂ ಕಂಜನ್ ಆನೆಯನ್ನು ತಪಾಸಣೆಗೆ ಒಳಪಡಿಸಲಾಗಿತ್ತು. ಹೊಟ್ಟೆಯಲ್ಲಿ ಸಮಸ್ಯೆ ಉಂಟಾಗಿದ್ದರ ಪರಿಣಾಮದಿಂದ ಕುಂಟುತ್ತಿರಬಹುದೆಂದು ಭಾನುವಾರ ತಾಲೀಮಿನಿಂದ ವಿಶ್ರಾಂತಿ ನೀಡಲಾಗಿತ್ತು. ಆದರೆ ಮುಂಜಾಗ್ರತಾ ಕ್ರಮವಾಗಿ ಇಂದು ಸಂಜೆ ಗಜಪಡೆಯ 9 ಆನೆಗಳಿಗೆ ಪಾದದಲ್ಲಿ ಕಬ್ಬಿಣದ ವಸ್ತುಗಳು ಸೇರಿರಬಹುದೇ ಎಂಬ ಬಗ್ಗೆ ಪರೀಕ್ಷೆ ನಡೆಲಾಯಿತು.

ನಿತ್ಯವೂ ಬೆಳಗ್ಗೆ ಮತ್ತು ಸಂಜೆ ಅರಮನೆ ಆವರಣದಿಂದ ಆಯುರ್ವೇದ ವೃತ್ತ ಇಲ್ಲವೇ ಹೈವೆ ವೃತ್ತದವರೆಗೆ ದಸರಾ ಆನೆಗಳಿಗೆ ತಾಲೀಮು ನಡೆಸಲಾಗುತ್ತಿದೆ. ಸೋಮವಾರ ಬೆಳಗ್ಗೆ 2.5 ಕಿ.ಮೀ. ಹಾಗೂ ಸಂಜೆ 4.1 ಕಿ.ಮೀ.ವರೆಗೆ ತಾಲೀಮು ನಡೆಸಲಾಯಿತು. ಬಳಿಕ ಮೆಟಲ್ ಡಿಟೆಕ್ಟರ್‌ನಿಂದ ಎಲ್ಲಾ ಆನೆಗಳ ಪಾದಗಳನ್ನು ಪರೀಕ್ಷೆ ಮಾಡಿದಾಗ ಯಾವುದೇ ಲೋಹದ ವಸ್ತುಗಳು ಪತ್ತೆಯಾಗಿಲ್ಲ.

ಈವರೆಗೆ ತಾಲೀಮು ವೇಳೆ ಲೋಹದ ವಸ್ತುಗಳನ್ನು ಸೆಳೆದುಕೊಳ್ಳುವ ಆಯಸ್ಕಾಂತವಿರುವ ವಾಹನ ತೆರಳುತ್ತಿತ್ತು. ಆದರೆ ಇದೇ ಮೊದಲ ಬಾರಿಗೆ ಲೋಹದ ವಸ್ತುಗಳನ್ನು ಪತ್ತೆ ಮಾಡುವ ಉಪಕರಣವನ್ನು ಖರೀದಿಸಿ ಅವುಗಳ ಸಹಾಯದಿಂದ ಎಲ್ಲಾ ಆನೆಗಳ ಪಾದಗಳನ್ನು ಪರೀಕ್ಷಿಸಲಾಗುತ್ತಿದೆ. ಇನ್ನು ಮುಂದೆ ಪ್ರತಿದಿನ ತಾಲೀಮು ಮುಕ್ತಾಯವಾದ ಬಳಿಕ ಈ ಪರೀಕ್ಷೆ ನಡೆಸಲಾಗುವುದು ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ತಿಳಿಸಿದ್ದಾರೆ. ಆನೆಗಳ ಪಾದದಲ್ಲಿ ಯಾವುದಾದರೂ ಲೋಹ ಸೇರಿಕೊಂಡರೆ ಅದು ಕ್ರಮೇಣ ದೊಡ್ಡ ಗಾಯವಾಗಿ ಆನೆಗಳು ನಡೆಯಲು ಸಾಧ್ಯವಾಗದ ಸ್ಥಿತಿ ಉಂಟಾಗಬಹುದು. ಕೆಲವೊಮ್ಮೆ ಆನೆಗಳು ಪಾದಕ್ಕೆ ಏನಾದರೂ ಚುಚ್ಚಿದ್ದರೂ ನೋವಿನಲ್ಲೇ ನಡೆಯುತ್ತಿರುತ್ತವೆ. ಅದನ್ನು ತಪ್ಪಿಸಲು ಈ ಪರೀಕ್ಷೆ ಉಪಯುಕ್ತವಾಗಿದೆ ಎಂದು ಮಾಹಿತಿ ನೀಡಿದರು.

ಬುಧವಾರ ಪೂರ್ಣ ತಾಲೀಮು: ಆನೆಗಳಿಗೆ ಮಂಗಳವಾರ 8 ಕಿ.ಮೀ. ಹಾಗೂ ಬುಧವಾರ ಬನ್ನಿಮಂಟಪದವರೆಗೆ ಪೂರ್ಣ ಪ್ರಮಾಣದ ತಾಲೀಮು ನಡೆಸಲಾಗುವುದು ಎಂದು ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಹೇಳಿದರು.

ವಿ.ಆರ್.ಸುದರ್ಶನ್‌ಗೆ ಅಭಿನಂದನೆ...




ಮೈಸೂರಿನ ಕಾಂಗ್ರೆಸ್ ಭವನಕ್ಕೆ ಭೇಟಿ ನೀಡಿದ ಪಕ್ಷದ ಸತ್ಯ ಶೋಧನಾ ಸಮಿತಿ ಅಧ್ಯಕ್ಷ ವಿ.ಆರ್.ಸುದರ್ಶನ್ ಅವರನ್ನು ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್ ಅಭಿನಂದಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ವೆಂಕಟರಮಣಪ್ಪ, ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಬಿ.ಜೆ.ವಿಜಯಕುಮಾರ್ ಹಾಗೂ ಸಮಿತಿ ಸದಸ್ಯರು ಉಪಸ್ಥಿತರಿದ್ದರು

ಮುಡಾ ನಿವೇಶನ ಹಂಚಿಕೆ ಹಗರಣ

ವೈಟ್ನರ್ ಹಿಂದಿನ ಅಕ್ಷರಗಳ ಬಯಲು ಮಾಡಿ ಬಿಜೆಪಿ, ಜೆಡಿಎಸ್‌ಗೆ ಸಿಎಂ ಟಾಂಗ್

ಬೆಂಗಳೂರು,ಆ.26(ಕೆಎಂಶಿ)– ಮುಡಾ ಅಕ್ರಮವಾಗಿ ಸ್ವಾಧೀನ ಪ'ಡಿಸಿಕೊಂಡ' ನಮ್ಮ ಕುಟುಂಬದ ಜಮೀನಿಗೆ ಬದಲಿ ಭೂಮಿ ನೀಡುವಂತೆ ನನ್ನ ಪತ್ನಿ ಸಲ್ಲಿಸಿದ್ದ ಅರ್ಜಿಯಲ್ಲಿ ನಾಲ್ಕೈದು ಪದಗಳಿಗೆ ವೈಟ್ನರ್ ಹಚ್ಚಿದ್ದನ್ನೇ ಮಹಾನ್ ಅಪರಾಧವೆಂಬಂತೆ ಗಂಟಲು ಹರಿದುಕೊಂಡ ಬಿಜೆಪಿ–ಜೆಡಿಎಸ್ ನಾಯಕರೇ, ವೈಟ್ನರ್ ಹಿಂದಿರುವ ಅಕ್ಷರಗಳೇನು ಎಂಬುದು ಗಮನಿಸಿ ನೋಡಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ.





ವೈಟ್ನರ್‌ನಿಂದ ಮರೆಯಾಗಿದ್ದ ಪದವನ್ನು ಬಹಿರಂಗಪಡಿಸಲಾಗಿದೆ.

ಈ ಸಂಬಂಧ ಟ್ವೀಟ್ ಮಾಡಿರುವ ಅವರು, ನನ್ನ ಪತ್ನಿ ಬದಲೀ ಭೂಮಿ ಕೇಳಿದ್ದು, ತನ್ನದೇ ಜಮೀನನ್ನು ಮುಡಾ ವಶಕ್ಕೆ ಪಡೆದು ಅಭಿವೃದ್ಧಿಪಡಿಸಲಾದ ದೇವನೂರು 3ನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ ಪ್ರಾಧಿಕಾರವು ಅಭಿವೃದ್ಧಿಪಡಿಸಿದ ಸಮಾನಾಂತರ ಬಡಾವಣೆಯಲ್ಲಿ. ಅಲ್ಲಿ ನಿವೇಶನಗಳು ಲಭ್ಯವಿರದ ಕಾರಣಕ್ಕೆ 'ದೇವನೂರು ಮೂರನೇ ಹಂತದ ಬಡಾವಣೆಯಲ್ಲಿ ಅಥವಾ ನಂತರ' ಎಂಬ ನಾಲ್ಕೈದು ಪದಗಳಿಗೆ ವೈಟ್ನರ್ ಹಾಕಿ, ಪ್ರಾಧಿಕಾರ ಅಭಿವೃದ್ಧಿಪಡಿಸಿದ ಸಮಾನಾಂತರ ಬಡಾವಣೆಯಲ್ಲಿ ನಿವೇಶನ ನೀಡಬೇಕೆಂಬ ಮನವಿ ಮಾಡಿದ್ದಾರೆ ಎಂದಿದ್ದಾರೆ.

ಇದರಲ್ಲಿ ಟಿಪ್ಪಣಿಯೂ ಇಲ್ಲ, ಆದೇಶವೂ ಇಲ್ಲ, ಅಪ್ಪಣೆಯೂ ಇಲ್ಲ, ತನಗೆ ಸೇರಿದ ಭೂಮಿಯಲ್ಲೇ ನಿವೇಶನ ಕೊಡಿ ಎಂಬ ಮನವಿ ಅಷ್ಟೇ ಇದೆ.

'ವೈಟ್ನರ್ ಹಚ್ಚಿ ಕಪ್ಪುಚುಕ್ಕೆ ಅಳಿಸಿಕೊಳ್ಳಲು ಸಾಧ್ಯವಿಲ್ಲ, ಸಿಎಂ ಪತ್ನಿ ನಿವೇಶನ ಕೇಳಿದ್ದು ವಿಜಯನಗರದಲ್ಲಿ, ಮುಡಾ ವಿಚಾರ ಚರ್ಚೆಗೆ ಬಂದ ನಂತರ ಸಿದ್ದರಾಮಯ್ಯ ಅವರ ಪರವಾಗಿ ಯಾರೋ ಹೋಗಿ ವೈಟ್ನರ್ ಹಚ್ಚಿ ಬಂದಿದ್ದಾರೆಂದು' ಬೊಬ್ಬೆ ಹಾಕುತ್ತಿದ್ದ ಸ್ವಯಂ ಘೋಷಿತ ಕಾನೂನು ಪಂಡಿತರು ಈಗೇನು ಹೇಳುತ್ತಾರೆ.

ಆತುರದಲ್ಲಿ ಮೂಗು ಕತ್ತರಿಸಿಕೊಂಡು, ರಾತ್ರಿಯೆಲ್ಲ ಕನ್ನಡಿ ಮುಂದೆ ನಿಂತು ಕಣ್ಣೀರು ಹಾಕಿದ್ದರಂತೆ, ಹಾಗಾಯಿತು ಕೆಲವು ಅತೀ ಬುದ್ಧಿವಂತರ ಕತೆ. ಕಪೋಲಕಲ್ಪಿತ ಕಟ್ಟುಕತೆಗಳ ಮೂಲಕ ನನ್ನನ್ನು ಹಾಗೂ ನನ್ನ ಕುಟುಂಬವನ್ನು ವಿನಾಕಾರಣ ಅಪರಾಧಿಗಳಂತೆ ಬಿಂಬಿಸಿ ಬಾಯಿಗೆ ಬಂದಂತೆ ಮಾತನಾಡಿರುವ ಬಿಜೆಪಿ–ಜೆಡಿಎಸ್ ಪಕ್ಷಗಳ ವಿವೇಕ ಶೂನ್ಯ ನಾಯಕರು ಇಂದು ಜನರೆದುರು ಬೆತ್ತಲಾಗಿದ್ದಾರೆ. ಸತ್ಯ ಹಾಗೆಯೇ, ಅರಿವಿಗೆ ಬರುವುದು ಸ್ವಲ್ಪ ತಡವಾಗಬಹುದು, ಆದರೆ ಅಂತಿಮ ಗೆಲುವು ಸತ್ಯದ್ದೇ ಆಗಿರುತ್ತದೆ ಎಂದು ಮುಖ್ಯಮಂತ್ರಿ ಟ್ವೀಟ್ ಮಾಡಿದ್ದಾರೆ.

ಅಡಗಿಸಿಟ್ಟ ಅಕ್ಷರಗಳಿಗೆ ಟಾರ್ಚ್ ಹಾಕಿ ತಡಕಾಡುವುದು ಸಿದ್ದರಾಮಯ್ಯಗೆ ಶೋಭೆಯಲ್ಲ

ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಲೇವಡಿ

ಬೆಂಗಳೂರು, ಆ.26 (ಬಿಎಲ್‌ಯು) –ವೈಟ್ನರ್ ಅಡಿಯಲ್ಲಿ ಅಡಗಿಸಿಟ್ಟ ಅಕ್ಷರಗಳಿಗೆ ಟಾರ್ಚ್ ಹಾಕಿ ತಡಕಾಡುತ್ತಿರುವುದು ಈ ರಾಜ್ಯದ ಮುಖ್ಯಮಂತ್ರಿ ಸಿದ್ದರಾಮಯ್ಯಗೆ ಶೋಭೆಯಲ್ಲ ಎಂದು ಕೇಂದ್ರ ಉಕ್ಕು ಮತ್ತು ಬೃಹತ್ ಕೈಗಾರಿಕಾ ಸಚಿವ ಹೆಚ್.ಡಿ. ಕುಮಾರಸ್ವಾಮಿ ಲೇವಡಿ ಮಾಡಿದ್ದಾರೆ.



ಮುಡಾ ದಾಖಲಾತಿಗೆ ವೈಟ್ನರ್ ಹಾಕಿರುವ ಬಗ್ಗೆ ತಮ್ಮ ಎಕ್ಸ್ ಖಾತೆಯಲ್ಲಿ ಕುಮಾರಸ್ವಾಮಿ ಸಿದ್ದರಾಮಯ್ಯಗೆ ಹಲವು ಪ್ರಶ್ನೆಗಳನ್ನು ಕೇಳಿದ್ದಾರೆ. ಇದು ಮೂಲ ದಾಖಲೆಯಾಗಿದ್ದು, ಮುಡಾದಲ್ಲಿ ಇದೆ. ಆದರೆ ಇದು ನಿಮ್ಮ ಬಳಿ ಹೇಗೆ ಬಂದಿತು...? ನಿಮಗೆ ಈ ಮೂಲ ದಾಖಲೆ ತಂದು ಕೊಟ್ಟ ಮಹಾಶಯ ಯಾರು... ಇಷ್ಟಕ್ಕೂ ಈ ಮೂಲ ದಾಖಲೆ ಮುಡಾದಲ್ಲಿದೆಯಾ ಅಥವಾ ನಿಮ್ಮ ಮನೆಯಲ್ಲಿದೆಯಾ... ಈ ಮೂಲ ದಾಖಲೆಗೆ ಟಾರ್ಚ್ ಹಾಕಿದವರು ಯಾರು, ನೀವಾ ಅಥವಾ ಇನ್ನಾದರೂ ಇದ್ದಾರೆಯೇ...

ನನ್ನ ಪ್ರಶ್ನೆ, ಈ ದಾಖಲೆಯನ್ನೇಕೆ ನೀವು ಕೋರ್ಟ್‌ಗೆ ಕೊಟ್ಟಿಲ್ಲ. ಈ ಮೂಲಕ ನ್ಯಾಯಾಲಯವನ್ನು ದಾರಿ ತಪ್ಪಿಸುತ್ತಿದ್ದೀರಾ. ಜನರನ್ನು ದಿಕ್ಕು ತಪ್ಪಿಸಿದ ಹಾಗೆಯೇ, ನ್ಯಾಯಾಲಯಕ್ಕೂ ಸುಳ್ಳು ಮಾಹಿತಿ ನೀಡಿ, ಅಲ್ಲಿಯೂ ಟಾರ್ಚ್ ಬಿಟ್ಟು ತೋರಿಸುತ್ತೀರಾ...ಹೇಗೆ...

ತಪ್ಪಿನ ಮೇಲೆ ತಪ್ಪು ಮಾಡುತ್ತಿದ್ದೀರಿ ...ಶಿಶುಪಾಲನ ಹಾಗೆ. ಮಾಡಿದ ತಪ್ಪು ಮುಚ್ಚಿಕೊಳ್ಳಲು ಮತ್ತೆ ಮತ್ತೆ ತಪ್ಪು ಮಾಡುತ್ತಿದ್ದೀರಾ ಎಂದು ಸಿದ್ದರಾಮಯ್ಯಗೆ ಕುಮಾರಸ್ವಾಮಿ ಎಚ್ಚರಿಸಿದ್ದಾರೆ.

ಒಟ್ಟಾರೆ ಮುಡಾ ಪ್ರಕರಣ ದಿನಕ್ಕೊಂದು ತಿರುವು ಪಡೆಯುತ್ತಿದ್ದು, ಸಿದ್ದರಾಮಯ್ಯ ಹಾಗೂ ಕುಮಾರಸ್ವಾಮಿ ನಡುವಿನ ಟಾಕ್ ಫೈಟ್ ಮತ್ತಷ್ಟು ಜೋರಾಗಿದೆ.

ಮುಡಾ ನಿವೇಶನ ಹಗರಣದ ಸಂದರ್ಭವೇ ಖರ್ಗೆಯವರ ಪುತ್ರನಿಗೆ 5 ಎಕರೆ ಭೂಮಿ ಮಂಜೂರು: ಬಿಜೆಪಿ ಆಕ್ಷೇಪ

- ಸರ್ಕಾರದ ಸಮರ್ಥನೆ
- ನಿಯಮಾನುಸಾರ ಮಂಜೂರು ಮಾಡಿರುವುದಾಗಿ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಸ್ಪಷ್ಟನೆ

ಬೆಂಗಳೂರು,ಆ.26(ಕೆಎಂಶಿ)–ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕುಟುಂಬ ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಡಿ 14 ನಿವೇಶನ ಪಡೆದ ಪ್ರಕರಣದ ಬೆನ್ನಲ್ಲೇ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಪುತ್ರ ರಾಹುಲ್ ಎಂ.ಖರ್ಗೆ ಅವರಿಗೆ ಕೈಗಾರಿಕಾ ಪ್ರದೇಶದಲ್ಲಿ ನಾಗರಿಕ ಸೌಲಭ್ಯಗಳಿಗೆ ಮೀಸಲಿಟ್ಟ ಸ್ಥಳದಲ್ಲಿ ಐದು ಎಕರೆ ಜಮೀನನ್ನು ಸರ್ಕಾರ ನೀಡಿದೆ.

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ ಹೈಟೆಕ್ ಡಿಫೆನ್ಸ್ ಏರೋಸ್ಪೇಸ್ ಪಾರ್ಕ್‌ನಲ್ಲಿ ಹಂಚಿಕೆಯಾಗಿರುವ ವಿಸ್ತೀರ್ಣದಲ್ಲಿ ರಾಹುಲ್ ಖರ್ಗೆ ಟ್ರಸ್ಟಿ ಆಗಿರುವ ಸಿದ್ಧಾರ್ಥ ವಿಹಾರ ಟ್ರಸ್ಟ್ ಹೆಸರಿನಲ್ಲಿ ಈ ಜಮೀನು ಪಡೆದಿದ್ದಾರೆ.

ಪರಿಶಿಷ್ಟ ಜಾತಿ ಕೋಟಾದಡಿಯಲ್ಲೇ 5 ಎಕರೆ ಜಾಗವನ್ನು ಸರ್ಕಾರ ಮಂಜೂರು ಮಾಡಿದೆ. ಈ ಟ್ರಸ್ಟ್ ಸಂಶೋಧನೆ ಮತ್ತು ಅಭಿವೃದ್ಧಿ ತರಬೇತಿ ಸಂಸ್ಥೆಗಳ ಸ್ಥಾಪನೆಗಾಗಿ ಜಾಗ ಮಂಜೂರು ಮಾಡುವಂತೆ ಕೋರಿತ್ತು. ಅವರ ಅರ್ಜಿ ಮೇರೆಗೆ ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಅಧ್ಯಕ್ಷತೆಯಲ್ಲಿ ನಡೆದ ಉನ್ನತ ಮಟ್ಟದ ಸಭೆಯಲ್ಲಿ ಈ ಸ್ಥಳ ಮಂಜೂರು ಮಾಡಲಾಗಿದೆ.



ಎಂ.ಬಿ.ಪಾಟೀಲ್

ಈ ಸಂಬಂಧ ಪತ್ರಿಕಾ ಹೇಳಿಕೆ ನೀಡಿರುವ ಎಂ.ಬಿ.ಪಾಟೀಲ್, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ರಾಹುಲ್ ಖರ್ಗೆ ಅವರ ಸಿದ್ಧಾರ್ಥ ವಿಹಾರ ಶಿಕ್ಷಣ ಟ್ರಸ್ಟ್‌ಗೆ ಏರೋಸ್ಪೇಸ್ ಪಾರ್ಕ್‌ನಲ್ಲಿ ಸಿಎ ನಿವೇಶನವನ್ನು ಕಾನೂನು ಪ್ರಕಾರವೇ ನಿಗದಿತ ಬೆಲೆಗೆ ನೀಡಲಾಗಿದೆ ಎಂದು ತಿಳಿಸಿದ್ದಾರೆ.

ಸರ್ಕಾರ ನೀಡಿರುವ ಜಾಗದಲ್ಲಿ ಸಂಶೋಧನೆ ಮತ್ತು ತರಬೇತಿ ಕೇಂದ್ರ ಸ್ಥಾಪಿಸುವುದಾಗಿ ತಿಳಿಸಿದ್ದು, ಬಿಜೆಪಿ ನಾಯಕ ಲೆಹರ್ ಸಿಂಗ್ ಆರೋಪಿಸಿರುವಂತೆ ಯಾವ ನಿಯಮವೂ ಉಲ್ಲಂಘನೆ ಆಗಿಲ್ಲ. ರಾಹುಲ್ ಖರ್ಗೆ ಐಐಟಿ ಪದವೀಧರರಾಗಿದ್ದು, ಅವರ ಕುಟುಂಬ ವಿವಿಧ ಶೈಕ್ಷಣಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದೆ. ಕೆಐಎಡಿಬಿ ನಿಯಮಗಳ ಪ್ರಕಾರ ಸಿಎ ನಿವೇಶನಗಳಲ್ಲಿ ಆರ್ ಅಂಡ್ ಡಿ ಕೇಂದ್ರಗಳು, ಉತ್ಕೃಷ್ಟತಾ ಕೇಂದ್ರಗಳು, ತಾಂತ್ರಿಕ ಸಂಸ್ಥೆಗಳು, ಕೌಶಲಾಭಿವೃದ್ಧಿ, ಸರ್ಕಾರಿ ಕಚೇರಿಗಳು, ಬ್ಯಾಂಕ್, ಆಸ್ಪತ್ರೆ, ಹೋಟೆಲ್, ಪೆಟ್ರೋಲ್‌ಬಂಕ್, ಕ್ಯಾಂಟೀನ್, ವಸತಿ ಸೌಲಭ್ಯ ಇತ್ಯಾದಿಗಳ ಅಭಿವೃದ್ಧಿಗೆ ಅವಕಾಶವಿದೆ. ಆಸಕ್ತರು ಯಾರು ಬೇಕಾದರೂ ಇದಕ್ಕೆ ಪ್ರಯತ್ನಿಸಬಹುದು, ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಶಿಫಾರಸಿನ ನಂತರವೇ ನಿವೇಶನಗಳ ಹಂಚಿಕೆಯಾಗುತ್ತದೆ.

ಈ ಹಿಂದೆ ಬಿಜೆಪಿ ಸರ್ಕಾರದಲ್ಲಿ ಚಾಣಕ್ಯ ವಿಶ್ವವಿದ್ಯಾಲಯಕ್ಕೆ ಕೈಗಾರಿಕಾ ಪ್ರದೇಶದಲ್ಲೇ 116 ಎಕರೆಯನ್ನು ಬರೀ 50 ಕೋಟಿ ರೂ.ಗೆ ನೀಡಲಾಗಿದೆ, ಇದರಿಂದ 137 ಕೋಟಿ ರೂ. ಬೊಕ್ಕಸಕ್ಕೆ ನಷ್ಟವಾಗಿದೆ, ಲೆಹರ್ ಸಿಂಗ್ ಅವರು ಈ ಬಗ್ಗೆ ಮಾತನಾಡಬಹುದಲ್ಲವೇ ಎಂದು ಪ್ರಶ್ನಿಸಿದರು. ಈ ಮೊದಲು ಕೆಐಎಡಿಬಿ ಮಂಡಳಿಯೇ ಸಿಎ ನಿವೇಶನಗಳ ಹಂಚಿಕೆ ಮಾಡುತ್ತಿತ್ತು, ತಾವು ಅಧಿಕಾರ ವಹಿಸಿಕೊಂಡ ಮೇಲೆ ರಾಜ್ಯಮಟ್ಟದ ಏಕಗವಾಕ್ಷಿ ಸಮಿತಿ ಅನುಮೋದನೆ ನೀಡುವ ಪಾರದರ್ಶಕ ವ್ಯವಸ್ಥೆ ಜಾರಿಗೆ ತರಲಾಗಿದೆ, ಮೊದಲ ಬಾರಿಗೆ ಸಿಎ ನಿವೇಶನಗಳ ಹಂಚಿಕೆಯಲ್ಲೂ ಪರಿಶಿಷ್ಟರಿಗೆ ಶೇ.24.10 ಮೀಸಲಾತಿ ಕಲ್ಪಿಸಲಾಗಿದೆ, ಲೆಹರ್ ಸಿಂಗ್ ಈ ಸತ್ಯ ಅರಿತು ಮಾತನಾಡುವುದು ಒಳ್ಳೆಯದು ಎಂದರು.

ಒಕ್ಕಲಿಗರ ಹಿತರಕ್ಷಣಾ ಟ್ರಸ್ಟ್‌ಗೆ ಆಯ್ಕೆ...



ಮೈಸೂರಿನ ಕುವೆಂಪುನಗರ ಒಕ್ಕಲಿಗರ ಹಿತರಕ್ಷಣಾ ಟ್ರಸ್ಟ್‌ಗೆ ಬಂದಿದ್ದು, ಇದರ ಅಧ್ಯಕ್ಷರಾಗಿ ಸರ್ಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷ ಹೆಚ್.ಕೆ.ರಾಮು, ಗೌರವಾಧ್ಯಕ್ಷರಾಗಿ ನಿವೃತ್ತ ಪೊಲೀಸ್ ಅಧಿಕಾರಿ ಬಿ.ಪಿ.ಸುರೇಶ್, ಹಿರಿಯ ಉಪಾಧ್ಯಕ್ಷರಾಗಿ ನಿವೃತ್ತ ಡಿಡಿಪಿಐ ಶಾರದಮ್ಮ, ಕೃಷ್ಣಪ್ಪ, ಉಪಾಧ್ಯಕ್ಷರಾಗಿ ಮೈಮುಲ್ ಮಾಜಿ ಅಧ್ಯಕ್ಷ ಕೆ.ಉಮಾಶಂಕರ್, ವಿಕ್ರಾಂತ ದೇವೇಗೌಡ, ಕಾರ್ಯದರ್ಶಿಯಾಗಿ ರಘುರಾಂ, ಸಂಘಟನಾ ಕಾರ್ಯದರ್ಶಿಯಾಗಿ ಲಿಂಗಪ್ಪ, ಕಾನೂನು ಸಲಹೆಗಾರರಾಗಿ ಗಂಗಾಧರಗೌಡ, ಖಜಾಂಚಿಯಾಗಿ ಅನಿಲ್, ಸಂಚಾಲಕರಾಗಿ ಬೂಕನಕೆರೆ ವಿಜೇಂದ್ರ ಆಯ್ಕೆಯಾಗಿದ್ದಾರೆ.

ಯದುವೀರ ಒಡೆಯರ್‌ಗೆ ಶುಭಾಶಯ...



ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಮೈಸೂರಿನ ಅವರ ಕಚೇರಿಗೆ ಭೇಟಿ ನೀಡಿದ ರಾಜ್ಯ ಬಿಜೆಪಿ ಹಿಂದುಳಿದ ವರ್ಗಗಳ ಅಧ್ಯಕ್ಷ ಆರ್.ರಘು (ಕೌಟಿಲ್ಯ) ಶುಭಾಶಯ ಕೋರಿದರು.

ಡೆಂಗ್ಯೂ ನಿಯಂತ್ರಣಕ್ಕೆ ಓವಿ ಟ್ರ್ಯಾಪ್ ಸಾಧನ ಅಳವಡಿಕೆ

ಬೆಂಗಳೂರು, ಆ.26(ಬಿಎಲ್‌ಯು)–ಡೆಂಗ್ಯೂ ನಿಯಂತ್ರಣಕ್ಕೆ ಬೆಂಗಳೂರಿನಲ್ಲಿ ಓವಿ ಟ್ರ್ಯಾಪ್ ಸಾಧನ ಅಳವಡಿಸಿದ್ದು, ಇದರಲ್ಲಿ ಉತ್ತಮ ಫಲಿತಾಂಶ ಬಂದರೆ ರಾಜ್ಯಾದ್ಯಂತ ಅಳವಡಿಸಲಾಗುವುದು ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದ್ದಾರೆ. ಈ ಕುರಿತು ತಮ್ಮ ಎಕ್ಸ್ ಖಾತೆಯಲ್ಲಿ ಮಾಹಿತಿ ನೀಡಿರುವ ದಿನೇಶ್ ಗುಂಡೂರಾವ್, ಬೆಂಗಳೂರಿನ ಗೋಪಾಲಪುರದಲ್ಲಿ 120 ಓವಿ ಟ್ರ್ಯಾಪ್ ಸಾಧನಗಳನ್ನು ಮನೆಗಳಿಗೆ ಅಳವಡಿಸಲಾಗಿದೆ ಎಂದು ಹೇಳಿದ್ದಾರೆ.



ಡೆಂಗ್ಯೂ, ಮಲೇರಿಯಾದಂತಹ ಸಾಂಕ್ರಾಮಿಕ ರೋಗ ಹರಡುವ ಈಡಿಸ್ ಸೊಳ್ಳೆಗಳಿಗೆ ಖೆಡ್ಡಾ ತೋಡಲು ಆರೋಗ್ಯ ಇಲಾಖೆ ಪ್ರಾಯೋಗಿಕವಾಗಿ ವೈಜ್ಞಾನಿಕವಾದ ಈ ಪ್ರಯೋಗ ಮಾಡಿದೆ. ಬೆಂಗಳೂರಿನಲ್ಲಿ ಅಳವಡಿಸಿರುವ ಓವಿ ಟ್ರ್ಯಾಪ್ ಸಾಧನದಿಂದ ಉತ್ತಮ ಫಲಿತಾಂಶ ಬಂದರೆ ರಾಜ್ಯಾದ್ಯಂತ ಇದನ್ನು ಅಳವಡಿಸಲಾಗುವುದು ಎಂದು ಹೇಳಿದ್ದಾರೆ. ಏನಿದು, ಓವಿ ಟ್ರ್ಯಾಪ್– ಇದು ಮಡಿಕೆಯಾಕಾರದ ಸಾಧನವಾಗಿದೆ. ಕುಂಡದಲ್ಲಿ ನೀರು ತುಂಬಿ ಅದರಲ್ಲಿ ರಾಸಾಯನಿಕ ಬೆರೆಸಲಾಗುತ್ತದೆ. ನೀರಿನಲ್ಲಿರುವ ರಾಸಾಯನಿಕ ಮಿಶ್ರಣ ಸೊಳ್ಳೆಗಳನ್ನು ಆಕರ್ಷಿಸಿ ಸಾಯಿಸುತ್ತದೆ. ಇದರಿಂದ ಈಡಿಸ್ ಸೊಳ್ಳೆ ಹಾಗೂ ಅದರ ಮೊಟ್ಟೆಗಳು ನಾಶವಾಗುತ್ತವೆ.

ಕೌಜಲಗಿಯಲ್ಲಿ ಸಂಗೊಳ್ಳಿ ರಾಯಣ್ಣನ ಕೋಟೆ ಉದ್ಘಾಟನೆ

ಬೆಳಗಾವಿ: ಬೆಳಗಾವಿ ಜಿಲ್ಲೆಯ ಗೋಕಾಕ ತಾಲೂಕಿನ ಕೌಜಲಗಿಯಲ್ಲಿ ನಿರ್ಮಿಸಲಾಗಿರುವ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣನ ಭವ್ಯ ಕಂಚಿನ ಮೂರ್ತಿ ಮತ್ತು ಕೋಟೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಉದ್ಘಾಟಿಸಿದರು.



70 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗಿರುವ ರಾಯಣ್ಣ ಮೂರ್ತಿ ಮತ್ತು ಕೋಟೆ ಉದ್ಘಾಟಿಸಿ ಮಾತನಾಡಿದ ಸಿಎಂ ಸಿದ್ದರಾಮಯ್ಯ ಅವರು, ರಾಣಿ ಚನ್ನಮ್ಮನ ಬಲಗೈ ಬಂಟ ರಾಯಣ್ಣ ಅತ್ಯಂತ ಪರಾಕ್ರಮಿ. ಬ್ರಿಟಿಷರು ರಾಣಿ ಚನ್ನಮ್ಮನ ಆಸ್ಥಾನದ ಮೇಲೆ ದಾಳಿ ನಡೆಸಿದಾಗ ರಾಯಣ್ಣನ ಹೋರಾಟದಿಂದ, ಶೌರ್ಯದಿಂದ ಗೆಲುವು ಸಾಧ್ಯವಾಯಿತು. 2ನೇ ಯುದ್ಧದಲ್ಲಿ ಸೋಲಾದರೂ ಬ್ರಿಟಿಷರ ಕೈಗೆ ಸಿಗದೆ ತಪ್ಪಿಸಿಕೊಂಡ ರಾಯಣ್ಣ ಗೆರಿಲ್ಲಾ ಸೈನ್ಯ ಕಟ್ಟಿ, ಗೆರಿಲ್ಲಾ ಯುದ್ಧ ಮಾಡಿ ಬ್ರಿಟಿಷರಿಗೆ ಚಳ್ಳೆ ಹಣ್ಣು ತಿನ್ನಿಸಿದರು. ಇದರಿಂದ ಬ್ರಿಟಿಷರು ನೆಮ್ಮದಿ ಕೆಡಿಸಿಕೊಂಡಿದ್ದರು. ಆದರೆ ನಮ್ಮವರೇ ರಾಯಣ್ಣನನ್ನು ಬ್ರಿಟಿಷರಿಗೆ ಹಿಡಿದುಕೊಟ್ಟರು ಎಂದರು.

ನಮ್ಮವರ ದೇಶದ್ರೋಹದಿಂದ ರಾಯಣ್ಣ ಬ್ರಿಟಿಷರ ವಶವಾದರು. ರಾಯಣ್ಣ ಈಜಾಡುವಾಗ ಅವರ ಕೈಯಲ್ಲಿ ಆಯುಧ ಇರುವುದಿಲ್ಲ. ಈ ವೇಳೆ ಅವರನ್ನು ಬಂಧಿಸುವುದು ಸುಲಭ ಎಂದು ಬ್ರಿಟಿಷರಿಗೆ ಉಪಾಯ ಕೊಟ್ಟು ಬಂಧನಕ್ಕೆ ಕಾರಣರಾದವರು ನಮ್ಮವರೇ ಎಂದರು.

ಇಂಥಾ ದೇಶದ್ರೋಹಿಗಳು ನಮ್ಮಲ್ಲೇ ಇದ್ದಾರೆ. ಈ ಬಿಜೆಪಿಯವರು ನನ್ನನ್ನು ಅಧಿಕಾರದಿಂದ ಕೆಳಗಿಳಿಸಬೇಕು ಎಂದು ಷಡ್ಯಂತ್ರ ಮಾಡುತ್ತಲೇ ಇದ್ದಾರೆ. ಆದರೆ ಎಲ್ಲಿಯವರೆಗೂ ನಿಮ್ಮ ಆಶೀರ್ವಾದ ನನ್ನ ಮೇಲೆ ಇರುತ್ತದೋ ಅಲ್ಲಿಯವರೆಗೂ ಈ ಸಿದ್ದರಾಮಯ್ಯನನ್ನು ಕೆಳಗಿಳಿಸಲು ಸಾಧ್ಯವಿಲ್ಲ. ಹಿಂದುಳಿದ ಸಮುದಾಯದವರು ಸಿಎಂ ಆಗಬಾರದು, ಅಧಿಕಾರದಲ್ಲಿರಬಾರದು ಎನ್ನುವುದು ಬಿಜೆಪಿಯ ಪುರಾತನ ಸಿದ್ಧಾಂತ. ಅದಕ್ಕೇ ಯಾವುದೇ ತಪ್ಪಿಲ್ಲದಿದ್ದರೂ ನನ್ನ ವಿರುದ್ಧ ಭಾರಿ ಷಡ್ಯಂತ್ರ ರಚಿಸಿದ್ದಾರೆ. ಜನರ ಆಶೀರ್ವಾದ ನನ್ನ ಮೇಲೆ ಇರುವವರೆಗೂ ಷಡ್ಯಂತ್ರ ಗೆಲ್ಲುವುದಿಲ್ಲ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಕಿಡಿಕಾರಿದರು.

ಬಾಗೋಜಿಕೊಪ್ಪ ಮಠದ ಶಿವಲಿಂಗ ಮುರುಘ ರಾಜೇಂದ್ರ ಸ್ವಾಮಿಗಳ ದಿವ್ಯ ಸಾನ್ನಿಧ್ಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಸಚಿವರಾದ ಲಕ್ಷ್ಮಿ ಹೆಬ್ಬಾಳ್ಕರ್ ಮತ್ತು ಸತೀಶ್ ಜಾರಕಿಹೊಳಿ, ಶಾಸಕ ಬಾಲಚಂದ್ರ ಜಾರಕಿಹೊಳಿ ಹಾಗೂ ಮುಖ್ಯ ಸಚೇತಕರಾದ ಅಶೋಕ್ ಪಟ್ಟಣ್ ಸೇರಿ ಹಲವು ಗಣ್ಯರು ಉಪಸ್ಥಿತರಿದ್ದರು.

ದೇಶ – ವಿದೇಶ

ತಪಾಸಣೆ ನೆಪದಲ್ಲಿ ಬಸ್ ಪ್ರಯಾಣಿಕರ ಇಳಿಸಿ ಗುಂಡಿನ ದಾಳಿ; 31 ಮಂದಿ ಸಾವು

ಇಸ್ಲಾಮಾಬಾದ್: ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಮತ್ತೆ ಉಗ್ರರು ಅಟ್ಟಹಾಸ ಮೆರೆದಿದ್ದು, ಗುರುತಿನ ಚೀಟಿ ತಪಾಸಣೆ ನೆಪದಲ್ಲಿ ಬಸ್‌ನಲ್ಲಿದ್ದ ಪ್ರಯಾಣಿಕರ ಇಳಿಸಿ ಗುಂಡಿನ ದಾಳಿ ನಡೆಸಿ 31 ಮಂದಿಯನ್ನು ಕೊಂದು ಹಾಕಿದ್ದಾರೆ. ಪಾಕಿಸ್ತಾನದ ಬಲೂಚಿಸ್ತಾನದ ರಾರಶಮ್ ಜಿಲ್ಲೆಯಲ್ಲಿ ಈ ಘಟನೆ ವರದಿಯಾಗಿದ್ದು, ಆಕ್ರಮಣಕಾರರು ಅಂತರ–ಪ್ರಾಂತೀಯ ಬಸ್‌ಗಳು ಮತ್ತು ಟ್ರಕ್‌ಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸಿದ್ದಾರೆ. ಅಲ್ಲದೆ ಹತ್ಯೆಯ ನಂತರ, ದಾಳಿಕೋರರು ಸ್ಥಳದಿಂದ ಪಲಾಯನ ಮಾಡುವ ಮೊದಲು ಹತ್ತು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ. ದಾಳಿಯನ್ನು ಭಯೋತ್ಪಾದಕ ಕೃತ್ಯ ಎಂದು ಬಲೂಚಿಸ್ತಾನ ಮುಖ್ಯಮಂತ್ರಿ ಸರ್ಫರಾಜ್ ಬುಗ್ತಿ ಕರೆದಿದ್ದು, ಸೂಕ್ತ ಕ್ರಮದ ಎಚ್ಚರಿಕೆ ನೀಡಿದ್ದಾರೆ. ಈ ಹಿಂದೆಯೂ ಬಲೂಚಿಸ್ತಾನದಲ್ಲಿ ಪಂಜಾಬ್‌ನ ಜನರನ್ನು ಗುರಿಯಾಗಿಸಿಕೊಂಡು ಹಲವು ದಾಳಿಗಳು ನಡೆದಿದ್ದು, ಏಪ್ರಿಲ್‌ನಲ್ಲಿ, ನೋಶ್ಕಿ ಬಳಿ 9 ಪ್ರಯಾಣಿಕರನ್ನು ಬಸ್‌ನಿಂದ ಇಳಿಸಿ ಬಂದೂಕುಧಾರಿಗಳು ಗುಂಡಿಕ್ಕಿ ಕೊಂದು ಹಾಕಿದ್ದರು.



ಫುಟ್ಪಾತ್‌ನಲ್ಲಿ ಮಲಗಿದ್ದವರ ಮೇಲೆ ಹರಿದ ಟ್ರಕ್; 3 ಸಾವು, ಇಬ್ಬರ ಸ್ಥಿತಿ ಗಂಭೀರ

ನವದೆಹಲಿ: ಫುಟ್ಪಾತ್ ಮೇಲೆ ಮಲಗಿದ್ದವರ ಮೇಲೆ ಟ್ರಕ್ ಹರಿದ ಪರಿಣಾಮ ಮೂರು ಮಂದಿ ಸಾವನ್ನಪ್ಪಿರುವ ಘಟನೆ ದೆಹಲಿಯಲ್ಲಿ ನಡೆದಿದೆ.



ದೆಹಲಿಯ ಶಾಸ್ತ್ರಿ ಪಾರ್ಕ್ ಮೆಟ್ರೋ ನಿಲ್ದಾಣದ ಬಳಿ ಸೋಮವಾರ ಮುಂಜಾನೆ 4.30ರ ಸುಮಾರಿನಲ್ಲಿ ಈ ಘಟನೆ ನಡೆದಿದ್ದು, ಚಾಲಕನ ನಿಯಂತ್ರಣ ತಪ್ಪಿದ ಟ್ರಕ್ ನೇರವಾಗಿ ಫುಟ್‌ಪಾತ್ ಮೇಲೆ ಹತ್ತಿದ್ದು, ಅಲ್ಲಿ ಮಲಗಿದ್ದ ಐವರ ಮೇಲೆ ಹರಿದಿದೆ. ಈ ವೇಳೆ ಮೂವರು ಸ್ಥಳದಲ್ಲೇ ಸಾವನ್ನಪ್ಪಿದ್ದು, ಇಬ್ಬರ ಸ್ಥಿತಿ ಚಿಂತಾಜನಕವಾಗಿದೆ. ಗಾಯಾಳುಗಳನ್ನು ಸಮೀಪದ ಜಿಟಿಬಿ ಆಸ್ಪತ್ರೆಗೆ ದಾಖಲಿಸಲಾಗಿದ್ದು, ಘಟನೆ ಬಳಿಕ ಚಾಲಕ ಲಾರಿಯನ್ನು ಸ್ಥಳದಲ್ಲೇ ಬಿಟ್ಟು ಪರಾರಿಯಾಗಿದ್ದಾನೆ. ಮೃತಪಟ್ಟವರ ಗುರುತು ಇನ್ನೂ ಪತ್ತೆಯಾಗಿಲ್ಲ ಎಂದು ಪೊಲೀಸ್ ಅಧಿಕಾರಿ ತಿಳಿಸಿದ್ದಾರೆ. ಗಾಯಗೊಂಡವರನ್ನು ಶಾಸ್ತ್ರಿ ಪಾರ್ಕ್ ಕೊಳೆಗೇರಿ ನಿವಾಸಿಗಳಾದ ಮುಸ್ತಾಕ್ (35), ಗಾಂಧಿನಗರ ನಿವಾಸಿ ಕಮಲೇಶ್ (36) ಎಂದು ಗುರುತಿಸಲಾಗಿದೆ. ಪೊಲೀಸರು ಲಾರಿಯನ್ನು ವಶಪಡಿಸಿಕೊಂಡಿದ್ದು, ಅದರ ದಾಖಲೆಗಳ ಮೂಲಕ ಮಾಲೀಕರನ್ನು ಸಂಪರ್ಕಿಸುತ್ತಿದ್ದಾರೆ.

ಉಕ್ರೇನ್ ಭಾರಿ ಡ್ರೋನ್ ದಾಳಿಗೆ ತತ್ತರಿಸಿದ ರಷ್ಯಾ

ಟೋಕಿಯೋ: ರಷ್ಯಾದ ಸರಟೋವ್‌ನಲ್ಲಿರುವ 38 ಅಂತಸ್ತಿನ ವೋಲ್ಗಾ ಸ್ಕೈ ವಸತಿ ಸಂಕೀರ್ಣಕ್ಕೆ ಉಕ್ರೇನಿಯನ್ ಡ್ರೋನ್ ಅಪ್ಪಳಿಸಿತು. ಇದು ನಗರದ ಅತ್ಯಂತ ಎತ್ತರದ ಕಟ್ಟಡವಾಗಿದೆ. ಶುಕ್ರವಾರ ಬೆಳಿಗ್ಗೆ ಸುಮಾರು 350 ಕಿಲೋಮೀಟರ್ ದೂರದಲ್ಲಿರುವ ಮೊರೊವೊಸ್ಕ್ ಏರ್‌ಬೇಸ್ ಮೇಲೆ ದಾಳಿ ಮಾಡುವ ಮೂಲಕ ರಷ್ಯಾದ 6 ಯುದ್ಧ–ಬಾಂಬರ್‌ಗಳನ್ನು ನಾಶಪಡಿಸಿದೆ ಎಂದು ಉಕ್ರೇನ್ ಹೇಳಿಕೊಂಡಿದೆ. ರಷ್ಯಾದ ರೊಸ್ಟೊವ್, ಸರಟೋವ್, ಕುರ್ಸ್ಕ್ ಮತ್ತು ಬೆಲ್ಗೊರೊಡ್ ಪ್ರದೇಶಗಳನ್ನು ಗುರಿಯಾಗಿಸಿಕೊಂಡು ಉಕ್ರೇನ್ ಪ್ರಮುಖ ದಾಳಿ ನಡೆಸಿದೆ ಎಂದು ರಷ್ಯಾದ ರಕ್ಷಣಾ ಸಚಿವಾಲಯ ಟೆಲಿಗ್ರಾಮ್‌ನಲ್ಲಿ ತಿಳಿಸಿದೆ. ಉಕ್ರೇನಿಯನ್ ಅಧಿಕಾರಿಯೊಬ್ಬರು, ಅನಾಮಧೇಯತೆಯ ಸ್ಥಿತಿಯ ಕುರಿತು ಮಾತನಾಡುತ್ತಾ, ಮೊರೊಜೊವ್ಸ್ಕ್ ವಾಯುನೆಲೆಯ ಮೇಲಿನ ದಾಳಿಯನ್ನು ಉಕ್ರೇನ್‌ನ ಭದ್ರತಾ ಸೇವೆಯ ಸೇನೆ ಮತ್ತು ರಕ್ಷಣಾ ಪಡೆಗಳ ಸಮನ್ವಯದಲ್ಲಿ ನಡೆಸಿದೆ.ಈ ದಾಳಿಯಲ್ಲಿ ಕನಿಷ್ಠ ಆರು ಯುದ್ಧ–ಬಾಂಬರ್ ವಿಮಾನಗಳು ನಾಶವಾದವು.



ಕ್ಷಿಪಣಿ ದಾಳಿ: ರಷ್ಯಾ ಮೇಲೆ ಡ್ರೋಣ್ ದಾಳಿ ನಡೆಸಿದ್ದ ಉಕ್ರೇನ್‌ಗೆ ಕ್ಷಿಪಣಿ ದಾಳಿ ಮೂಲಕ ರಷ್ಯಾ ತಿರುಗೇಟು ನೀಡಿದ್ದು, ರಷ್ಯಾದ ದಿಢೀರ್ ಕ್ರಮಕ್ಕೆ ಕೀವ್ ಜನತೆ ಬೆಚ್ಚಿ ಬಿದ್ದಿದ್ದಾರೆ.

ದೇವಸ್ಥಾನದ ವಿಗ್ರಹ ವಿರೂಪ: ತ್ರಿಪುರಾದಲ್ಲಿ 12 ಮನೆ, ವಾಹನಗಳಿಗೆ ಬೆಂಕಿ

ಅಗರ್ತಲಾ: ಪಶ್ಚಿಮ ತ್ರಿಪುರಾದ ರಾಣೀರ್‌ಬಜಾರ್ ಪ್ರದೇಶದ ದೇವಸ್ಥಾನವೊಂದರಲ್ಲಿ ವಿಗ್ರಹವನ್ನು ವಿರೂಪಗೊಳಿಸಿರುವ ವಿಚಾರ ತಿಳಿದ ನಂತರ ಅಪರಿಚಿತ ವ್ಯಕ್ತಿಗಳು ಕನಿಷ್ಠ 12 ಮನೆಗಳು ಮತ್ತು ಕೆಲವು ವಾಹನಗಳಿಗೆ ಬೆಂಕಿ ಹಚ್ಚಿದ್ದಾರೆ ಎಂದು ಪೊಲೀಸರು ಸೋಮವಾರ ತಿಳಿಸಿದ್ದಾರೆ.



ಜಿರಾನಿಯಾ ಉಪವಿಭಾಗದಲ್ಲಿ ಈ ಘಟನೆ ನಡೆದಿದ್ದು, ಸ್ಥಳದಲ್ಲಿ ಉದ್ವಿಗ್ನ ಪರಿಸ್ಥಿತಿ ನಿರ್ಮಾಣವಾಗಿದೆ. ಹೀಗಾಗಿ ಈ ಪ್ರದೇಶದಲ್ಲಿ ನಿಷೇಧಾಜ್ಞೆ ವಿಧಿಸಲಾಗಿದೆ ಮತ್ತು ಭಾರಿ ಭದ್ರತೆಯನ್ನು ನಿಯೋಜಿಸಲಾಗಿದೆ.

ಘಟನೆಯಲ್ಲಿ ಯಾವುದೇ ಸಾವು ನೋವು ಸಂಭವಿಸಿಲ್ಲ. ಉದ್ರಿಕ್ತ ಗುಂಪನ್ನು ನೋಡಿದ ನಿವಾಸಿಗಳು ತಮ್ಮ ವಾಸಸ್ಥಳದಿಂದ ಓಡಿಹೋದರು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ. ಉದ್ವಿಗ್ನತೆಯನ್ನು ಶಮನಗೊಳಿಸಲು ಹೆಚ್ಚಿನ ಭದ್ರತಾ ಪಡೆಗಳನ್ನು ನಿಯೋಜನೆ ಮಾಡಲಾಗಿದೆ ಎಂದು ದಾಸ್ ಹೇಳಿದ್ದಾರೆ. ಪೊಲೀಸ್ ಮಹಾನಿರ್ದೇಶಕ ಅನುರಾಗ್ ಧಂಕರ್ ಮತ್ತು ಪಶ್ಚಿಮ ತ್ರಿಪುರಾ ಪೊಲೀಸ್ ವರಿಷ್ಠಾಧಿಕಾರಿ ಕಿರಣ್ ಕುಮಾರ್ ಅವರು ಪ್ರದೇಶಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಿದ್ದಾರೆ.

ಹಸೀನಾ ಪಕ್ಷದ ವಿದ್ಯಾರ್ಥಿ ಘಟಕದ ಮಾಜಿ ನಾಯಕ ಭಾರತಕ್ಕೆ ಬರುವಾಗ ಸಾವು

ನವದೆಹಲಿ: ಬಾಂಗ್ಲಾ ಮಾಜಿ ಪ್ರಧಾನಿ ಶೇಖ್ ಹಸೀನಾ ಅವರ ಪಕ್ಷದ ವಿದ್ಯಾರ್ಥಿ ಘಟಕದ ಮಾಜಿ ನಾಯಕ ಭಾರತಕ್ಕೆ ಬರುವಾಗ ಸಾವನ್ನಪ್ಪಿದ್ದಾರೆ. ಹೃದಯಾಘಾತದಿಂದ ಈ ಸಾವು ಸಂಭವಿಸಿದೆ ಎಂದು ಮಾಧ್ಯಮ ವರದಿ ಹೇಳಿದೆ.



ಇಶಾಕ್ ಅಲಿ ಖಾನ್ ಪನ್ನಾ ಸಾವನ್ನಪ್ಪಿರುವ ವ್ಯಕ್ತಿಯಾಗಿದ್ದಾನೆ ಎಂದು ಢಾಕಾ ಟ್ರಿಬ್ಯೂನ್ ವರದಿ ಪ್ರಕಟಿಸಿದೆ. ಪನ್ನಾ ಅವರ ಸೋದರಳಿಯ ಲೈಕುಜ್ಜಮಾನ್ ತಾಲೂಕ್ದರ್ ಮಿಂಟೂ, ಚಿರಾಪಾರ ಪರ್ ಸಟೋರಿಯಾ ಯೂನಿಯನ್ ಪರಿಷತ್ ಮತ್ತು ಕೌಖಾಲಿ ಉಪಜಿಲಾ ಅವಾಮಿ ಲೀಗ್‌ನ ಸಂಘಟನಾ ಕಾರ್ಯದರ್ಶಿ ಆಗಿರುವ ಅವರ ಸೋದರ ಸಂಬಂಧಿ ಮೇಘಾಲಯದ ಶಿಲ್ಲಾಂಗ್‌ನಲ್ಲಿ ಬೆಟ್ಟದಿಂದ ಜಾರಿ ಬಿದ್ದು ಹೃದಯಾಘಾತಕ್ಕೆ ಕಾರಣರಾಗಿದ್ದಾರೆ ಎಂದು ವರದಿ ತಿಳಿಸಿದೆ. ಮತ್ತೊಬ್ಬ ಸಂಬಂಧಿ ಜಾಸಿಮ್ ಉದ್ದೀನ್ ಖಾನ್ ಅವರು 3 ದಿನಗಳ ಹಿಂದೆ ಪನ್ನಾ ಅವರೊಂದಿಗೆ ಫೋನ್‌ನಲ್ಲಿ ಮಾತನಾಡಿದ್ದರು ಎಂದು ಹೇಳಿದ್ದಾರೆ. ಪನ್ನಾ ಅವರು ಸಿಲ್ಹೆಟ್‌ನಲ್ಲಿರುವ ತಮಾಬಿಲ್ ಗಡಿಯ ಮೂಲಕ ಭಾರತವನ್ನು ಪ್ರವೇಶಿಸಿದ್ದರು ಎಂಬ ಮಾಹಿತಿ ಇದ್ದು, ಅಲ್ಲಿ ಅವರು ಸಾವನ್ನಪ್ಪಿದರು ಎಂದು ಸಂಬಂಧಿಸಿದವರು ತಿಳಿಸಿದ್ದಾರೆ.

ಮೈಸೂರು ಮಿತ್ರ ಮಂಗಳವಾರ 27 ಆಗಸ್ಟ್ 2024

ಮಕ್ಕಳಲ್ಲಿ ಶ್ರೀಕೃಷ್ಣನನ್ನು ಕಾಣುತ್ತೇವೆ

• ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ವರ್ಣನೆ • ಜಿಲ್ಲಾಡಳಿತದಿಂದ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಣೆ

ಮಡಿಕೇರಿ, ಆ.26–ಶ್ರೀಕೃಷ್ಣನ ಬಗ್ಗೆ ಪ್ರತಿಯೊಬ್ಬರಲ್ಲೂ ಗೌರವ ಮತ್ತು ಭಕ್ತಿ ಇದೆ. ಶ್ರೀಕೃಷ್ಣನ ವೇಷದಲ್ಲಿ ಮಕ್ಕಳನ್ನು ಕಾಣುತ್ತೇವೆ ಎಂದು ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ವರ್ಣಿಸಿದರು.



ಮಡಿಕೇರಿ ಗಾಂಧಿ ಭವನದಲ್ಲಿ ನಡೆದ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಕೃಷ್ಣ ಭಾವಚಿತ್ರಕ್ಕೆ ಅಪರ ಜಿಲ್ಲಾಧಿಕಾರಿ ಆರ್.ಐಶ್ವರ್ಯ ಪುಷ್ಪಾರ್ಚನೆ ನೆರವೇರಿಸಿದರು.

ನಗರದ ಗಾಂಧಿ ಭವನದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನಡೆದ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಶ್ರೀಕೃಷ್ಣ ಭಾವಚಿತ್ರಕ್ಕೆ ಪುಷ್ಪಾರ್ಚನೆ ನೆರವೇರಿಸಿ ಮಾತನಾಡಿದ ಅವರು, ಮಹಾಭಾರತದಲ್ಲಿ ಶ್ರೀಕೃಷ್ಣನನ್ನು ಸಾರಥಿಯಾಗಿ ನೋಡುತ್ತೇವೆ. ಯಾವುದೇ ಫಲಾಪೇಕ್ಷೆ ಇಲ್ಲದೆ ಕೆಲಸವನ್ನು ಶ್ರದ್ಧೆಯಿಂದ ನಿರ್ವಹಿಸಿ ಬದುಕನ್ನು ಉತ್ತಮ ಪಡಿಸಿಕೊಳ್ಳಬೇಕು ಎಂಬ ಸಂದೇಶವನ್ನು ಶ್ರೀಕೃಷ್ಣ ಸಾರಿದ್ದಾರೆ ಎಂದರು.

ಜೀವನದಲ್ಲಿ ನಿಂತ ನೀರಾಗದೆ ಹರಿವ ನೀರಿನಂತೆ ಬದುಕನ್ನು ಮುನ್ನಡೆಸಬೇಕು. ಉತ್ತಮ ಬದುಕು ರೂಪಿಸಿಕೊಳ್ಳಲು ಮುಂದಾಗಬೇಕು. ಆ ನಿಟ್ಟಿನಲ್ಲಿ ಮಹಾಭಾರತದಲ್ಲಿ ಕೃಷ್ಣನ ಸಂದೇಶಗಳು ಧನಾತ್ಮಕ ಚಿಂತನೆಯನ್ನು ಒಳಗೊಂಡಿವೆ. ಶ್ರೀಕೃಷ್ಣ ಒಂದು ರೀತಿ ವಿಶಿಷ್ಟ ಚೇತನರಾಗಿದ್ದಾರೆ. ಅರಾಜಕತೆ, ಅಧರ್ಮ ಸಹಿಸುತ್ತಿರಲಿಲ್ಲ ಎಂದು ಹೇಳಿದರು.

ಪತ್ರಕರ್ತ ಚಿ.ನಾ.ಸೋಮೇಶ್ ಮಾತನಾಡಿ, ಕೃಷ್ಣ ಜಾತ್ಯಾತೀತ, ಮೇರು ವ್ಯಕ್ತಿತ್ವ ಹೊಂದಿದ್ದರು. ಈತನ ಬಾಲ್ಯವನ್ನು ಪ್ರತಿಯೊಬ್ಬರೂ ತಿಳಿದುಕೊಳ್ಳಬೇಕು. ದೇಶ–ವಿದೇಶಗಳಲ್ಲಿ ಕೃಷ್ಣನ ಅಧ್ಯಯನ ಮಾಡಿದ್ದಾರೆ. ಶ್ರೀಕೃಷ್ಣ ಜಗತ್ಪ್ರಸಿದ್ಧ ಮೇರು ವ್ಯಕ್ತಿತ್ವ ಹೊಂದಿದ್ದಾರೆ. ಅಸೂಯೆ ನಾಶ ಆಗಬೇಕು ಎಂದು ಶ್ರೀಕೃಷ್ಣರು ಬದುಕಿನುದ್ದಕ್ಕೂ ಸಾರಿದ್ದಾರೆ. ಭಗವಾನ್ ಕೃಷ್ಣನನ್ನು ಮಹಾಭಾರತದಲ್ಲಿ ಚತುರನಾಗಿ, ಮಹಾಜ್ಞಾನಿಯಾಗಿ ನೋಡುತ್ತೇವೆ. ಗೋಕುಲದಲ್ಲಿ ಆಟವಾಡಿಕೊಂಡು ಬೆಳೆದ ಕೃಷ್ಣನ ಸಂದೇಶಗಳನ್ನು ತಿಳಿದುಕೊಳ್ಳಬೇಕು ಎಂದರು.

> “ 525 ವರ್ಷಗಳ ಹಿಂದೆ ಜನ್ಮ ತಾಳಿದ ಶ್ರೀಕೃಷ್ಣನ ಆದರ್ಶ ಗುಣಗಳು ಸಾರ್ವಕಾಲಿಕವಾಗಿವೆ. ಆತನ ವ್ಯಕ್ತಿತ್ವದಲ್ಲಿ ಭಗವಾನ್ ಕೃಷ್ಣನನ್ನು ನೋಡಬಹುದಾಗಿದೆ. ಸದಾ ಬಡವರಿಗಾಗಿ ಚಿಂತನೆ ಮಾಡುತ್ತಿದ್ದ ಶ್ರೀಕೃಷ್ಣನ ಜೀವನ ಚರಿತ್ರೆ ತಿಳಿದುಕೊಳ್ಳಬೇಕು.
>
> –ಸುದೀರ್‌ಪ್ರಭು, ಇಸ್ಕಾನ್ ಸಂಸ್ಥೆ

ಸರ್ಕಾರಿ ಪ್ರಥಮ ದರ್ಜೆ ಮಹಿಳಾ ಕಾಲೇಜಿನ ಪ್ರಾಂಶುಪಾಲೆ ಪ್ರೊ.ಕೋರನ ಸರಸ್ವತಿ, ಕಂಚಿ ಕಾಮಾಕ್ಷಮ್ಮ ದೇವಾಲಯದ ಗೌರವಾಧ್ಯಕ್ಷ ಜಿ.ವಿ.ರವಿಕುಮಾರ್ ಮಾತನಾಡಿದರು. ಇಸ್ಕಾನ್ ಸಂಸ್ಥೆ ಚೈತನ್ಯ ದಾಸ್ ಪ್ರಭು, ಬಸವರಾಜ ಪ್ರಭು, ಕಂಚಿ ಕಾಮಾಕ್ಷಮ್ಮ ದೇವಾಲಯ ಸಮಿತಿಯ ಅಧ್ಯಕ್ಷ ಜಿ.ಬಿ. ಪವನ್, ಜಿ.ಜಿ.ಬಾಲಕೃಷ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಕುಮಾರ, ನಿವೃತ್ತ ಶಿಕ್ಷಕ ಬಿ.ಸಿ.ಶಂಕರಯ್ಯ, ಮಣಜೂರು ಮಂಜುನಾಥ್ ಇತರರಿದ್ದರು.

ಕಾನೂನು ಪಾಲಿಸಿ ಗಣೇಶೋತ್ಸವ ಆಚರಿಸಿ

ಗಣೇಶ ಪ್ರತಿಷ್ಠಾಪನಾ ಸಮಿತಿಗೆ ಶಾಸಕ ಎ.ಎಸ್.ಪೊನ್ನಣ್ಣ ಸೂಚನೆ

ವಿರಾಜಪೇಟೆ: ವಿರಾಜಪೇಟೆಯ ಐತಿಹಾಸಿಕ ಗೌರಿ–ಗಣೇಶೋತ್ಸವನ್ನು ಈ ಬಾರಿಯೂ ಅದ್ದೂರಿಯಾಗಿ ಆಚರಿಸಲಾಗುತ್ತಿದ್ದು, ಗಣೇಶ ಮೂರ್ತಿ ಪ್ರತಿಷ್ಠಾಪನಾ ಸಮಿತಿ ಶಿಸ್ತು ಮತ್ತು ಕಾನೂನು ಪಾಲಿಸುವ ಮೂಲಕ ಶಾಂತಿಯುತವಾಗಿ ಹಬ್ಬ ಆಚರಿಸಬೇಕು ಎಂದು ಶಾಸಕ ಎ.ಎಸ್.ಪೊನ್ನಣ್ಣ ಸೂಚಿಸಿದರು.



ವಿರಾಜಪೇಟೆ ಪುರಭವನದಲ್ಲಿ ನಡೆದ ಸಭೆಯಲ್ಲಿ ಶಾಸಕ ಪೊನ್ನಣ್ಣ ಮಾತನಾಡಿದರು.

ಪಟ್ಟಣದ ಪುರಭವನದಲ್ಲಿ ಸೋಮವಾರ ನಡೆದ ಪುರಸಭೆ, ಪೊಲೀಸ್, ಲೋಕೋಪಯೋಗಿ ಇಲಾಖೆ, ಸೆಸ್ಕ್ ಹಾಗೂ ಗೌರಿ–ಗಣೇಶ ಪ್ರತಿಷ್ಠಾಪನಾ ಸಮಿತಿ ಸದಸ್ಯರ ಸಭೆಯಲ್ಲಿ ಮಾತನಾಡಿದ ಅವರು, ಗೌರಿ–ಗಣೇಶೋತ್ಸವ ಆಚರಣೆಗೆ ಸರ್ಕಾರದಿಂದ ಅಧಿಕಾರಿಗಳ ಸಮಿತಿ ರಚಿಸಲಾಗಿದೆ. ಯಾವುದೇ ಸಮಸ್ಯೆಗಳಿದ್ದರೆ ಚರ್ಚಿಸಿ, ಬಗೆಹರಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ಬಾರಿ ಅತಿಯಾದ ಮಳೆಯಿಂದ ಪಟ್ಟಣದ ಎಲ್ಲಾ ರಸ್ತೆಗಳು ಗುಂಡಿಗಳಾಗಿವೆ. ಆದ್ದರಿಂದ ಪುರಸಭೆ ಮತ್ತು ಲೋಕೋಪಯೋಗಿ ಇಲಾಖೆಯಿಂದ ರಸ್ತೆಗಳ ಗುಂಡಿ ಮುಚ್ಚುವ ಕೆಲಸ ಆಗಬೇಕು. ಮಳೆ ಹಾನಿ ಪರಿಹಾರದ ಹಣ ಬಳಸಿ ಕೆಲಸ ಮಾಡಿ. ಗಣೇಶ ಮಂಟಪಗಳು ಸಾಗಲು ಸಾರ್ವಜನಿಕರಿಗೆ ಅನುಕೂಲವಾಗುವ ರೀತಿ ವ್ಯವಸ್ಥೆ ಕಲ್ಪಿಸಬೇಕು ಎಂದು ಸೂಚಿಸಿದರು.

ಡಿವೈಎಸ್‌ಪಿ ಮೋಹನ್ ಕುಮಾರ್ ಮಾತನಾಡಿ, ವಿರಾಜಪೇಟೆ ಉಪವಿಭಾಗದಲ್ಲಿ ಒಟ್ಟು 101 ಸಮಿತಿಗಳು ಗಣೇಶ ಮೂರ್ತಿ ಪ್ರತಿಷ್ಠಾಪಿಸಲಿವೆ. ಕೆಲ ಸಮಿತಿಗಳು 3, 5, 7 ದಿನ ಗಣೇಶ ಮೂರ್ತಿ ಪ್ರತಿಷ್ಠಾಪಿಸಲಿದ್ದು, ಪಟ್ಟಣ ವ್ಯಾಪ್ತಿ ಪ್ರತಿಷ್ಠಾಪಿಸಿದ 22 ಸಮಿತಿಯ ಮಂಟಪಗಳು ಸೆ.17ರಂದು ರಾತ್ರಿ ವಿಸರ್ಜನೋತ್ಸವ ಮೆರವಣಿಗೆ ನಡೆಯಲಿದೆ. ಆ ವೇಳೆ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ಅಪರಾಧ ನಿಗ್ರಹ ಪಡೆ ವಿಡಿಯೋ ಚಿತ್ರೀಕರಿಸುವ ಮೂಲಕ ಎಚ್ಚರ ವಹಿಸಲಿದೆ ಸುಪ್ರೀಂಕೋರ್ಟ್ ಆದೇಶವನ್ನು ಎಲ್ಲರೂ ಪಾಲಿಸಬೇಕು ಎಂದರು.

ಪುರಸಭೆ ಮುಖ್ಯಾಧಿಕಾರಿ ಚಂದ್ರಕುಮಾರ್ ಮಾತನಾಡಿ, ಪರಿಸರ ಕಾಪಾಡುವವ ನಿಟ್ಟಿನಲ್ಲಿ ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ಆದೇಶ ಪಾಲಿಸಬೇಕು. ಪರಿಸರ ಸ್ನೇಹಿ ಗಣೇಶ ಮೂರ್ತಿಗಳನ್ನು ಬಳಸಬೇಕು. ಡಿಜೆಗೆ ಕಡಿವಾಣ ಹಾಕುವ ಮೂಲಕ ಶಬ್ದ ಮಾಲಿನ್ಯ ತಡೆಯಬೇಕು. ಪ್ರಸಿದ್ಧ ಗಡಿಯಾರ ಕಂಬದ ಬಳಿ ಸಿಡಿಮದ್ದು, ಪಟಾಕಿ ಸಿಡಿಸಿದರೆ ಗಡಿಯಾರ ಕಂಬಕ್ಕೆ ಹಾನಿಯಾಗಲಿದೆ. ಆದ್ದರಿಂದ ಎಚ್ಚರ ವಹಿಸಬೇಕು ಎಂದು ತಿಳಿಸಿದರು.

ಸಭೆಯಲ್ಲಿ ತಹಸೀಲ್ದಾರ್ ರಾಮಚಂದ್ರ, ಗೌರಿ–ಗಣೇಶ ಉತ್ಸವ ಸಮಿತಿ ಅಧ್ಯಕ್ಷ ಕೆ.ಸಿ. ಶಭರೀಶ್, ವೃತ್ತ ನಿರೀಕ್ಷಕ ಶಿವರುದ್ರ, ಪುರಸಭೆ ಸದಸ್ಯರಾದ ಡಿ.ಪಿ.ರಾಜೇಶ್, ಸಿ.ಕೆ. ಪ್ರಥ್ವಿನಾಥ್, ದೇಚಮ್ಮ, ಸೆಸ್ಕ್ ಇಂಜಿನಿಯರ್ ಸುರೇಶ್, ಲೋಕೋಪಯೋಗಿ, ಪುರಸಭೆ ಅಧಿಕಾರಿಗಳು, ಸದಸ್ಯರು, ಗಣೇಶ ಪ್ರತಿಷ್ಠಾಪನಾ ಸಮಿತಿ ಸದಸ್ಯರು ಉಪಸ್ಥಿತರಿದ್ದರು.

ನಾಲ್ಕುನಾಡಿನಲ್ಲಿ ಇಂದು ಕೈಲ್ ಪೊಳ್ದ್ ಸಂಭ್ರಮ



ಕೊಡವರ ಸಂಪ್ರದಾಯಿಕ ಆಯುಧಗಳಾದ ಕೋವಿ, ಗೆಜ್ಜೆ ತಂಡ, ಕತ್ತಿ.

ನಾಪೋಕ್ಲು, ಆ.26–ಮಡಿಕೇರಿ ತಾಲೂಕಿನ ನಾಲ್ಕುನಾಡು ವ್ಯಾಪ್ತಿ ಮಂಗಳವಾರ (ಆ.27) ಕೈಲ್ ಮುಹೂರ್ತ (ಕೈಲ್ ಪೊಳ್ದ್) ಹಬ್ಬವನ್ನು ಭಕ್ತಿ ಹಾಗೂ ಸಂಭ್ರಮದಿಂದ ಆಚರಿಸಲಾಗುವುದು.

ಕೊಡಗಿನ ಹಬ್ಬಗಳಲ್ಲಿ ಧಾನ್ಯಲಕ್ಷ್ಮೀ ಬರಮಾಡಿಕೊಳ್ಳುವ ಹುತ್ತರಿ ಹಬ್ಬಕ್ಕೆ ಮೊದಲ ಪ್ರಾಮುಖ್ಯತೆ ಇದ್ದರೆ, ನಂತರ ಕೈಲ್ ಮುಹೂರ್ತ ಹಬ್ಬಕ್ಕಿದೆ. ಕೈಲ್ ಪೊಳ್ದ್ ಎಂದರೆ ಆಯುಧ ಪೂಜೆ ಎಂಬ ಅರ್ಥ. ಕೈಲ್ ಮುಹೂರ್ತವನ್ನು ಕೊಡಗಿನಲ್ಲಿ ವಿವಿಧ ದಿನ ಆಚರಿಸಲಾಗುತ್ತದೆ. ಚಿನ್ಯಾರ್ 2 ರಿಂದ 18ರ ವರೆಗೆ ನಾನಾ ಭಾಗಗಳಲ್ಲಿ ಹಬ್ಬವನ್ನು ಆಚರಿಸಿದರೆ, ನಾಪೋಕ್ಲುವಿನ ನಾಲ್ಕುನಾಡು ವ್ಯಾಪ್ತಿ ಆ.27ರಂದು ಆಚರಿಸಲಾಗುತ್ತಿದೆ. ಅದರಂತೆ ಚಿನ್ಯಾರ್ 18 ಅಂದರೆ ಸೆ.3ರಂದು ಕೊಡಗಿನಾದ್ಯಂತ ಹಬ್ಬ ನಡೆಯಲಿದೆ.

ವಿಶೇಷ ಖಾದ್ಯ: ಕಡಂಬಿಟ್ಟು ಹಾಗೂ ಹಂದಿ ಮಾಂಸದ ಊಟ ಕೈಲ್ ಮುಹೂರ್ತ ಹಬ್ಬದ ವಿಶೇಷ. ಊಟದ ನಂತರ ಎಲ್ಲರೂ ಊರಿನ ಪಕ್ಕದ ಮೈದಾನದಲ್ಲಿ ಸೇರುತ್ತಾರೆ. ಅಲ್ಲಿ ತೆಂಗಿನ ಕಾಯಿಗೆ ಗುಂಡು ಒಡೆದು ಹಬ್ಬ ಆಚರಿಸಲಾಗುತ್ತದೆ. ಮಕ್ಕಳು, ಹಿರಿಯರು ಸೇರಿದಂತೆ ಎಲ್ಲರಿಗೂ ಶೌರ್ಯ ಪ್ರದರ್ಶನದ ವಿವಿಧ ಸ್ಪರ್ಧೆಗಳನ್ನು ಏರ್ಪಡಿಸಲಾಗುತ್ತದೆ.

ಕ್ರೀಡಾ ಕೂಟ: ಕೈ ಮುಹೂರ್ತ ಪ್ರಯುಕ್ತ ನಾಪೋಕ್ಲು ಭಗವತಿ ಯುವಕ ಸಂಘದ ವತಿಯಿಂದ ಮಂಗಳವಾರ ನಾಪೋಕ್ಲು ಸರ್ಕಾರಿ ಮಾದರಿ ಪ್ರಾಥಮಿಕ ಶಾಲಾ ಮೈದಾನ, ಬೇತು ಗ್ರಾಮದ ಶ್ರೀಮಕ್ಕಿ ಶಾಸ್ತಾವು ಯುವಕ ಸಂಘದ ವತಿಯಿಂದ ಬೇತು ಸರ್ಕಾರಿ ಮಾದರಿ ಪ್ರಾಥಮಿಕ ಶಾಲೆ ಮೈದಾನ, ಬಲ್ಲಮಾವಟ್ಟಿ ಗ್ರಾಮದ ಅಪೊಲೋ ಯುವಕ ಸಂಘ ಮತ್ತು ಕಾವೇರಿ ಮಹಿಳಾ ಸಮಾಜದ ಸಂಯುಕ್ತಾಶ್ರಯದಲ್ಲಿ ಬಲ್ಲಮಾವಟ್ಟಿ ನೇತಾಜಿ ಪ್ರೌಢಶಾಲೆ ಮೈದಾನದಲ್ಲಿ ವಿವಿಧ ಕ್ರೀಡಾಕೂಟ ಆಯೋಜಿಸಲಾಗಿದೆ.

ಮೂರ್ನಾಡಿನ ಗೌಡ ಸಮಾಜದಲ್ಲಿ ಬಾಲಕೃಷ್ಣರ ಕಲರವ



ಮೂರ್ನಾಡಿನ ಗೌಡ ಸಮಾಜದಲ್ಲಿ ನಡೆದ ಶ್ರೀಕೃಷ್ಣ ಜನ್ಮಾಷ್ಟಮಿ ಛದ್ಮವೇಷ ಸ್ಪರ್ಧೆಯಲ್ಲಿ ಭಾಗವಹಿಸಿದ್ದ ಬಾಲಕೃಷ್ಣರು.

ಮಡಿಕೇರಿ, ಆ.26–ವಿಶ್ವ ಹಿಂದು ಪರಿಷತ್ ಮಡಿಕೇರಿ ಗ್ರಾಮಾಂತರ ಘಟಕದ ವತಿಯಿಂದ ಮೂರ್ನಾಡಿನಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಸಂಭ್ರಮದಿಂದ ಆಚರಿಸಲಾಯಿತು.

ಮೂರ್ನಾಡಿನ ಗೌಡ ಸಮಾಜದಲ್ಲಿ ನಡೆದ ಶ್ರೀಕೃಷ್ಣ ಜನ್ಮಾಷ್ಟಮಿ ಛದ್ಮವೇಷ ಸ್ಪರ್ಧೆಯಲ್ಲಿ 6 ವರ್ಷದೊಳಗಿನ 67 ಪುಟಾಣಿಗಳು ಬಾಲಕೃಷ್ಣರಾಗಿ ಮಿಂಚಿದರು. ಬಾಲಕೃಷ್ಣರ ಕಲರವ ಕಂಡು ಪ್ರೇಕ್ಷಕರು ಚಪ್ಪಾಳೆಯ ಸುರಿಮಳೆಗೈದರು.

ವಿಜೇತರು: ಎರಡೂವರೆಯಿಂದ ಮೂರೂವರೆ ವರ್ಷದೊಳಗಿನ ಮಕ್ಕಳ ಸ್ಪರ್ಧೆಯಲ್ಲಿ ಅವಿಶ್ ಬಿದ್ದಪ್ಪ ಪ್ರಥಮ, ಅನ್ವಿಕಾ ಕಾರ್ಯಪ್ಪ ದ್ವಿತೀಯ ಹಾಗೂ ಚಿನ್ವಿತಾ ನಂದೀಶ್ ತೃತೀಯ ಸ್ಥಾನ ಗಳಿಸಿದರು. ಮೂರೂವರೆಯಿಂದ ನಾಲ್ಕೂವರೆ ವರ್ಷದೊಳಗಿನ ಸ್ಪರ್ಧೆಯಲ್ಲಿ ಸಾನ್ವಿ ಪ್ರಥಮ, ಧನ್ವಿಕ್ ಪೂವಯ್ಯ ದ್ವಿತೀಯ, ಧ್ವನಿ ತೃತೀಯ ಸ್ಥಾನ ಹಾಗೂ ನಾಲ್ಕೂವರೆಯಿಂದ ಆರು ವರ್ಷದೊಳಗಿನ ಸ್ಪರ್ಧೆಯಲ್ಲಿ ಮನಸ್ವಿ ಪ್ರಥಮ, ಬಿ.ವೈ.ನೂತನ್ ದ್ವಿತೀಯ ಹಾಗೂ ದಿಯಾ ರೈ ತೃತೀಯ ಸ್ಥಾನ ಪಡೆದುಕೊಂಡರು.

ಕಾರ್ಯಕ್ರಮದಲ್ಲಿ ವಿಶ್ವ ಹಿಂದು ಪರಿಷತ್‌ನ ಭೌದಿಕ್ ಪ್ರಮುಖ್ ಚಿ.ನಾ. ಸೋಮೇಶ್, ಕೊಡಗು ಕಾರ್ಯಾಧ್ಯಕ್ಷ ಸುರೇಶ್ ಮುತ್ತಪ್ಪ, ಕೋಶಾಧ್ಯಕ್ಷ ಸಂಪತ್ ಕುಮಾರ್, ಪ್ರಸಾರ ಪ್ರಮುಖ್ ಶ್ಯಾನ್ ಸೋಮಣ್ಣ, ಕಾರ್ಯದರ್ಶಿ ರಮೇಶ್, ಸಹ ಕಾರ್ಯದರ್ಶಿಗಳಾದ ಯತೀಶ್, ಸಂತೋಷ್, ಮಾತೃಶಕ್ತಿ ಪ್ರಮುಖ್ ಉಮಾವತಿ, ವಿಶ್ವ ಹಿಂದು ಪರಿಷತ್ ಮೂರ್ನಾಡ್ ಘಟಕದ ಅಧ್ಯಕ್ಷ ಬಿ.ಸಿ.ಮೋಹನ್, ಎಬಿವಿಪಿ ನಿಕಟಪೂರ್ವ ಸಂಯೋಜಕ ಧನಂಜಯ್, ಜಿಲ್ಲಾ ಮಠಮಂದಿರ ಪ್ರಮುಖ್ ಮಹಾಬಲೇಶ್ವರ್ ಭಟ್, ಸೇವಾ ಪ್ರಮುಖ್ ಪ್ರಭು ಆನಂದ, ಭಜರಂಗ ದಳದ ಪ್ರವೀಣ್, ಮಾತೃಶಕ್ತಿ ತಾಲೂಕು ಪ್ರಮುಖ್ ಮಮತಾ ಕೊಂಪ್ಲಿ, ತಾಲೂಕು ಸೇವಾ ಪ್ರಮುಖ್ ಮಮತಾ, ಮೂರ್ನಾಡು ಘಟಕದ ಕಾರ್ಯದರ್ಶಿ ದಿನೇಶ್ ಪೆಗ್ಗೋಲಿ, ಜಿಲ್ಲಾ ಮಾತೃಶಕ್ತಿ ಸಹ ಸಂಯೋಜಕಿ ಪೂರ್ಣಿಮಾ ಸುರೇಶ್, ಉಪಾಧ್ಯಕ್ಷ ಸಜೀವ, ಶಿಕ್ಷಕರಾದ ಯಶಸ್ವಿನಿ ಮತ್ತಿತರರು ಉಪಸ್ಥಿತರಿದ್ದರು.

ನಗರಸಭೆಯಿಂದ ಪೌರಕಾರ್ಮಿಕರ ಕುಂದುಕೊರತೆ ಆಲಿಕೆ

ಚಾಮರಾಜನಗರ, ಆ.26–ಜಿಲ್ಲಾಡಳಿತ, ಜಿಲ್ಲಾ ನಗರಭಿವೃದ್ಧಿ ಕೋಶ ಹಾಗೂ ನಗರಸಭೆ ಸಹಯೋಗದಲ್ಲಿ ನಗರದ ಮಹರ್ಷಿ ವಾಲ್ಮೀಕಿ ಭವನದಲ್ಲಿ ಸೋಮವಾರ ಆಯೋಜಿಸಿದ್ದ ಕುಂದುಕೊರತೆ ಸಭೆ ಹಾಗೂ ಸಂವಾದದಲ್ಲಿ ನಗರಸಭೆ ಪೌರಾಯುಕ್ತ ಎಸ್.ವಿ.ರಾಮದಾಸ್ ಪೌರಕಾರ್ಮಿಕರ ಅಹವಾಲು ಆಲಿಸಿದರು.



ಚಾಮರಾನಗರದ ಮಹರ್ಷಿ ವಾಲ್ಮೀಕಿ ಭವನದಲ್ಲಿ ಆಯೋಜಿಸಿದ್ದ ಸಂವಾದದಲ್ಲಿ ಪೌರಕಾರ್ಮಿಕರು ಭಾಗವಹಿಸಿದ್ದರು.

ಇದೇ ವೇಳೆ ಎಸ್.ವಿ.ರಾಮದಾಸ್ ಮಾತನಾಡಿ, ಜಿಲ್ಲಾಧಿಕಾರಿ ಶಿಲ್ಪಾನಾಗ್ ನಿರ್ದೇಶನದ ಮೇರೆಗೆ ಪೌರಕಾರ್ಮಿಕರ ಸಮಸ್ಯೆ ಪರಿಹರಿಸಿ ಪುನರ್ವಸತಿ ಕಲ್ಪಿಸುವ ನಿಟ್ಟಿನಲ್ಲಿ ಕುಂದುಕೊರತೆ ಹಾಗೂ ಸಂವಾದ ಹಮ್ಮಿಕೊಳ್ಳಲಾಗಿದೆ. ನಿತ್ಯ ಬೆಳಗ್ಗೆಯಿಂದ ಸಂಜೆ ವರೆಗೂ ಸ್ವಚ್ಛತಾ ಕಾರ್ಯದಲ್ಲಿ ತೊಡಗಿಸಿಕೊಳ್ಳುವ ಪೌರಕಾರ್ಮಿಕರು ಶ್ರಮಜೀವಿಗಳಾಗಿದ್ದಾರೆ. ಪೌರಕಾರ್ಮಿಕರು ನಿತ್ಯ ಕಾಯಕದ ಜೊತೆಗೆ ತಮ್ಮ ಆರೋಗ್ಯದ ಬಗ್ಗೆ ಕಾಳಜಿ ವಹಿಸಬೇಕು. ಸಂವಾದ ಅಂಗವಾಗಿ ಆರೋಗ್ಯ ತಪಾಸಣಾ ಶಿಬಿರ ಏರ್ಪಡಿಸಲಾಗಿದೆ ಎಂದು ತಿಳಿಸಿದರು.

ಪೌರಕಾರ್ಮಿಕ ನಾಗರಾಜು ಮಾತನಾಡಿ, ನಗರಸಭೆ ವತಿಯಿಂದ ಕಾರ್ಮಿಕರಿಗೆ ನೇರ ವೇತನ, ಗುತ್ತಿಗೆ ಪೌರಕಾರ್ಮಿಕರಿಗೆ ಪ್ರತಿ ತಿಂಗಳು 5ನೇ ತಾರೀಖಿನೊಳಗೆ ವೇತನ ನೀಡಬೇಕು. ಸಂಕಷ್ಟ ಭತ್ಯೆಯನ್ನು ವೇತನದ ಜೊತೆಗೆ ಪ್ರತಿ ತಿಂಗಳು ಪಾವತಿಸಬೇಕು. ನಗರಸಭೆಯಲ್ಲಿ 120 ಪೌರಕಾರ್ಮಿಕರು ಕೆಲಸ ನಿರ್ವಹಿಸುತ್ತಿದ್ದು, ಸಮಾನ ಕೆಲಸಕ್ಕೆ ಸಮಾನ ವೇತನದಡಿ ಕಾಯಂಗೊಳಿಸಲು ಕ್ರಮ ವಹಿಸಬೇಕು. 29ನೇ ವಾರ್ಡ್‌ನ ಪೌರಕಾರ್ಮಿಕರ ಕಾಲೋನಿಗೆ ರಸ್ತೆ, ಕುಡಿಯುವ ನೀರು, ಒಳಚರಂಡಿ ಸೌಲಭ್ಯ ಒದಗಿಸಬೇಕು. ಗೃಹಭಾಗ್ಯ ಯೋಜನೆಯಡಿ 24 ಕಾಯಂ ಪೌರಕಾರ್ಮಿಕರಿಗೆ ಮನೆ ನಿರ್ಮಿಸಿಕೊಡಬೇಕು ಎಂದು ಮನವಿ ಮಾಡಿದರು.

ಪೌರಕಾರ್ಮಿಕರ ಕುಂದುಕೊರತೆ ಆಲಿಸಿದ ಪೌರಾಯುಕ್ತ ಎಸ್.ವಿ.ರಾಮದಾಸ್, ತಾಂತ್ರಿಕ ಕಾರಣಗಳನ್ನು ಸರಿಪಡಿಸಿ ಸಕಾಲದಲ್ಲಿ ವೇತನ ಪಾವತಿಸಲಾಗುವುದು. ಮುಂದಿನ ದಿನಗಳಲ್ಲಿ ಇದು ಮರುಕಳಿಸದಂತೆ ನೋಡಿಕೊಳ್ಳಲಾಗುವುದು. ಸಮಾನ ಕೆಲಸಕ್ಕೆ ಸಮಾನ ವೇತನ ಬೇಡಿಕೆ ಸರ್ಕಾರದ ಬಳಿಯಿದೆ. 2024ರ ಮೇ ಮಾಹೆವರೆಗೆ ಸಂಕಷ್ಟ ಭತ್ಯೆ ನೀಡಲಾಗಿದ್ದು, ಸರ್ಕಾರದಿಂದ ಹಣ ಬಿಡುಗಡೆ ಆಗಬೇಕು. ಎಸ್‌ಎಫ್‌ಸಿ ಅನುದಾನ ಬಿಡುಗಡೆ ಬಳಿಕ ವೇತನದ ನೀಡಲಾಗುವುದು. 35 ಪೌರಕಾರ್ಮಿಕರಿಗೆ ಮನೆ ನಿರ್ಮಿಸಲಾಗಿದೆ. ಇನ್ನು 24 ಕಾರ್ಮಿಕರಿಗೆ ಮನೆ ನಿರ್ಮಾಣಕ್ಕೆ ಮಂಜೂರಾಗಿದೆ. ಪೌರಕಾರ್ಮಿಕರ ಇತರೆ ಬೇಡಿಕೆ ಈಡೇರಿಸಲು ಪ್ರಯತ್ನಿಸಲಾಗುವುದು ಎಂದು ತಿಳಿಸಿದರು.

ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕ ರಾಜು, ಹಿರಿಯ ವೈದ್ಯಾಧಿಕಾರಿ ಡಾ.ಮಹದೇವ್, ವೈದ್ಯರಾದ ಡಾ.ರಂಜಿತಾ, ಡಾ.ರಿಯಾ ದಿಶಾನಿ ರೇ, ಶೇಖರ್, ನಗರಸಭೆ ಲೆಕ್ಕ ಅಧೀಕ್ಷಕ ರುದ್ರಮುನಿಸ್ವಾಮಿ, ಯೋಜನಾಧಿಕಾರಿ ವೆಂಕಟನಾಯಕ್ ಕಾರ್ಯಕ್ರಮದಲ್ಲಿ ಹಾಜರಿದ್ದರು.

ಇದೇ ವೇಳೆ ಪೌರಕಾರ್ಮಿಕರ ಪೌರಕಾರ್ಮಿಕರಿಗೆ ಆರೋಗ್ಯ ಶಿಬಿರ ಏರ್ಪಡಿಸಲಾಗಿತ್ತು. ಶಿಬಿರದಲ್ಲಿ ಆರೋಗ್ಯ ತಪಾಸಣೆ ನಡೆಸಿ, ಔಷಧ ವಿತರಿಸಲಾಯಿತು.

ಶ್ರೀಕೃಷ್ಣನ ಸಂದೇಶ ಇಂದಿಗೂ ಪ್ರಸ್ತುತ

ಕೃಷ್ಣ ಜನ್ಮಾಷ್ಟಮಿಯಲ್ಲಿ ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಮತ

ಚಾಮರಾಜನಗರ, ಆ.26–ಮನುಷ್ಯನ ಅಹಂ ಹಾಗೂ ಕ್ರೂರತ್ವ ತೊಡೆದುಹಾಕಲು ಶ್ರೀಕೃಷ್ಣನ ಮಾನವಪ್ರೇಮ ಸಂದೇಶಗಳು ಇಂದಿಗೂ ಪ್ರಸ್ತುತವಾಗಿವೆ ಎಂದು ಶಾಸಕ ಸಿ.ಪುಟ್ಟರಂಗಶೆಟ್ಟಿ ಅಭಿಪ್ರಾಯಪಟ್ಟರು.



ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮದಲ್ಲಿ ಕೃಷ್ಣನ ಭಾವಚಿತ್ರಕ್ಕೆ ಶಾಸಕ ಸಿ.ಪುಟ್ಟರಂಗಶೆಟ್ಟಿ ಪುಷ್ಪಾರ್ಚನೆ ನೆರವೇರಿಸಿದರು.

ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಸೋಮವಾರ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಆಯೋಜಿಸಿದ್ದ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಕೃಷ್ಣನ ಬಾಲಲೀಲೆಗಳು ಇಂದಿಗೂ ಜನಜನಿತವಾಗಿವೆ. ಮಹಾಭಾರತದ ಮೂಲಕ ಶ್ರೇಷ್ಠ ಪಾತ್ರಗಳನ್ನು ಪರಿಚಯಿಸಿದ ಕೃಷ್ಣನ ಮಾನವ ಕಲ್ಯಾಣ ಸಂದೇಶಗಳನ್ನು ನಾವೆಲ್ಲರೂ ಪಾಲಿಸಬೇಕು ತಿಳಿಸಿದರು.

ಶ್ರೀಕೃಷ್ಣ ಪ್ರತಿಷ್ಠಾನ ಅಧ್ಯಕ್ಷ ಸುರೇಶ್ ಋಗ್ವೇದಿ ಮಾತನಾಡಿ, ಕೃಷ್ಣ ಎಂದರೆ ಪ್ರೇಮ, ಆನಂದ, ಆಕರ್ಷಣೆ ಎಂಬುದಾಗಿದೆ. ಇಡೀ ವಿಶ್ವಕ್ಕೆ ಪುಣ್ಯಭೂಮಿ, ಕರ್ಮ ಭೂಮಿಯಾಗಿರುವ ಭಾರತದಲ್ಲಿ ಅನೇಕ ಮಹಾನ್ ಪುರುಷರು, ಋಷಿಗಳು, ಸಾಧುಸಂತರು, ದಾರ್ಶನಿಕರು, ತತ್ವಜ್ಞಾನಿಗಳು, ಆಚಾರ್ಯರು, ಚಿಂತಕರು ಕಾಲಕಾಲಕ್ಕೆ ತಮ್ಮದೆ ಮೌಲ್ಯಯುತ ಸಂದೇಶ ಮೂಲಕ ಮಾನವಕುಲದ ಕಲ್ಯಾಣಕ್ಕೆ ಅಪಾರ ಕೊಡುಗೆ ನೀಡಿದ್ದಾರೆ. ಈ ಪೈಕಿ ಶ್ರೀಕೃಷ್ಣನ ಅವತಾರವು ಒಂದಾಗಿದೆ ಎಂದರು.

ಮಹಾಭಾರತದ ಕೇಂದ್ರಬಿಂದು ಶ್ರೀಕೃಷ್ಣನ ರಾಜತಾಂತ್ರಿಕ ನೀತಿ ಚಿಂತನೆಯೇ ವಿಶೇಷ, ವಿಶಿಷ್ಟ ಹಾಗೂ ವಿಭಿನ್ನವಾಗಿದೆ. ಮನುಷ್ಯ ದಾರಿ ತಪ್ಪಿದಾಗ, ಸಮುದಾಯದಲ್ಲಿ ಅಶಾಂತಿ ಉಂಟಾದ ಕಾಲಘಟ್ಟದಲ್ಲಿ ಸಮಾಜ ಪರಿವರ್ತಕರಾಗಿ ಬಂದ ಕೃಷ್ಣ ಜಗತ್ತಿನ ಶ್ರೇಷ್ಠ ಮನಶಾಸ್ತ್ರಜ್ಞ ಎಂದರೆ ತಪ್ಪಾಗಲಾರದು ಎಂದು ತಿಳಿಸಿದರು.

ಚಾಮರಾಜನಗರ–ರಾಮಸಮುದ್ರ ನಗರಾಭಿವೃದ್ಧಿ ಪ್ರಾಧಿಕಾರ ಅಧ್ಯಕ್ಷ ಮಹಮ್ಮದ್ ಅಸ್ಗರ್ ಹಾಗೂ ನಗರಸಭೆ ಸದಸ್ಯೆ ಮಮತಾ ಮಾತನಾಡಿದರು. ಗಾಯಕ ಜೆ.ಬಿ.ಮಹೇಶ್ ಶ್ರೀಕೃಷ್ಣನ ಗೀತೆ ಪ್ರಸ್ತುತಪಡಿಸಿದರು. ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ಎನ್. ಉದಯ್ ಕುಮಾರ್, ಮುಖಂಡ ಬಾಲ ಸುಬ್ರಮಣ್ಯಂ ಇತರರು ಕಾರ್ಯಕ್ರಮದಲ್ಲಿ ಇದ್ದರು.

ಜೂಜಾಟ: 20 ಮಂದಿ ಬಂಧನ

ಚಾಮರಾಜನಗರ: ವಡ್ಡಗೆರೆ ಗ್ರಾಮದ ಸಾರ್ವಜನಿಕ ಸ್ಥಳ ಹಾಗೂ ತಿಮ್ಮರಾಜಿಪುರ–ಜಕ್ಕಳ್ಳಿ ರಸ್ತೆಯ ಜಮೀನಿನಲ್ಲಿ ಜೂಜಾಡುತ್ತಿದ್ದ 20 ಜನರನ್ನು ಪೊಲೀಸರು ಬಂಧಿಸಿ, ಪಣಕ್ಕಿಟ್ಟಿದ್ದ 28,820 ರೂ ನಗದನ್ನು ವಶಪಡಿಸಿಕೊಂಡಿದ್ದಾರೆ.

ಗುಂಡ್ಲುಪೇಟೆ ತಾಲೂಕಿನ ವಡ್ಡಗೆರೆ ಗ್ರಾಮದ ಸಾರ್ವಜನಿಕ ಸ್ಥಳದಲ್ಲಿ ಆ.24ರಂದು ಸಂಜೆ 5 ಗಂಟೆಯಲ್ಲಿ ಜೂಜಾಡುತ್ತಿದ್ದ 7 ಮಂದಿಯನ್ನು ಬಂಧಿಸಿ, 6670 ರೂ. ನಗದು ವಶಪಡಿಸಿಕೊಳ್ಳಲಾಗಿದೆ.

ಕೊಳ್ಳೇಗಾಲ ಗ್ರಾಮಾಂತರ ಪೊಲೀಸ್ ಠಾಣೆ ವ್ಯಾಪ್ತಿಯ ತಿಮ್ಮರಾಜಿಪುರ–ಜಕ್ಕಳ್ಳಿ ರಸ್ತೆಯ ಜಮೀನಿನ ರಸ್ತೆಯಲ್ಲಿ ಆ.25ರಂದು ಸಂಜೆ 6.15ರಲ್ಲಿ ಜೂಜಾಡುತ್ತಿದ್ದ 13 ಜನರನ್ನು ಪೊಲೀಸರು ಬಂಧಿಸಿ, ಪಣಕ್ಕಿಟ್ಟಿದ್ದ 22,150 ರೂ.ಗಳನ್ನು ವಶಪಡಿಸಿಕೊಂಡಿದ್ದಾರೆ. ಈ ಸಂಬಂಧ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ.

ಅನುಮತಿಗೆ ಏಕಗವಾಕ್ಷಿ ಕೇಂದ್ರ ಸ್ಥಾಪನೆ

ಗುಂಡ್ಲುಪೇಟೆ: ತಾಲೂಕಿನಲ್ಲಿ ಗಣೇಶ ಮೂರ್ತಿಗಳ ಪ್ರತಿಷ್ಠಾಪನೆಗೆ ಅನುಮತಿ ನೀಡಲು ಏಕಗವಾಕ್ಷಿ ಕೇಂದ್ರವನ್ನು ತಾಲೂಕು ಕಚೇರಿಯಲ್ಲಿ ತೆರೆಯಲಾಗಿದೆ.

ಆ.28 ರಿಂದ ಸೆ.4ರ ವರೆಗೆ ಬೆಳಗ್ಗೆ 10.30 ರಿಂದ ಸಂಜೆ 5.30ರವರೆಗೆ ಅರ್ಜಿ ಸಲ್ಲಿಸಿ, ಅನುಮತಿ ಪತ್ರವನ್ನು ಪಡೆದು ಕೊಳ್ಳುವಂತೆ ತಹಸೀಲ್ದಾರ್ ರಮೇಶ್ ಬಾಬು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಇಂದು ನಗರದಲ್ಲಿ ಹಡಪದ ಅಪ್ಪಣ ಜಯಂತಿ

ಚಾಮರಾಜನಗರ, ಆ.26– ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಶಿವಶರಣ ಶ್ರೀ ಹಡಪದ ಅಪ್ಪಣ ಜಯಂತಿಯನ್ನು ಆ.27ರಂದು ನಗರದಲ್ಲಿ ಆಯೋಜಿಸಲಾಗಿದೆ.

ಬೆಳಗ್ಗೆ 10 ಗಂಟೆಗೆ ನಗರದ ಪ್ರವಾಸಿ ಮಂದಿರದ ಆವರಣದಲ್ಲಿ ಮೆರವಣಿಗೆಗೆ ಚಾಲನೆ ನೀಡಲಾಗುವುದು. ಮಧ್ಯಾಹ್ನ 12 ಗಂಟೆಗೆ ವರನಟ ಡಾ.ರಾಜ್‌ಕುಮಾರ್ ಜಿಲ್ಲಾ ರಂಗಮಂದಿರದಲ್ಲಿ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಬಿಜಾಪುರ ಜಿಲ್ಲೆಯ ಮುದ್ದೇಬಿಹಾಳ ತಾಲೂಕಿನ ತಂಗಡಗಿಯ ಹಡಪದ ಅಪ್ಪಣ ದೇವರ ಮಹಾಸಂಸ್ಥಾನ ಮಠದ ಶ್ರೀ ಅನ್ನದಾನಿ ಭಾರತಿ ಅಪ್ಪಣ್ಣಸ್ವಾಮೀಜಿ ಸಾನಿಧ್ಯ ವಹಿಸಲಿದ್ದಾರೆ.

ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ಶಾಸಕ ಸಿ.ಪುಟ್ಟರಂಗಶೆಟ್ಟಿ ಅಧ್ಯಕ್ಷತೆ ವಹಿಸಲಿದ್ದಾರೆ. ಸಂಸದ ಸುನೀಲ್ ಬೋಸ್, ಶಾಸಕರಾದ ಎ.ಆರ್. ಕೃಷ್ಣಮೂರ್ತಿ, ಹೆಚ್.ಎಂ.ಗಣೇಶ್‌ಪ್ರಸಾದ್, ಎಂ.ಆರ್.ಮಂಜುನಾಥ್, ರಾಜ್ಯ ಉಗ್ರಾಣ ನಿಗಮದ ಅಧ್ಯಕ್ಷ ಎಸ್.ಜಯಣ್ಣ, ಕಾಡಾ ಅಧ್ಯಕ್ಷ ಪಿ.ಮರಿಸ್ವಾಮಿ, ಚುಡಾ ಅಧ್ಯಕ್ಷ ಮಹಮ್ಮದ್ ಅಸ್ಗರ್ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಶನೇಶ್ವರಸ್ವಾಮಿಗೆ ಶ್ರಾವಣ ವಿಶೇಷ ಪೂಜೆ



ಚಾಮರಾಜನಗರ, ಆ.26– ನಗರದ ನೃಪತುಂಗ ವೃತ್ತದ ಶ್ರೀ ಶನೇಶ್ವರಸ್ವಾಮಿ ದೇವಸ್ಥಾನದಲ್ಲಿ ಮೂರನೇ ಶ್ರಾವಣ ಶನಿವಾರ ಪ್ರಯುಕ್ತ ವಿಶೇಷ ಪೂಜೆ, ಹರಿಕಥೆ ಹಾಗೂ ಸಹಪಂಕ್ತಿ ಭೋಜನ ನಡೆಯಿತು.

ನಗರದ ಶನೇಶ್ವರಸ್ವಾಮಿ ಭಕ್ತ ಮಂಡಳಿ ವತಿಯಿಂದ ಪ್ರತಿ ವರ್ಷದಂತೆ ಈ ಬಾರಿಯೂ ಶನೇಶ್ವರ ಪೂಜಾ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಹೂವಿನ ಅಲಂಕಾರದೊಂದಿಗೆ ವಿಶೇಷ ಪೂಜೆ, ಅಭಿಷೇಕ ನೆರವೇರಿಸಲಾಯಿತು. ಬಳಿಕ ಜಾನಪದ ರತ್ನ ಮಂಡ್ಯ ಶಿವಾರ್ ಉಮೇಶ್ ತಂಡದಿಂದ ಶನೇಶ್ವರ ಹರಿಕಥೆ ನಡೆಯಿತು. ಇದೇ ವೇಳೆ ಸಹಪಂಕ್ತಿ ಭೋಜನ ಏರ್ಪಡಿಸಲಾಗಿತ್ತು.

ಕೊಳ್ಳೇಗಾಲದ ನಿಸರ್ಗ ವಿದ್ಯಾನಿಕೇತನದಲ್ಲಿ ಕೃಷ್ಣ ಜನ್ಮಾಷ್ಟಮಿ



ಕೊಳ್ಳೇಗಾಲ ನಿಸರ್ಗ ವಿದ್ಯಾನಿಕೇತನ ಶಾಲಾ ಮಕ್ಕಳು ರಾಧೆ ಮತ್ತು ಕೃಷ್ಣ ವೇಷ ಧರಿ ಸಂಭ್ರಮಿಸಿದರು.

ಕೊಳ್ಳೇಗಾಲ, ಆ.26– ಪಟ್ಟಣದ ನಿಸರ್ಗ ವಿದ್ಯಾನಿಕೇತನ ಶಾಲೆಯಲ್ಲಿ ಸೋಮವಾರ ಸಂಭ್ರಮದಿಂದ ಕೃಷ್ಣ ಜನ್ಮಾಷ್ಟಮಿ ನಡೆಸಲಾಯಿತು.

ಪ್ರಿಕೆಜಿ, ಎಲ್‌ಕೆಜಿ ಮತ್ತು ಯುಕೆಜಿ ಪುಟಾಣಿಗಳು ರಾಧೆ ಮತ್ತು ಕೃಷ್ಣ ವೇಷಧರಿಸುವ ಮೂಲಕ ಕೃಷ್ಣ ಜನ್ಮಾಷ್ಟಮಿ ಸಂಭ್ರಮಕ್ಕೆ ಸಾಕ್ಷಿಯಾದರು. ಕೃಷ್ಣ–ರಾಧೆ ವೇಷ ತೊಟ್ಟ ಮಕ್ಕಳನ್ನು ಕಂಡು ಪೋಷಕರು ಸಂತಸಪಟ್ಟರು. ಇದೇ ವೇಳೆ ಮಕ್ಕಳು ಸಾಮೂಹಿಕವಾಗಿ ಹರೇ ಹರೇ ಕೃಷ್ಣ... ಕೃಷ್ಣ... ಜೈ ಜೈ ಕೃಷ್ಣ, ರಾಧೆ ಕೃಷ್ಣ ಎಂದು ಶ್ಲೋಕಗಳನ್ನು ಹೇಳಿದರು. ಇದಕ್ಕೆ ಶಿಕ್ಷಕರು ಮಕ್ಕಳಿಗೆ ಸಾಥ್ ನೀಡಿದರು.

ಕಾರ್ಯಕ್ರಮದಲ್ಲಿ ಶಾಲೆಯ ಕಾರ್ಯದರ್ಶಿ ಡಾ.ದತ್ತೇಶ್, ಮುಖ್ಯ ಶಿಕ್ಷಕ ಶಂಕರ್, ಸಹ ಶಿಕ್ಷಕರಾದ ಗಿರಿಜಾ, ಲಕ್ಷ್ಮಿ, ಅನಿತಾ, ಶಾಂತಿಪ್ರಿಯಾ, ರಮ್ಯ, ಸುಮಾ ಇನ್ನಿತರರಿದ್ದರು.

ವಿವಿಧೆಡೆ ಅಕ್ರಮ ಮದ್ಯ ಮಾರಾಟ: ಪ್ರಕರಣ ದಾಖಲು

ಚಾಮರಾಜನಗರ, ಆ.26–ಜಿಲ್ಲೆಯ ವಿವಿಧೆಡೆ ಅಕ್ರಮ ಮದ್ಯ ಮಾರಾಟ ಹಾಗೂ ಸಾಗಿಸುತ್ತಿದ್ದ ಪ್ರಕರಣಗಳನ್ನು ಪೊಲೀಸರು ಪತ್ತೆ ಹಚ್ಚಿ, ಮದ್ಯ ವಶಪಡಿಸಿಕೊಂಡಿದ್ದಾರೆ. ಆ.25ರಂದು ಸಂಜೆ 4.15ರಲ್ಲಿ ರಾಮಾಪುರ ಪಿ.ಜಿ.ದೊಡ್ಡಿ ಗ್ರಾಮದ ಬಳಿ ಮದ್ಯದ ಪೌಚ್‌ಗಳನ್ನು ಹೆಚ್ಚಿನ ಬೆಲೆಗೆ ಮಾರುತ್ತಿದ್ದ ಮಹಿಳೆಯಿಂದ 719 ರೂ. ಮೌಲ್ಯದ ಮದ್ಯ ವಶಪಡಿಸಿಕೊಳ್ಳಲಾಗಿದೆ.

ಅದೇ ದಿನ ಮಧ್ಯಾಹ್ನ 3.40ರಲ್ಲಿ ಯಳಂದೂರು ತಾಲೂಕಿನ ಮಸಣಾಪುರ ಗ್ರಾಮದಲ್ಲಿ ಅಕ್ರಮವಾಗಿ ಮಾರುತ್ತಿದ್ದ 719 ರೂ. ಮೌಲ್ಯದ ಮದ್ಯ ವಶಪಡಿಸಿಕೊಳ್ಳಲಾಗಿದೆ. ರಾತ್ರಿ 7 ಗಂಟೆಯಲ್ಲಿ ಹನೂರಿನ ಮನೆಯೊಂದರ ಮುಂಭಾಗ ಸಾಗಿಸುತ್ತಿದ್ದ 10 ಮದ್ಯದ ಪೌಚ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ಗುಂಡ್ಲುಪೇಟೆ ತಾಲೂಕಿನ ಹಿರಿಕಾಟಿ ಗೇಟ್ ಬಸ್ ನಿಲ್ದಾಣದ ಬಳಿ 760 ರೂ. ಮೌಲ್ಯ ಹಾಗೂ ಕುದೇರು ಪೊಲೀಸ್ ಠಾಣೆ ವ್ಯಾಪ್ತಿಯ ಗಣಗನೂರು ಗ್ರಾಮದ ಪ್ರಾವಿಷನ್ ಸ್ಟೋರ್ ಬಳಿ ಮಾರುತ್ತಿದ್ದ 4116 ರೂ. ಮೌಲ್ಯದ ಮದ್ಯ ವಶಪಡಿಸಿಕೊಳ್ಳಲಾಗಿದೆ.

ಈ ಸಂಬಂಧ ಎನ್.ಸ್ವಾಮಿ ಹಾಗೂ ತಿ.ನರಸೀಪುರದ ರಾಜು ಬಾರ್ ಮತ್ತು ವೈನ್ಸ್‌ನ ಮಾಲೀಕರ ವಿರುದ್ಧ ಕುದೇರು ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂದನೇ ಪುಟದಿಂದ

ನಾಲ್ವರು ಖದೀಮರ ಬಂಧನ

ಬಳಿ ಸೆರೆ ಹಿಡಿಯಲಾಗಿತ್ತು. ಬಂಧಿತರ ಪೈಕಿ ಮೂವರು ಆರೋಪಿಗಳು ಮೈಸೂರು ನಗರ ಮತ್ತು ಜಿಲ್ಲೆಯಾದ್ಯಂತ 11 ಪ್ರಕರಣಗಳಲ್ಲಿ ಭಾಗಿಯಾಗಿರುವುದು ವಿಚಾರಣೆ ವೇಳೆ ತಿಳಿದು ಬಂದಿತು. ಅವರಿಂದ 551 ಗ್ರಾಂ ಚಿನ್ನಾಭರಣ, 1.4 ಕೆಜಿ ಬೆಳ್ಳಿ ಪದಾರ್ಥಗಳು, 2 ಕಾರು, 3 ದ್ವಿಚಕ್ರ ವಾಹನ, 1 ಪಿಸ್ತೂಲ್, ಜೀವಂತ ಗುಂಡುಗಳು, 2 ಮೊಬೈಲ್ ಫೋನ್‌ಗಳು, ಕೃತ್ಯಕ್ಕೆ ಬಳಸುತ್ತಿದ್ದ ಕಬ್ಬಿಣದ ರಾಡು, ಸ್ಕ್ರೂ ಡ್ರೈವರ್ ಹಾಗೂ 2 ಜೊತೆ ಹ್ಯಾಂಡ್ ಗ್ಲೌಸ್‌ಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ.

ನಾಲ್ವರು ಆರೋಪಿಗಳ ಬಂಧನದಿಂದ ಮೈಸೂರು ನಗರದ 5, ಜಿಲ್ಲೆಯ 1, ಮಂಡ್ಯ ಜಿಲ್ಲೆಯ 1 ಸೇರಿ ಒಟ್ಟು 7 ಮನೆ ಕಳವು, ಮೈಸೂರು ನಗರದ 1, ಮಂಡ್ಯ ಜಿಲ್ಲೆಯ 1 ಸುಲಿಗೆ ಹಾಗೂ ಮೈಸೂರು ಜಿಲ್ಲೆಯ 1, ಬೆಂಗಳೂರು ಜಿಲ್ಲೆಯ 1 ವಾಹನ ಕಳವು ಪ್ರಕರಣಗಳು ಪತ್ತೆಯಾದಂತಾಗಿದೆ. ಮೂವರು ಆರೋಪಿಗಳ ಪೈಕಿ ಕರ್ನಾಟಕ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಒಬ್ಬನ ವಿರುದ್ಧ 3 ಸ್ವತ್ತು ಕಳವು ಪ್ರಕರಣ, ಮತ್ತೋರ್ವನ ವಿರುದ್ಧ 36 ಕಳವು ಪ್ರಕರಣ, ಇನ್ನೊಬ್ಬನ ವಿರುದ್ಧ 17 ಕಳವು ಪ್ರಕರಣಗಳು ದಾಖಲಾಗಿರುವುದು ಕಂಡುಬಂದಿದೆ.

ಉಳಿದ ಓರ್ವ ಗಾಂಜಾ ಪ್ರಕರಣದಲ್ಲಿ ಭಾಗಿಯಾಗಿದ್ದು, ಆತನಿಂದ ಮೇಟಗಳ್ಳಿ ಠಾಣೆ ಪೊಲೀಸರು, 4.66 ಕೆಜಿ ಗಾಂಜಾ, 1 ಪಿಸ್ತೂಲ್ ಹಾಗೂ 1 ಕಾರನ್ನು ವಶಪಡಿಸಿಕೊಂಡಿದ್ದಾರೆ. 2024ರ ಏಪ್ರಿಲ್ 27ರಂದು ಜಾಮೀನಿನ ಮೇಲೆ ಬಿಡುಗಡೆಯಾದ ನಂತರವೂ ಆರೋಪಿಗಳು 11 ಪ್ರಕರಣದಲ್ಲಿ ಭಾಗಿಯಾಗಿದ್ದಾರೆ.

ಮೂವರು ಮೈಸೂರಿನವರಾಗಿದ್ದು, ಓರ್ವ ಶಿವಮೊಗ್ಗದವನು ಎಂದು ತಿಳಿದು ಬಂದಿದೆ. ಪಿಸ್ತೂಲ್ ಮತ್ತು ಗಾಂಜಾ ಮಾರಿದ ವ್ಯಕ್ತಿಗಳನ್ನೂ ಬಂಧಿಸಬೇಕಾಗಿರುವುದರಿಂದ ಹೆಚ್ಚಿನ ವಿಚಾರಣೆಗಾಗಿ ಎಲ್ಲಾ ನಾಲ್ವರು ಆರೋಪಿಗಳನ್ನೂ ಪೊಲೀಸ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಡಿಸಿಪಿಗಳಾದ ಎಂ. ಮುತ್ತುರಾಜು, ಎಸ್. ಜಾಹ್ನವಿ ಮಾರ್ಗದರ್ಶನದಂತೆ ಸಿಸಿಬಿ ಎಸಿಪಿ ಎಸ್.ಎನ್. ಸಂದೇಶ್ ಕುಮಾರ್ ನೇತೃತ್ವದಲ್ಲಿ ನಡೆದ ಪತ್ತೆ ಕಾರ್ಯಾಚರಣೆಯಲ್ಲಿ ಸಿಸಿಬಿ ಇನ್ಸ್‌ಪೆಕ್ಟರ್ ಎಂ. ಮೋಹನ್‌ಕುಮಾರ್, ಸಬ್ ಇನ್ಸ್‌ಪೆಕ್ಟರ್ ಮಾರುತಿ ಅಂತರಗಟ್ಟಿ, ಎಎಸ್‌ಐಗಳಾದ ಅಜ್ಗರ್ ಖಾನ್, ಎಂ.ಆರ್. ಗಣೇಶ್, ರಾಮೇಗೌಡ, ಸಿಬ್ಬಂದಿಗಳಾದ ಪ್ರಕಾಶ್, ರಾಮಸ್ವಾಮಿ, ಜಯರಾಂ, ಉಮಾ ಮಹೇಶ್, ಸುರೇಶ್, ಮಹೇಶ್, ನರಸಿಂಹರಾಜು, ರವಿ, ಗೋವಿಂದ, ಶಿವಣ್ಣ, ಕೆ. ಮಹೇಶ್, ಸಿ.ಎನ್. ರವಿ, ಮಮತಾ ಪತ್ತೆ ಕಾರ್ಯದಲ್ಲಿ ಪಾಲ್ಗೊಂಡಿದ್ದರು.

ಮೈಸೂರಲ್ಲಿ ಈ ವರ್ಷ 61 ಸೈಬರ್ ಪ್ರಕರಣಗಳಲ್ಲಿ 32 ಕೋಟಿ ವರ್ಗಾವಣೆ

ಮೈಸೂರು, ಆ. 26(ಆರ್‌ಕೆ)–



ಮೈಸೂರು ನಗರದಲ್ಲಿ ಈ ವರ್ಷ 61 ಸೈಬರ್ ಪ್ರಕರಣಗಳು ದಾಖಲಾಗಿದ್ದು, 32 ಕೋಟಿ ರೂ. ಹಣವನ್ನು ಬೇರೆಯವರಿಗೆ ವರ್ಗಾವಣೆ ಮಾಡಲಾಗಿದೆ ಎಂದು ನಗರ ಪೊಲೀಸ್ ಆಯುಕ್ತರಾದ ಸೀಮಾ ಲಾಟ್ಕರ್ ತಿಳಿಸಿದ್ದಾರೆ.

ಈ ಹಿಂದೆ ಸೈಬರ್ ಖದೀಮರು ಸಾರ್ವಜನಿಕರ ಬ್ಯಾಂಕ್ ಖಾತೆ ಮಾಹಿತಿ, ಓಟಿಪಿ ಪಡೆದು ಹಣಕ್ಕೆ ಕನ್ನ ಹಾಕುತ್ತಿದ್ದರು. ಈಗ ಅವರ ತಂತ್ರಗಾರಿಕೆ ಬದಲಾಗಿದ್ದು, ಷೇರು ಮಾರುಕಟ್ಟೆ ಮೇಲೆ ಹಣ ಹೂಡಿಕೆ ಮಾಡಿದರೆ ದುಪ್ಪಟ್ಟು ಹಣ ವಾಪಸ್ ಬರುತ್ತದೆ ಎಂದು ಆಮಿಷ ಒಡ್ಡಿ, ಫೇಸ್‌ಬುಕ್, ವಾಟ್ಸಾಪ್ ಗ್ರೂಪ್‌ಗಳ ಮೂಲಕ ಮೆಸೇಜ್ ಕಳುಹಿಸುತ್ತಾರೆ. ಅದನ್ನು ನಂಬಿ ಹಣ ಕಳುಹಿಸಿ ಜನರು ಮೋಸ ಹೋಗುತ್ತಿದ್ದಾರೆ ಎಂದು ತಿಳಿಸಿದರು. ಮೈಸೂರು ನಗರದಲ್ಲಿ ಈ ಬಗೆಯ 61 ಪ್ರಕರಣಗಳು ದಾಖಲಾಗಿದ್ದು, 32 ಕೋಟಿ ರೂ.ಗಳನ್ನು ಜನರು ಕಳೆದುಕೊಂಡಿದ್ದಾರೆ. ಅಲ್ಲದೇ, ಗಾಂಜಾ, ಡ್ರಗ್ಸ್ ಪಾರ್ಸಲ್ ಬಂದಿದೆ, ನಿಮ್ಮ ವಿರುದ್ಧ ಪ್ರಕರಣ ದಾಖಲಾಗದಂತೆ ನೋಡಿಕೊಳ್ಳುತ್ತೇವೆ ಎಂದು ಭಯ ಹುಟ್ಟಿಸಿ ಸುಲಿಗೆ ಮಾಡಿರುವ 19 ಪ್ರಕರಣಗಳಲ್ಲಿ 20 ಲಕ್ಷಕ್ಕೂ ಹೆಚ್ಚು ಹಣವನ್ನು ಕಳೆದುಕೊಂಡಿದ್ದಾರೆ ಎಂದ ಲಾಟ್ಕರ್, ಉದ್ಯೋಗ ಕೊಡಿಸುವುದಾಗಿ ನಂಬಿಸಿ ವಂಚಿಸುತ್ತಿರುವ ಪ್ರಕರಣಗಳೂ ದಾಖಲಾಗುತ್ತಿವೆ ಎಂದರು.

“ಮಾಹಿತಿ ತಂತ್ರಜ್ಞಾನ ಬೆಳೆಯುತ್ತಿದ್ದಂತೆ ಇತ್ತೀಚಿನ ದಿನಗಳಲ್ಲಿ ಸೈಬರ್ ಅಪರಾಧಗಳೂ ಹೆಚ್ಚಾಗುತ್ತಿವೆ. ವಿದ್ಯಾವಂತರು, ಬುದ್ಧಿವಂತರೇ ಇಂತಹ ವಂಚನೆಗೊಳಗಾಗುತ್ತಿದ್ದಾರೆ. ಈ ಬಗ್ಗೆ ಪೊಲೀಸ್ ಇಲಾಖೆಯಿಂದ ಸಾರ್ವಜನಿಕರಿಗೆ ಜಾಗೃತಿ ಮೂಡಿಸುತ್ತಿದ್ದಾಗ್ಯೂ ಸೈಬರ್ ಪ್ರಕರಣಗಳು ಮುಂದುವರೆಯುತ್ತಿವೆ. ಜನರು ಎಚ್ಚರಿಕೆಯಿಂದಿದ್ದು, ವಂಚನೆಯಾಗಿದೆ ಎಂಬುದು ತಿಳಿಯುತ್ತಿದ್ದಂತೆಯೇ 1930ಕ್ಕೆ ಕರೆ ಇಲ್ಲವೇ ಹತ್ತಿರದ ಪೊಲೀಸ್ ಠಾಣೆಗೆ ಮಾಹಿತಿ ನೀಡಿದಲ್ಲಿ ಹಣ ಕಳೆದುಕೊಳ್ಳುವುದನ್ನು ತಡೆಯಬಹುದು. ಸಾರ್ವಜನಿಕರು ಜಾಗೃತರಾಗಬೇಕು.

– ಸೀಮಾ ಲಾಟ್ಕರ್, ಮೈಸೂರು ನಗರ ಪೊಲೀಸ್ ಆಯುಕ್ತರು.

ಮೈಸೂರು ವ್ಯಕ್ತಿ ಬೆಂಗಳೂರಲ್ಲಿ ಸೆರೆ

ರಾತ್ರಿವರೆಗೂ ಕಾಲ ಕಳೆದು ಮುಂದಿನ ಅಪರಾಧ ಕೃತ್ಯಕ್ಕೆ ಪ್ಲಾನ್ ಮಾಡುತ್ತಿದ್ದ ಎಂಬುದು ಪೊಲೀಸರ ವಿಚಾರಣೆಯಿಂದ ತಿಳಿದುಬಂದಿದೆ.

2023ರ ಮೈಸೂರು ಪ್ರಕರಣ: 2023ರ ಸೆಪ್ಟೆಂಬರ್ 2ರಂದು ಮೈಸೂರಿನ ನಿವೃತ್ತ ಎಎಸ್‌ಐ ಹಾಗೂ ಮಾಜಿ ಸೈನಿಕರಾದ 70 ವರ್ಷದ ಬಿ.ಎ. ದೇವಯ್ಯ ಕುವೆಂಪು ನಗರದ ಉದಯರವಿ ರಸ್ತೆಯಲ್ಲಿ ಕಾರು ಚಾಲನೆ ಮಾಡಿಕೊಂಡು ಹೋಗುತ್ತಿದ್ದಾಗ, ಅವರನ್ನು ತಡೆದು ಜಮೀಲ್ ಖಾನ್, ತನ್ನ ಬೈಕ್‌ಗೆ ಡಿಕ್ಕಿ ಹೊಡೆದು ಬಂದಿದ್ದೀರಿ ಎಂದು ಗಲಾಟೆ ಮಾಡಿದ್ದ. ನನ್ನ ಸ್ನೇಹಿತನ ಕಾಲಿಗೆ ಗಾಯಗಳಾಗಿವೆ, ಅವನನ್ನು ಆಸ್ಪತ್ರೆಗೆ ಕರೆದೊಯ್ಯಬೇಕು, 40,000 ರೂ. ಹಣ ಕೊಡಿ, ಇಲ್ಲದಿದ್ದರೆ ಜನರ ಸೇರಿಸಿ ಗಲಾಟೆ ಮಾಡುವುದಾಗಿ ಹೇಳಿ ಬೆದರಿಸಿದ್ದ. ಅವರ ಬಳಿ ಹಣ ಇಲ್ಲ ಎಂದಾಗ ಎಟಿಎಂಗೆ ದೇವಯ್ಯರನ್ನು ಕರೆದೊಯ್ದು ಹಣ ಡ್ರಾ ಮಾಡಿಸಿ ಪಡೆದು ಪರಾರಿಯಾಗಿದ್ದ ಆರೋಪಿಯನ್ನು ಕುವೆಂಪುನಗರ ಠಾಣೆ ಪೊಲೀಸರು ಕಳೆದ ವರ್ಷ ಸೆಪ್ಟೆಂಬರ್ 12ರಂದು ಬಂಧಿಸಿದ್ದರು.

ಮರುದಿನವೇ ಜೈಲಿನಿಂದ ಹೊರಬರುತ್ತಿದ್ದ

ಮೈಸೂರು, ಆ. 26(ಆರ್‌ಕೆ)– ನಕಲಿ ಅಪಘಾತ ನೆಪದಲ್ಲಿ ಹಣ ಸುಲಿಗೆ ಮಾಡಿ, ಬಂಧಿತನಾಗುತ್ತಿದ್ದ ಜಮೀಲ್ ಖಾನ್, ಜೈಲಿಗೆ ಹೋಗಿ ಮರುದಿನವೇ ಜಾಮೀನಿನ ಮೇಲೆ ಹೊರಬರುತ್ತಿದ್ದ. ಮೈಸೂರು, ಮಂಡ್ಯ ಪ್ರಕರಣಗಳಲ್ಲಿ ಬಂಧನಕ್ಕೊಳಗಾಗಿ ನ್ಯಾಯಾಂಗ ಬಂಧನದಿಂದ ಮರುದಿನವೇ ಜಮೀಲ್‌ಗೆ ಜಾಮೀನು ಮಂಜೂರಾಗಿತ್ತು. ಜೈಲಿನಿಂದ ಹೊರ ಬರುತ್ತಿದ್ದಂತೆಯೇ ಮತ್ತೆ ಹಳೇ ಚಾಳಿ ಮುಂದುವರಿಸುತ್ತಿದ್ದ ಜಮೀಲ್‌ಗೆ ಈ ಬಾರಿ ಬೇಲ್ ಸಿಗದಂತೆ ಸೆಕ್ಷನ್‌ಗಳನ್ನು ಹಾಕಿ, ಈ ಹಿಂದಿನ ಪ್ರಕರಣಗಳನ್ನು ಉಲ್ಲೇಖಿಸಿ ನ್ಯಾಯಾಲಯದಲ್ಲಿ ಸುಲಭವಾಗಿ ಜಾಮೀನು ಸಿಗದಂತೆ ಜಯನಗರ ಠಾಣೆ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಆಧಾರ್ ಜೋಡಣೆ

ಹಾಕಬೇಕು ಎಂಬ ಒತ್ತಾಯ ರಾಜ್ಯದಲ್ಲಿ ವ್ಯಾಪಕವಾಗಿ ಕೇಳಿಬಂದಿತ್ತು. ಇತ್ತೀಚೆಗೆ ಹಲವು ಶಾಸಕರು, ಸಚಿವರು ಹಾಗೂ ಸ್ವತಃ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಈ ಬಗ್ಗೆ ಕಠಿಣ ಕ್ರಮ ಜರುಗಿಸುವಂತೆ ಸೂಚಿಸಿದ್ದರು. ಇದೇ ಕಾರಣಕ್ಕೆ ಆಧಾರ್ ಜೋಡಣೆ ಅಭಿಯಾನಕ್ಕೆ ಮೂರು ತಾಲೂಕುಗಳಲ್ಲಿ ಒಂದು ತಿಂಗಳ ಕಾಲ ಪ್ರಾಯೋಗಿಕವಾಗಿ ಚಾಲನೆ ನೀಡಲಾಗಿತ್ತು. ಈ ಪ್ರಯೋಗ ಯಶಸ್ವಿಯಾಗಿದ್ದು ಇಂದಿನಿಂದಲೇ ರಾಜ್ಯಾದ್ಯಂತ ಆಧಾರ್ ಜೋಡಣೆ ಅಭಿಯಾನವನ್ನು ವಿಸ್ತರಿಸಲಾಗಿದೆ ಎಂದು ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಜನರಲ್ಲೂ ಮನವಿ ಮಾಡಿದ ಸಚಿವರು, ಜನಸಾಮಾನ್ಯರು ಇದನ್ನು ಅನಾನುಕೂಲ ಎಂದು ಭಾವಿಸದೆ ಜಮೀನಿನ ಮಾಲಿಕತ್ವದ ಸುರಕ್ಷತೆಯ ದೃಷ್ಟಿಯಿಂದ ಹಾಗೂ ವಂಚನೆ ಪ್ರಕರಣಗಳನ್ನು ತಪ್ಪಿಸುವ ಉದ್ದೇಶದಿಂದ ನೋಂದಣಿ ಸಮಯದಲ್ಲಿ ಆಧಾರ್ ಜೋಡಣೆಗೆ ಸಕಾರಾತ್ಮಕವಾಗಿ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಸೆ.2ರಿಂದ ‘ಎನಿವೇರ್ ನೋಂದಣಿ’ ಜಾರಿ

ಈ ಯೋಜನೆಯನ್ನು ಫೆಬ್ರವರಿಯಿಂದಲೇ ತುಮಕೂರು ಹಾಗೂ ಬೆಳಗಾವಿಯಲ್ಲಿ ಪ್ರಯೋಗಿಕವಾಗಿ ಚಾಲನೆ ನೀಡಲಾಗಿತ್ತು.

ಆ ಪ್ರಯೋಗ ಯಶಸ್ವಿಯಾದ ಹಿನ್ನೆಲೆಯಲ್ಲಿ ಎನಿವೇರ್ ನೋಂದಣಿಯನ್ನು ಇದೀಗ ಎಲ್ಲಾ ಜಿಲ್ಲೆಯಲ್ಲೂ ವಿಸ್ತರಿಸಲು ನಿರ್ಧರಿಸಲಾಗಿದೆ. ಇದರಿಂದ ಕಚೇರಿಯಲ್ಲಿ ಜನಜಂಗುಳಿ, ಸಿಬ್ಬಂದಿಗೆ ಕೆಲಸದ ಒತ್ತಡ ಕಡಿಮೆ ಮಾಡಿ ಸುಲಲಿತವಾಗಿ ಜನರಿಗೆ ನೋಂದಣಿ ಕೆಲಸ ಆಗಲು ಈ ಯೋಜನೆ ಸಹಕಾರಿಯಾಗಲಿದೆ ಎಂದು ಮಾಹಿತಿ ನೀಡದರು. ಪತ್ರಿಕಾಗೋಷ್ಠಿಯಲ್ಲಿ ಪ್ರಧಾನ ಕಾರ್ಯದರ್ಶಿ ವಿ.ರಶ್ಮಿ ಹಾಗೂ ನೋಂದಣಿ ಮಹಾಪರಿವೀಕ್ಷಕರು ಮತ್ತು ಮುದ್ರಾಂಕಗಳ ಆಯುಕ್ತರಾದ ದಯಾನಂದ ಕೆ.ಎ ಉಪಸ್ಥಿತರಿದ್ದರು.


25,347 ವಿದ್ಯಾರ್ಥಿಗಳು ತೇರ್ಗಡೆ

ಮಂದಿ (ಶೇ. 28.4) ಉತ್ತೀರ್ಣರಾಗಿದ್ದಾರೆ. ಶೇ 24.75ರಷ್ಟು ಬಾಲಕರು ತೇರ್ಗಡೆಯಾಗಿದ್ದಾರೆ. ಖಾಸಗಿ ಶಾಲೆಗಳು ಶೇ 30.66, ಅನುದಾನಿತ ಶೇ 25.19 ಹಾಗೂ ಸರ್ಕಾರಿ ಶಾಲೆಗಳು ಶೇ 24.3ರಷ್ಟು ಫಲಿತಾಂಶ ಪಡೆದಿವೆ. ಮೂರನೇ ಪರೀಕ್ಷೆಯಲ್ಲೂ ಗ್ರಾಮೀಣ ಮಕ್ಕಳೇ ಹೆಚ್ಚಿನ ಸಂಖ್ಯೆಯಲ್ಲಿ ತೇರ್ಗಡೆಯಾಗಿದ್ದಾರೆ. ಪರೀಕ್ಷೆ ಬರೆದಿದ್ದ 38,056 ವಿದ್ಯಾರ್ಥಿಗಳಲ್ಲಿ 10,462 (ಶೇ 27.49) ಹಾಗೂ ನಗರ ಪ್ರದೇಶದ 59,896 ವಿದ್ಯಾರ್ಥಿಗಳಲ್ಲಿ 14,885 (ಶೇ 24.85) ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ದಸರಾ, ಸ್ವಚ್ಛ ಸರ್ವೇಕ್ಷಣ ಹಿನ್ನೆಲೆ; ನಾಗರಿಕರಲ್ಲಿ ಜಾಗೃತಿ ಮೂಡಿಸಲು

ಸೆ.22ರಂದು ಬೃಹತ್ ಸ್ವಚ್ಛತಾ ಶ್ರಮದಾನ, ಅರಿವು ಕಾರ್ಯಕ್ರಮ

ಏಕಕಾಲದಲ್ಲಿ ಪಾಲಿಕೆಯ ಎಲ್ಲಾ ವಾರ್ಡ್‌ಗಳಲ್ಲಿ ಮಹಾ ಸ್ವಚ್ಛತೆ ಕಾರ್ಯ



ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾನಗರ ಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಸೋಮವಾರ ಪಾಲುದಾರರ ಸಭೆ ನಡೆಯಿತು.

ಮೈಸೂರು,ಆ.26(ಪಿಎಂ)– ದಸರಾದಲ್ಲಿ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಲು ಮತ್ತು ಸ್ವಚ್ಛ ಸರ್ವೇಕ್ಷಣ–2024ರ ಹಿನ್ನೆಲೆಯಲ್ಲಿ ನಾಗರಿಕರಲ್ಲಿ ಸ್ವಚ್ಛತೆ ಬಗ್ಗೆ ಜಾಗೃತಿ ಮೂಡಿಸಲು ಸೆ.22ರಂದು ಏಕಕಾಲದಲ್ಲಿ ಎಲ್ಲಾ ವಾರ್ಡ್‌ಗಳಲ್ಲಿ ಬೃಹತ್ ಸ್ವಚ್ಛತಾ ಶ್ರಮದಾನ ಹಾಗೂ ಅರಿವು ಕಾರ್ಯಕ್ರಮ ಹಮ್ಮಿಕೊಳ್ಳಲು ಮೈಸೂರು ಮಹಾನಗರ ಪಾಲಿಕೆ ವತಿಯಿಂದ ನಡೆದ ಪಾಲುದಾರರ ಸಭೆಯಲ್ಲಿ ನಿರ್ಣಯಿಸಲಾಯಿತು.

ಮೈಸೂರಿನ ಸಯ್ಯಾಜಿರಾವ್ ರಸ್ತೆಯಲ್ಲಿರುವ ಮಹಾನಗರ ಪಾಲಿಕೆಯ ಹಳೇ ಕೌನ್ಸಿಲ್ ಸಭಾಂಗಣದಲ್ಲಿ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್ ಅಧ್ಯಕ್ಷತೆಯಲ್ಲಿ ಸೋಮವಾರ ನಡೆದ ಸಭೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಯಿತು. ಪಾಲಿಕೆ ನೇತೃತ್ವ ಹಾಗೂ ಸಂಘ ಸಂಸ್ಥೆಗಳ ಸಹಯೋಗದಲ್ಲಿ ಈ ಶ್ರಮದಾನ ಆಯೋಜಿಸಲು ತೀರ್ಮಾನಿಸಲಾಯಿತು. ಅಲ್ಲದೆ, ಈ ಸ್ವಚ್ಛತಾ ಶ್ರಮದಾನವನ್ನು ಕೇವಲ ಸೆ.22ಕ್ಕೆ ಮಾತ್ರವೇ ಸೀಮಿತಗೊಳಿಸದೇ ಪ್ರತಿ ತಿಂಗಳ ಯಾವುದಾದರೂ ಒಂದು ಭಾನುವಾರ ಮುಂದುವರೆಸಬೇಕೆಂಬ ಅಭಿಪ್ರಾಯ ಸಹ ವ್ಯಕ್ತವಾಯಿತು.

ವಿವಿಧ ಸಂಘ ಸಂಸ್ಥೆಗಳ ಸಲಹೆಗಳನ್ನು ಆಲಿಸಿ ಮಾತನಾಡಿದ ಪಾಲಿಕೆ ಆಯುಕ್ತ ಅಶಾದ್ ಉರ್ ರೆಹಮಾನ್ ಶರೀಫ್, ಸಂಘ ಸಂಸ್ಥೆಗಳು ಹಾಗೂ ನಾಗರಿಕರ ಸಹಕಾರದಿಂದ ಮಾತ್ರ ನಗರದಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲು ಸಾಧ್ಯ. ಇಂದಿನ ಸಭೆಯಲ್ಲಿ ವ್ಯಕ್ತವಾದ ಉತ್ತಮ ಸಲಹೆಗಳ ಸಂಬಂಧ ಸಾಧಕ–ಬಾಧಕಗಳನ್ನು ಅವಲೋಕಿಸಿ ಸಾಧ್ಯವಾದವುಗಳನ್ನು ಅಳವಡಿಸಿಕೊಳ್ಳಲು ಆದ್ಯತೆ ನೀಡಲಾಗುವುದು ಎಂದು ತಿಳಿಸಿದರು.

ಮೈಸೂರು ನಗರದಲ್ಲಿ ಸ್ವಚ್ಛತೆ ಕಾಪಾಡಲು ಪಾಲಿಕೆ ಹತ್ತಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಿದೆ. ಅಂತೆಯೇ ಸೆ.22ರಂದು ಬೆಳಗ್ಗೆಯಿಂದಲೇ ಏಕಕಾಲದಲ್ಲಿ ವಾರ್ಡ್‌ವಾರು ಸ್ವಚ್ಛತಾ ಶ್ರಮದಾನ ನಡೆಸುವ ಜೊತೆಗೆ ಸಾರ್ವಜನಿಕರಿಗೆ ಅರಿವು ಮೂಡಿಸುವುದೂ ಆಗಬೇಕು. ಈ ನಿಟ್ಟಿನಲ್ಲಿ ಸಂಘ ಸಂಸ್ಥೆಗಳ ಸಹಕಾರ ಅಗತ್ಯ ಎಂದರು.

ಸ್ವಚ್ಛತಾ ಕಾರ್ಯದ ಜೊತೆಗೆ ಪ್ಲಾಸ್ಟಿಕ್ ಕವರ್‌ಗಳಿಗೆ ಪರ್ಯಾಯವಾಗಿ ಬಟ್ಟೆ ಬ್ಯಾಗ್ ಬಳಕೆ ಬಗ್ಗೆ ಜನತೆಯಲ್ಲಿ ಜಾಗೃತಿ ಮೂಡಿಸಬೇಕು. ಶಾಲಾ–ಕಾಲೇಜು ವಿದ್ಯಾರ್ಥಿಗಳು ಹಾಗೂ ಯುವಜನರನ್ನು ಈ ಬೃಹತ್ ಸ್ವಚ್ಛತಾ ಶ್ರಮದಾನದಲ್ಲಿ ಒಳಗೊಳ್ಳುವಂತೆ ಮಾಡಬೇಕು. ಆ ಮೂಲಕ ಮೈಸೂರಿನಲ್ಲಿ ಇನ್ನು ಉತ್ತಮ ಮಟ್ಟದಲ್ಲಿ ಸ್ವಚ್ಛತೆ ಕಾಯ್ದುಕೊಳ್ಳಲು ಸಾರ್ವಜನಿಕರಲ್ಲಿ ಜಾಗೃತಿ ಉಂಟು ಮಾಡಬೇಕಿದೆ ಎಂದು ತಿಳಿಸಿದರು.

ಜೆಸಿಬಿ, ಟಿಪ್ಪರ್ ಮಾಲೀಕರು, ಪಾಲಿಕೆ ಗುತ್ತಿಗೆದಾರರು, ವಿವಿಧ ಸಂಘಟನೆಗಳು ಒಟ್ಟುಗೂಡಿ ಈ ಬೃಹತ್ ಸ್ವಚ್ಛತಾ ಶ್ರಮದಾನ ಕಾರ್ಯಕ್ರಮ ಯಶಸ್ವಿಗೊಳಿಸಬೇಕು. ಇದೊಂದು ಮಾಸ್ ಕ್ಲೀನಿಂಗ್ ಡ್ರೈವ್ ಆಗಿದ್ದು, ಇದನ್ನು ಮುಂದುವರೆಸಲು ಉದ್ದೇಶಿಸಲಾಗಿದೆ. ಒಂದೊಂದು ವಾರ್ಡ್‌ನಲ್ಲಿ ಒಂದು ಅಥವಾ ಅದಕ್ಕಿಂತಲೂ ಹೆಚ್ಚು ಸಂಘಟನೆಗಳನ್ನು ಒಟ್ಟುಗೂಡಿಸಿ ಅಂದು ಬೃಹತ್ ಸ್ವಚ್ಛತಾ ಶ್ರಮದಾನ ಹಾಗೂ ಅರಿವು ಕಾರ್ಯಕ್ರಮ ನಡೆಸಲು ರೂಪುರೇಷೆ ಸಿದ್ಧಪಡಿಸಲಾಗುವುದು ಎಂದು ಹೇಳಿದರು.

ಇದೇ ವೇಳೆ ಸ್ವಚ್ಛತೆ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಲು ನಾನಾ ಕಾರ್ಯಕ್ರಮ ಆಯೋಜಿಸಬೇಕು. ಆ ಮೂಲಕ ಮೂಲದಲ್ಲೇ ಹಸಿ ಮತ್ತು ಒಣ ಕಸ ವಿಂಗಡಣೆ, ಪರಿಸರ ಸ್ನೇಹಿ ಜೀವನಶೈಲಿ ಸೇರಿದಂತೆ ನೈರ್ಮಲ್ಯ ಹಾಗೂ ಪರಿಸರ ಪೂರಕ ವಾತಾವರಣಕ್ಕೆ ಸಂಬಂಧಿಸಿದ ವಿಚಾರಗಳನ್ನು ಜನತೆಗೆ ತಲುಪಿಸಬೇಕಿದೆ. ಈ ಬಾರಿಯ ದಸರಾವನ್ನು ಹಸಿರು ಹಾಗೂ ಸ್ವಚ್ಛ ದಸರಾವಾಗಿ ಆಚರಣೆ ಮಾಡಲು ಪ್ರೇರೇಪಿಸಬೇಕು. ಶೂನ್ಯ ತ್ಯಾಜ್ಯ ದಸರಾ ಪರಿಕಲ್ಪನೆಗೆ ಉತ್ತೇಜನ ನೀಡಬೇಕು ಎಂದು ತಿಳಿಸಿದರು.

ದಸರಾದಲ್ಲಿ ತ್ಯಾಜ್ಯ ಉತ್ಪಾದನೆಗೆ ಕಡಿವಾಣ ಹಾಕಿ: ದಸರಾ ಪ್ರಯುಕ್ತ ನಡೆಯುವ ಬೃಹತ್ ಕಾರ್ಯಕ್ರಮಗಳಲ್ಲಿ ಭಾರಿ ಪ್ರಮಾಣದಲ್ಲಿ ಉತ್ಪಾದನೆಯಾಗುವ ನಾನಾ ರೀತಿ ತ್ಯಾಜ್ಯಕ್ಕೆ ಕಡಿವಾಣ ಹಾಕಬೇಕೆಂಬ ಅಭಿಪ್ರಾಯಗಳು ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳಿಂದ ವ್ಯಕ್ತವಾದವು. ಆಹಾರ ಮೇಳದಲ್ಲಿ ಪ್ಲಾಸ್ಟಿಕ್ ಚಮಚ, ತಟ್ಟೆಗಳಿಗೆ ಕಡಿವಾಣ ಹಾಕಬೇಕು. ಯುವ ಸಂಭ್ರಮ, ಯುವ ದಸರಾ ಸೇರಿದಂತೆ ದಸರಾದಲ್ಲಿ ನಡೆಯುವ ಸಾಂಸ್ಕೃತಿಕ ಕಾರ್ಯಕ್ರಮಗಳ ಸ್ಥಳಗಳಲ್ಲಿ ತ್ಯಾಜ್ಯ ವಿಲೇವಾರಿಗೆ ಹೆಚ್ಚು ಗಮನ ನೀಡಬೇಕು ಎಂಬ ಅಭಿಪ್ರಾಯಗಳು ವ್ಯಕ್ತವಾದವು.

ಮೈಸೂರು ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆ ಅಧ್ಯಕ್ಷ ಕೆ.ಬಿ.ಲಿಂಗರಾಜು, ಜಿಎಸ್‌ಎಸ್ ಸಂಸ್ಥೆ ಮುಖ್ಯಸ್ಥ ಶ್ರೀಹರಿ, ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಸಿ.ಕೆ.ಮಹೇಂದ್ರ, ಪ್ರಧಾನ ಕಾರ್ಯದರ್ಶಿ ಧರ್ಮಾಪುರ ನಾರಾಯಣ್, ಮೈಸೂರು ಗ್ರಾಹಕರ ಪರಿಷತ್‌ನ ಶೋಭನಾ, ಕ್ಲೀನ್ ಮೈಸೂರು ಫೌಂಡೇಷನ್‌ನ ವೆಂಕಟೇಶ್ ಸೇರಿದಂತೆ ಮೈಸೂರಿನ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಭೆಯಲ್ಲಿ ಪಾಲ್ಗೊಂಡಿದ್ದರು. ಪಾಲಿಕೆ ಮುಖ್ಯ ಆರೋಗ್ಯಾಧಿಕಾರಿ ಡಾ.ವೆಂಕಟೇಶ್, ಸಹಾಯಕ ಕಾರ್ಯಪಾಲಕ ಅಭಿಯಂತರ ಮೃತ್ಯುಂಜಯ ಹಾಗೂ ಸಿಬ್ಬಂದಿ ಹಾಜರಿದ್ದರು.

ವಿಜಯನಗರ 4ನೇ ಹಂತದ ನಾಗರಿಕ ಸಮಸ್ಯೆಗಳ ಕೂಡಲೇ ಪರಿಹರಿಸಿ

ಮುಡಾ ಅಧಿಕಾರಿಗಳಿಗೆ ಶಾಸಕ ಜಿ.ಟಿ.ದೇವೇಗೌಡರ ಸೂಚನೆ



ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿನ ಶಾಸಕರ ಕಚೇರಿಯಲ್ಲಿ ಸೋಮವಾರ ಶಾಸಕ ಜಿ.ಟಿ.ದೇವೇಗೌಡರು ಅಧಿಕಾರಿಗಳ ಸಭೆ ನಡೆಸಿದರು.

ಮೈಸೂರು, ಆ.26(ಎಸ್‌ಬಿಡಿ)– ಮೈಸೂರು ವಿಜಯನಗರ ನಾಲ್ಕನೇ ಹಂತದಲ್ಲಿ ಸಾಕಷ್ಟು ಸಮಸ್ಯೆಗಳಿದ್ದು, ಖುದ್ದು ಪರಿಶೀಲಿಸಿ ತುರ್ತು ಪರಿಹಾರ ಕ್ರಮ ಕೈಗೊಳ್ಳುವಂತೆ ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡರು, ಮುಡಾ ಆಯುಕ್ತರಿಗೆ ಸೂಚಿಸಿದರು.

ನಗರದ ಜಲದರ್ಶಿನಿ ಅತಿಥಿ ಗೃಹದಲ್ಲಿನ ಶಾಸಕರ ಕಚೇರಿಯಲ್ಲಿ ಸೋಮವಾರ ಅಧಿಕಾರಿಗಳ ಸಭೆ ನಡೆಸಿದ ಅವರು, ವಿಜಯನಗರ 4ನೇ ಹಂತದಲ್ಲಿ ಕಳೆದ ನಾಲ್ಕು ತಿಂಗಳಿಂದ ಸಮರ್ಪಕವಾಗಿ ಕಸ ವಿಲೇವಾರಿ ಹಾಗೂ ಒಳಚರಂಡಿ ದುರಸ್ತಿ ಮಾಡುತ್ತಿಲ್ಲ. ಕುಡಿಯುವ ನೀರಿಗೂ ಸಮಸ್ಯೆಯಾಗಿದೆ ಎಂದು ಅಲ್ಲಿನ ನಿವಾಸಿಗಳು ದೂರುತ್ತಿದ್ದಾರೆ. ಅಧಿಕಾರಿಗಳು ಏನು ಮಾಡುತ್ತಿದ್ದೀರಿ? ಕೂಡಲೇ ಸಮಸ್ಯೆಗಳ ಪಟ್ಟಿ ಮಾಡಿಕೊಂಡು ಬಗೆಹರಿಸಲು ಕ್ರಮ ಕೈಗೊಳ್ಳಿ. ಮುಡಾ ಆಯುಕ್ತರು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ವಿಜಯನಗರ 4ನೇ ಹಂತಕ್ಕೆ ಭೇಟಿ ನೀಡಿ, ಪರಿಶೀಲನೆ ನಡೆಸಬೇಕು. ಆ ಬಡಾವಣೆಗೆ ಅಗತ್ಯತೆಗೆ ಅನುಗುಣವಾಗಿ ಹೆಚ್ಚುವರಿ ನೀರು ಪೂರೈಸಬೇಕು ಎಂದು ತಿಳಿಸಿದರು.

ದಾಸನಕೊಪ್ಪಲು, ರೂಪನಗರ, ಮರಟಿಕ್ಯಾತನಹಳ್ಳಿಯಲ್ಲಿನ ಒಳಚರಂಡಿ ಸಮಸ್ಯೆ ಪರಿಹಾರಕ್ಕೆ ಈಗಾಗಲೇ 25 ಕೋಟಿ ರೂ. ಕ್ರಿಯಾ ಯೋಜನೆ ತಯಾರಿದ್ದು, ಅನುಮೋದನೆ ಹಂತದಲ್ಲಿದೆ. ಆದ್ದರಿಂದ ಬೋಗಾದಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಹಾಗೂ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಕಾರ್ಯಪಾಲಕ ಇಂಜಿನಿಯರ್ ಭೇಟಿ ನೀಡಿ, ತಾತ್ಕಾಲಿಕವಾಗಿ ಈ ಗ್ರಾಮಗಳ ಒಳಚರಂಡಿ ಸಮಸ್ಯೆ ಬಗೆಹರಿಸಬೇಕು. ರಾಜಾಜಿನಗರ, ಆಶ್ರಯ ಬಡಾವಣೆಗಳ ರಸ್ತೆ ಮತ್ತು ಒಳಚರಂಡಿಗೆ ಕಾಮಗಾರಿಗೆ ಸರ್ವೆ ಮಾಡಿಸಬೇಕು ಎಂದರು.

ಇದೇ ವೇಳೆ ಮುಡಾ ಆಯುಕ್ತ ರಘುನಂದನ್, ವಿಜಯನಗರ 4ನೇ ಹಂತದ ನಿರ್ವಹಣೆಗೆ ಅಗತ್ಯವಿರುವ ಅನುದಾನ ಬಿಡುಗಡೆಗೆ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು. ನಗರ ಪಾಲಿಕೆ ಆಯುಕ್ತ ಆಸಾದ್ ಉರ್ ರೆಹಮಾನ್ ಷರೀಫ್, ಅಧೀಕ್ಷಕ ಇಂಜಿನಿಯರ್ ಸಿಂಧು, ಮುರುಳೀಧರ್, ಬೋಗಾದಿ ಪಟ್ಟಣ ಪಂಚಾಯ್ತಿ ಮುಖ್ಯಾಧಿಕಾರಿ ಬಸವರಾಜು, ರಮ್ಮನಹಳ್ಳಿ ಮುಖ್ಯಾಧಿಕಾರಿ ರವಿಕೀರ್ತಿ, ಮತ್ತಿತರ ಅಧಿಕಾರಿಗಳು ಸಭೆಯಲ್ಲಿದ್ದರು.

ಖಾಸಗಿ ಬಡಾವಣೆಗಳಿಗೆ ಕುಡಿಯುವ ನೀರು

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರ(ಮುಡಾ)ದಿಂದ ಅನುಮೋದನೆಗೊಂಡು ನಿರ್ಮಾಣಗೊಂಡಿರುವ ಕೆಬಿಎಲ್ ಬಡಾವಣೆ, ಆಲನಹಳ್ಳಿ, ದಟ್ಟಗಳ್ಳಿ, ಕಾರ್ತಿಕ ಬಡಾವಣೆ, ಆರ್.ಟಿ.ನಗರದ ನಿವಾಸಿಗಳು ಕುಡಿಯುವ ನೀರನ್ನು ಕಲ್ಪಿಸಲು ಮನವಿ ಮಾಡಿದ್ದರ ಬಗ್ಗೆ ಸಭೆಯಲ್ಲಿ ಚರ್ಚಿಸಿ, ಈ ಬಡಾವಣೆ ನಿವಾಸಿಗಳಿಂದ ಪ್ರೋರೇಟಾ ಪಾವತಿಸಿಕೊಂಡು ಮೀಟರ್ ಅಳವಡಿಸಿ ಕುಡಿಯುವ ನೀರು ಪೂರೈಸಲು ನಿರ್ಧರಿಸಲಾಯಿತು.

ನಾಳೆ ಪಡುವಾರಹಳ್ಳಿಯ ವಿನಾಯಕ ಕನ್ವೆನ್ಷನ್ ಹಾಲ್ ಉದ್ಘಾಟನೆ

ಮೈಸೂರು, ಆ.26(ಎಸ್‌ಬಿಡಿ)– ಮೈಸೂರಿನ ವಿನಾಯಕನಗರ (ಪಡುವಾರಹಳ್ಳಿ)ದಲ್ಲಿ ನೂತನವಾಗಿ ನಿರ್ಮಿಸಿರುವ ‘ವಿನಾಯಕ ಕನ್ವೆನ್ಷನ್ ಹಾಲ್’ ಆ.28ರಂದು ಉದ್ಘಾಟನೆಗೊಳ್ಳಲಿದೆ.

ಶ್ರೀ ಆದಿಚುಂಚನಗಿರಿ ಕ್ಷೇತ್ರದ ಪೀಠಾಧ್ಯಕ್ಷರಾದ ಶ್ರೀ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಹಾಗೂ ಮೈಸೂರು ಶಾಖಾ ಮಠದ ಶ್ರೀ ಸೋಮೇಶ್ವರನಾಥ ಸ್ವಾಮೀಜಿ ಸಾನ್ನಿಧ್ಯದಲ್ಲಿ ಅಂದು ಬೆಳಗ್ಗೆ 11ಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಉದ್ಘಾಟನೆ ನೆರವೇರಿಸಲಿದ್ದಾರೆ.

ಇದೇ ವೇಳೆ ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಜ್ಯೋತಿ ಬೆಳಗಲಿದ್ದು, ಪ್ರತಿಪಕ್ಷದ ನಾಯಕ ಆರ್.ಅಶೋಕ್, ಸಚಿವರಾದ ಡಾ.ಹೆಚ್.ಸಿ.ಮಹದೇವಪ್ಪ, ಕೆ.ವೆಂಕಟೇಶ್, ಕೃಷ್ಣ ಭೈರೇಗೌಡ, ಚಲುವರಾಯಸ್ವಾಮಿ, ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್, ಶಾಸಕರಾದ ಜಿ.ಟಿ.ದೇವೇಗೌಡರು, ಕೆಹರೀಶ್‌ಗೌಡ, ರಮೇಶ್ ಬಂಡಿಸಿದ್ದೇಗೌಡ, ತನ್ವೀರ್ ಸೇಠ್, ಶ್ರೀವತ್ಸ, ಜಿ.ಡಿ.ಹರೀಶ್ ಗೌಡ, ಮಾಜಿ ಶಾಸಕರಾದ ಸಾ.ರಾ.ಮಹೇಶ್, ಎಲ್.ನಾಗೇಂದ್ರ, ಮುಡಾ ಆಯುಕ್ತ ಕೆ.ಮರೀಗೌಡ ಮತ್ತಿತರರು ಭಾಗವಹಿಸಲಿದ್ದಾರೆ ಎಂದು ಪಡುವಾರಹಳ್ಳಿ (ವಿನಾಯಕನಗರ) ಗ್ರಾಮಾಭ್ಯುದಯ ಟ್ರಸ್ಟ್‌ನ ಪದಾಧಿಕಾರಿಗಳು ತಿಳಿಸಿದ್ದಾರೆ.



ಉದ್ಘಾಟನೆಗೆ ಸಿದ್ಧವಾಗಿರುವ ವಿನಾಯಕ ಕನ್ವೆನ್ಷನ್ ಹಾಲ್

ಕರಾಟೆ ಪಂದ್ಯಾವಳಿಯಲ್ಲಿ ನೈಪುಣ್ಯ ಶಾಲೆ ವಿದ್ಯಾರ್ಥಿಗಳ ಸಾಧನೆ





ವಿದ್ಯಾರ್ಥಿನಿ ಹಂಸಿಕಾ ರಾಜಪಾಲ್‌ಗೆ ಗಣ್ಯರು ಪ್ರಶಸ್ತಿ ಹಾಗೂ ಪ್ರಮಾಣ ಪತ್ರ ವಿತರಿಸಿದರು. ಪ್ರಶಸ್ತಿ ಪಡೆದ ಮತ್ತೋರ್ವ ವಿದ್ಯಾರ್ಥಿ ರಿತುಲ್ ರಾಜಪಾಲ್‌ನನ್ನು ಬಲಚಿತ್ರದಲ್ಲಿ ಕಾಣಬಹುದು.

ಮೈಸೂರು, ಆ.26– ಮೈಸೂರಿನ ಕನಕದಾಸನಗರ(ದಟ್ಟಗಳ್ಳಿ)ದಲ್ಲಿರುವ ನೈಪುಣ್ಯ ಸ್ಕೂಲ್ ಆಫ್ ಎಕ್ಸಲೆನ್ಸ್ ಶಾಲೆಯ ವಿದ್ಯಾರ್ಥಿಗಳು ಅಂತಾರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಶಿವಮೊಗ್ಗದಲ್ಲಿ ಆ.24ರಂದು ನಡೆದ ಅಂತಾರಾಷ್ಟ್ರೀಯ ಕರಾಟೆ ಪಂದ್ಯಾವಳಿಯಲ್ಲಿ ನೈಪುಣ್ಯ ಶಾಲೆಯ 5ನೇ ತರಗತಿಯ ವಿದ್ಯಾರ್ಥಿನಿ ಹಂಸಿಕಾ ರಾಜಪಾಲ್, ಕತಾ ವಿಭಾಗದಲ್ಲಿ ಪ್ರಥಮ ಸ್ಥಾನ ಮತ್ತು ಕುಮಿತೆ ವಿಭಾಗದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. 3ನೇ ತರಗತಿ ವಿದ್ಯಾರ್ಥಿ ರಿತುಲ್ ರಾಜಪಾಲ್, ಕತಾ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದಿದ್ದಾರೆ.

ಪಠ್ಯಕ್ರಮದೊಂದಿಗೆ ಪಠ್ಯೇತರ ಚಟುವಟಿಕೆಗಳಲ್ಲಿಯೂ ಭಾಗವಹಿಸಿ, ಸಾಧನೆ ಮಾಡಿರುವ ಈ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದ ನೈಪುಣ್ಯ ಸಂಸ್ಥೆಯ ಅಧ್ಯಕ್ಷ ಆರ್.ರಘು, ಈ ವಿದ್ಯಾರ್ಥಿಗಳಂತೆ ಉಳಿದ ವಿದ್ಯಾರ್ಥಿಗಳೂ ತಮ್ಮ ಆಸಕ್ತಿ ವಲಯದ ಚಟುವಟಿಕೆಗಳಲ್ಲಿ ಸಾಧಿಸುವತ್ತ ಪರಿಶ್ರಮ ವಹಿಸಲಿ ಎಂದು ಹಾರೈಸಿದ್ದಾರೆ.

ರಾಜಕಾಲುವೆ ಒತ್ತುವರಿ; ಶ್ರೀ ಸ್ವಾಮಿ ಕೊರಗಜ್ಜ ದೇವಸ್ಥಾನದ ಭಾಗ ತೆರವು

ಮೈಸೂರು, ಆ.26(ಎಸ್‌ಬಿಡಿ)– ರಾಜಕಾಲುವೆ ಒತ್ತುವರಿ ತೆರವು ಕಾರ್ಯಾಚರಣೆ ನಡೆಸುತ್ತಿರುವ ಮೈಸೂರು ತಾಲೂಕು ಆಡಳಿತ, ಕೇರ್ಗಳ್ಳಿಯಲ್ಲಿರುವ ಶ್ರೀ ಸ್ವಾಮಿ ಕೊರಗಜ್ಜ ದೇವಸ್ಥಾನದ ಅತಿಕ್ರಮಣ ಭಾಗವನ್ನು ಸೋಮವಾರ ತೆರವುಗೊಳಿಸಿದೆ.

ತೆರವು ಕಾರ್ಯಾಚರಣೆ ಬಗ್ಗೆ ಮಾಹಿತಿ ಇದ್ದ ಹಿನ್ನೆಲೆಯಲ್ಲಿ ದೇವರ ಮೂರ್ತಿಯನ್ನು ದೇವಸ್ಥಾನದವರು ಸ್ಥಳಾಂತರಿಸಿದ್ದರು. ನಂತರ ಸ್ವಾಮಿ ಕೊರಗಜ್ಜನ ಕಟ್ಟೆ, ಶೆಡ್ ಸೇರಿದಂತೆ ರಾಜಕಾಲುವೆ ವ್ಯಾಪ್ತಿಯಲ್ಲಿರುವ ನಿರ್ಮಾಣಗಳನ್ನು ಜೆಸಿಬಿ ಮೂಲಕ ನೆಲಸಮಗೊಳಿಸಲಾಯಿತು. ಈ ವೇಳೆ ದೇವಸ್ಥಾನದವರು ಆಕ್ಷೇಪ ವ್ಯಕ್ತಪಡಿಸಿದಾದರೂ ರಾಜಕಾಲುವೆ ಒತ್ತುವರಿಯಿಂದಾಗುವ ದುಷ್ಪರಿಣಾಮಗಳ ಬಗ್ಗೆ ಅವರಿಗೆ ಅಧಿಕಾರಿಗಳು ಮನವರಿಕೆ ಮಾಡಿಕೊಟ್ಟು, ಕಾರ್ಯಾಚರಣೆ ಮುಂದುವರೆಸಿದರು.

ಮೈಸೂರು ತಾಲೂಕು, ಜಯಪುರ ಹೋಬಳಿ ಕೇರ್ಗಳ್ಳಿ ಗ್ರಾಮದ ಸರ್ವೆ ನಂ.60ರಲ್ಲಿ ಜಮೀನಿಗೆ ಹೊಂದಿಕೊಂಡಿರುವ ರಾಜಕಾಲುವೆಯನ್ನು ಒತ್ತುವರಿ ಮಾಡಿಕೊಳ್ಳಲಾಗಿದೆ ಎಂದು ದೂರು ಬಂದಿದ್ದರ ಹಿನ್ನೆಲೆಯಲ್ಲಿ ದಾಖಲೆಗಳನ್ನು ಪರಿಶೀಲಿಸಿದ ಮೈಸೂರು ಉಪ ವಿಭಾಗಾಧಿಕಾರಿ(ಎಸಿ) ಕೆ.ರಕ್ಷಿತ್, ಈ ಸಂಬಂಧ ಸೂಕ್ತ ಕ್ರಮಕ್ಕೆ ತಹಶೀಲ್ದಾರ್ ಕೆ.ಎಂ.ಮಹೇಶ್ ಕುಮಾರ್‌ಗೆ ಸೂಚಿಸಿದ್ದರು. ಬಳಿಕ ತಾಲೂಕು ಭೂಮಾಪಕರು, ಪರ್ಯಾವೇಕ್ಷಕರು ಹಾಗೂ ವಲಯ ಅಧಿಕಾರಿಗಳ ಸಮ್ಮುಖದಲ್ಲಿ ಅಳತೆ ಮಾಡಿ, ರಾಜಕಾಲುವೆ ಒತ್ತುವರಿ ಬಗ್ಗೆ ಜಯಪುರ ವ್ಯಾಪ್ತಿಯ ಉಪತಹಶೀಲ್ದಾರ್ ವರದಿ ಸಲ್ಲಿಸಿದ್ದರು.



ಮೈಸೂರು ಕೇರ್ಗಳ್ಳಿಯಲ್ಲಿರುವ ಶ್ರೀ ಸ್ವಾಮಿ ಕೊರಗಜ್ಜ ದೇವಸ್ಥಾನದ ದೇವರ ಕಟ್ಟೆ ಸೇರಿದಂತೆ ರಾಜಕಾಲುವೆ ವ್ಯಾಪ್ತಿಯಲ್ಲಿದ್ದ ನಿರ್ಮಾಣಗಳನ್ನು ಸೋಮವಾರ ತೆರವುಗೊಳಿಸಲಾಯಿತು. ಎಸಿ ರಕ್ಷಿತ್, ತಹಶೀಲ್ದಾರ್ ಮಹೇಶ್ ಕುಮಾರ್ ಮತ್ತಿತರರು ಹಾಜರಿದ್ದರು.


ಈ ಎಲ್ಲಾ ಪ್ರಕ್ರಿಯೆಗಳೊಂದಿಗೆ ರಾಜಕಾಲುವೆ ಒತ್ತುವರಿ ಖಚಿತಪಡಿಸಿಕೊಂಡು ಉಪವಿಭಾಗಾಧಿಕಾರಿ ಕೆ.ರಕ್ಷಿತ್ ಹಾಗೂ ತಹಶೀಲ್ದಾರ್ ಕೆ.ಎಂ.ಮಹೇಶ್ ಕುಮಾರ್ ನೇತೃತ್ವದಲ್ಲೇ ಸೋಮವಾರ ತೆರವು ಕಾರ್ಯಾಚರಣೆ ನಡೆಸಲಾಯಿತು. ಈ ವೇಳೆ ಜಯಪುರ ಠಾಣೆ ಪೊಲೀಸರು ಬಿಗಿ ಬಂದೋಬಸ್ತ್ ಮಾಡಿದ್ದರು. ಕಾರ್ಯಾಚರಣೆಯಲ್ಲಿ ಜಯಪುರ ಹೋಬಳಿ ಉಪ ತಹಸೀಲ್ದಾರ್ ನಿಂಗಪ್ಪ, ರಾಜಸ್ವ ನಿರೀಕ್ಷಕ ಲೋಹಿತ್, ಹೋಬಳಿಯ ಗ್ರಾಮ ಆಡಳಿತ ಅಧಿಕಾರಿಗಳು, ಬೋಗಾದಿ ಪಟ್ಟಣ ಪಂಚಾಯ್ತಿ ಅಧಿಕಾರಿಗಳು ಹಾಗೂ ಸಿಬ್ಬಂದಿ, ನಗರ ಮಾಪನ ಯೋಜನಾಧಿಕಾರಿಗಳ ಕಚೇರಿ ಸಿಬ್ಬಂದಿ ಪಾಲ್ಗೊಂಡಿದ್ದರು.

ರಾಜಕಾಲುವೆ ವ್ಯಾಪ್ತಿಯಲ್ಲಿದ್ದ ನಿರ್ಮಾಣಗಳನ್ನು ಮಾತ್ರ ಗುರುತು ಮಾಡಿ, ತೆರವುಗೊಳಿಸಲಾಗಿದೆ. ಇಂದು ಶೇ.90ರಷ್ಟು ತೆರವು ಕಾರ್ಯಾಚರಣೆ ಮುಗಿದಿದ್ದು, ಉಳಿದಿದ್ದನ್ನು ನಾಳೆ ಮುಂದುವರೆಸಲಾಗುವುದು. ಯಾರೂ ರಾಜಕಾಲುವೆಯನ್ನು ಒತ್ತುವರಿ ಹಾಗೂ ಅದರ ಮೇಲೆ ನಿರ್ಮಾಣ ಮಾಡಬಾರದು. ಒಂದು ವೇಳೆ ಒತ್ತುವರಿ ಮಾಡಿದ್ದರೆ ತಾವೇ ತೆರವು ಮಾಡುವ ಮೂಲಕ ಸಹಕರಿಸಬೇಕು ಎಂದು ತಹಶೀಲ್ದಾರ್ ಮನವಿ ಮಾಡಿದ್ದಾರೆ.

ಮೈಸೂರು ಮಿತ್ರ

ರಾಜ್ಯಕ್ಕೆ ಮೈಮುಲ್ ಮಾದರಿಯಾಗಿಸಲು ಸಹಕರಿಸಿ

ರೈತರಲ್ಲಿ ನೂತನ ಅಧ್ಯಕ್ಷ ಆರ್.ಚೆಲುವರಾಜು ಮನವಿ



ತಿ.ನರಸೀಪುರದಲ್ಲಿ ಮೈಮುಲ್ ಅಧ್ಯಕ್ಷ ಆರ್.ಚೆಲುವರಾಜು ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಆ.26– ಮೈಸೂರು ಜಿಲ್ಲಾ ಹಾಲು ಒಕ್ಕೂಟವನ್ನು ರಾಜ್ಯದಲ್ಲೇ ಮಾದರಿ ಹಾಲು ಒಕ್ಕೂಟ ಮಾಡುವ ಗುರಿ ಹೊಂದಲಾಗಿದ್ದು, ರೈತರು ನನ್ನ ಆಶಯಕ್ಕೆ ಸಹಕಾರ ನೀಡಬೇಕು ಎಂದು ಮೈಮುಲ್ ನೂತನ ಅಧ್ಯಕ್ಷ ಆರ್. ಚೆಲುವರಾಜು ಮನವಿ ಮಾಡಿದರು.

ಪಟ್ಟಣದ ಮಹದೇಶ್ವರ ಕಲ್ಯಾಣ ಮಂಟಪದಲ್ಲಿ ತಾಲೂಕು ಹಾಲು ಉತ್ಪಾದಕರ ಸಹಕಾರ ಸಂಘಗಳ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ಸಹೋದ್ಯೋಗಿ ಮಿತ್ರರು ಅಧ್ಯಕ್ಷ ಸ್ಥಾನದ ಜವಾಬ್ದಾರಿ ಕೊಟ್ಟಿದ್ದಾರೆ. ಇನ್ನೂ 20 ತಿಂಗಳು ಕಾಲಾವಕಾಶವಿದೆ. ನಿರ್ದೇಶಕರು ನನ್ನ ಮೇಲೆ ನಂಬಿಕೆ ಇಟ್ಟು ಕೊಟ್ಟಿರುವ ಅಧ್ಯಕ್ಷ ಸ್ಥಾನವನ್ನು ಸಮರ್ಥವಾಗಿ ನಿಭಾಯಿಸುವ ಮೂಲಕ ಅವರ ನಂಬಿಕೆ ಉಳಿಸಲು ಪ್ರಾಮಾಣಿಕ ಪ್ರಯತ್ನ ಪಡುತ್ತೇನೆ. ನನ್ನನ್ನು ಅಧ್ಯಕ್ಷನನ್ನಾಗಿ ಮಾಡಿದ ಎಲ್ಲಾ ನಿರ್ದೇಶಕರಿಗೂ ಕೃತಜ್ಞತೆ ಸಲ್ಲಿಸುವುದಾಗಿ ತಿಳಿಸಿದರು.

ರಾಜ್ಯದಲ್ಲಿ ದಕ್ಷಿಣ ಕನ್ನಡ ಬಿಟ್ಟರೆ ಹಾಲಿಗೆ ಹೆಚ್ಚಿನ ಬೆಲೆ ನೀಡುತ್ತಿರುವುದು ಮೈಸೂರು ಜಿಲ್ಲಾ ಹಾಲು ಒಕ್ಕೂಟ. ನನ್ನ ಅಧಿಕಾರಾವಧಿಯಲ್ಲಿ ಮೈಮುಲ್ ಅನ್ನು ರಾಜ್ಯದಲ್ಲೇ ಮಾದರಿ ಒಕ್ಕೂಟವನ್ನಾಗಿ ರೂಪಿಸಲಾಗುವುದು. ರೈತರ ಹೈನುಗಾರಿಕೆಗೆ ಪೂರಕ ಯೋಜನೆಗಳನ್ನು ಜಾರಿಗೊಳಿಸುವ ಜೊತೆಗೆ ಹಾಲಿನ ಉತ್ಪಾದನೆ ಹೆಚ್ಚಳಕ್ಕೆ ಕ್ರಮ ಕೈಗೊಳ್ಳುತ್ತೇವೆ ಎಂದರು.

ರೈತರು ತಮ್ಮ ಕುಲ ಕಸುಬಾದ ಹೈನುಗಾರಿಕೆ ನಂಬಿ ಜೀವನ ನಡೆಸುತ್ತಿದ್ದಾರೆ. ಹೀಗಾಗಿ ಕುಲ ಕಸುಬು ಉದ್ಯಮವಾಗಿ ಬೆಳೆಯುವಂತಾಗಬೇಕು. ರೈತರು ಹೆಚ್ಚಾಗಿ ಹೈನುಗಾರಿಕೆಯಲ್ಲಿ ತಮ್ಮನ್ನು ತೊಡಗಿಸಿಕೊಂಡರೆ ಗ್ರಾಮದ ಸಹಕಾರ ಸಂಘಗಳು ಅಭಿವೃದ್ಧಿ ಹೊಂದುವ ಜೊತೆಗೆ ಹೆಚ್ಚಿನ ಲಾಭ ಪಡೆಯಬಹುದಾಗಿದೆ. ಇದರಿಂದ ಜಿಲ್ಲಾ ಹಾಲು ಒಕ್ಕೂಟವೂ ಮತ್ತಷ್ಟು ಅಭಿವೃದ್ಧಿ ಹೊಂದಲು ಸಾಧ್ಯವಾಗುತ್ತದೆ. ಜಿಲ್ಲಾ ಒಕ್ಕೂಟ ಸಹ ರೈತರು ಹೈನುಗಾರಿಕೆ ಮಾಡಲು ಬೇಕಾದ ಅನುಕೂಲ ಕಲ್ಪಿಸಿಕೊಟ್ಟಿದೆ ಎಂದರು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಮೈಮುಲ್ ನಿರ್ದೇಶಕ ಸಿ.ಓಂ.ಪ್ರಕಾಶ್, ಹಾಲು ಸರಬರಾಜು ಮಾಡುವ ರೈತರಿಗೆ ಹಣ ಕಾಸಿನ ಬಟವಾಡೆ ಸಮರ್ಪಕವಾಗಿ ಆಗುತ್ತಿಲ್ಲ ಎಂಬ ಮಾಹಿತಿ ಬಂದಿದ್ದು, ಈ ಸಂಬಂಧ ಒಕ್ಕೂಟದಲ್ಲಿ ಸಭೆ ಸೇರಿ ಹಣ ಕಾಸು ವ್ಯವಸ್ಥೆ ಸರಿಪಡಿಸಲಾಗುವುದು ಎಂದು ಭರವಸೆ ನೀಡಿದರು.

ಕಾರ್ಯಕ್ರಮದಲ್ಲಿ ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕೆ.ವಜ್ರೇಗೌಡ ಹಾಗೂ ಚಾಮುಲ್ ನಿವೃತ್ತ ವ್ಯವಸ್ಥಾಪಕ ಡಾ.ಕೆ.ಬಿ. ಶಿವಪ್ರಸಾದ್ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಮೈಮುಲ್ ನಿರ್ದೇಶಕ ಬಿ.ಎನ್.ಸದಾನಂದ, ಕೆ.ಜಿ.ಮಹೇಶ್, ಕೆ.ಉಮಾಶಂಕರ್, ದಾಕ್ಷಾಯಿಣಿ ಬಸವರಾಜಪ್ಪ ಲೀಲಾ ನಾಗರಾಜು, ನೀಲಾಂಬಿಕೆ ಮಹೇಶ್, ವ್ಯವಸ್ಥಾಪಕ ನಿರ್ದೇಶಕ ಕೆ.ಎನ್. ಸುರೇಶ್ ನಾಯಕ, ವ್ಯವಸ್ಥಾಪಕ ಎಲ್.ಆರ್.ಕರಿ ಬಸವರಾಜು, ಉಪ ವ್ಯವಸ್ಥಾಪಕ ಜಿ.ಎನ್.ಸಂತೋಷ್, ಎನ್. ಸೌಮ್ಯ, ವಿಸ್ತರಣಾಧಿಕಾರಿ ಆರ್.ಪ್ರಮೋದ್, ಎನ್.ದಿವ್ಯಶ್ರೀ, ಸಿ.ಅನಿತಾ, ಕೆ.ಎನ್.ಶೃತಿ, ಎಸ್.ರಂಜಿತಾ, ಎಪಿಎಂಸಿ ಮಾಜಿ ಅಧ್ಯಕ್ಷ ಎಂ.ರಾಜಣ್ಣ, ಕೇತುಪುರ ಕುಳ್ಳೇಗೌಡ, ಕೊಳತ್ತೂರು ಡೈರಿ ಅಧ್ಯಕ್ಷ ಕೆ.ಎನ್. ಕುಮಾರ್, ಕೆಂಪಯ್ಯನಹುಂಡಿ ಡೈರಿ ಅಧ್ಯಕ್ಷ ಮುದ್ದೇಗೌಡ, ವ್ಯಾಸರಾಜಪುರ ಡೈರಿ ಅಧ್ಯಕ್ಷ ರಂಗಪ್ಪ, ಡೈರಿ ಕಾರ್ಯದರ್ಶಿಗಳಾದ ಬೆನಕನಹಳ್ಳಿ ಮಾದಪ್ಪ, ಸೋಸಲೆ ನಿಂಗಯ್ಯ, ಗುರುಪ್ರಸಾದ್, ಎಂ.ಎಸ್. ರವಿ, ಶಿವಕುಮಾರ್ ಬೋವಿ, ಡೈರಿ ಗುರುಮೂರ್ತಿ, ಮಾದಾಪುರ ಮಹೇಶ್, ಹಿರಿಯೂರು ಸತ್ಯಪ್ಪ, ಕೊಳತ್ತೂರು ಸಿದ್ದರಾಜು, ಮೂಗೂರು ನಾಗೇಂದ್ರ, ಹೆಮ್ಮಿಗೆ ಸೋಮಣ್ಣ, ನಾಗರಾಜು ಮತ್ತಿತರಿದ್ದರು.

ಶಾಸಕರಾಗುವ ಅವಕಾಶವಿತ್ತು

"ಚೆಲುವರಾಜು ಮೈಮುಲ್ ಅಧ್ಯಕ್ಷರಾಗಿರುವುದು ಅತಿಶಯೋಕ್ತಿಯಲ್ಲ. ಅವರಿಗಿರುವ ಅರ್ಹತೆಗೆ ಮೈಮುಲ್ ಅಧ್ಯಕ್ಷ ಸ್ಥಾನ ಕಡಿಮೆ. ಅವರಿಗೆ ಶಾಸಕರಾಗುವ ಅವಕಾಶ ಇತ್ತು. ಆದರೆ ತಿ.ನರಸೀಪುರ ಕ್ಷೇತ್ರ ಎಸ್‌ಸಿ ವರ್ಗಕ್ಕೆ ಮೀಸಲಾಗಿರುವುದರಿಂದ ಅದು ಸಾಧ್ಯವಾಗಿಲ್ಲ. ಮುಂದೊಂದು ದಿನ ಅವಕಾಶ ಒದಗಿ ಬರಲಿದೆ.

- ಎ.ಬಿ.ಸೋಮಶೇಖರ್, ಮೈಮುಲ್ ಮಾಜಿ ಅಧ್ಯಕ್ಷ.

ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಗ್ರಾಮಸ್ಥರು ಸಹಕರಿಸಿ

ಹಾರನಹಳ್ಳಿಯಲ್ಲಿ ಸ್ಮಾರ್ಟ್ ಕ್ಲಾಸ್ ಉದ್ಘಾಟನೆ: ಬಿಇಓ ರವಿಪ್ರಸನ್ನ



ಕಾರ್ಯಕ್ರಮದಲ್ಲಿ ಶಾಲೆಗೆ ಪರಿಕರ ನೀಡಿದ ದಾನಿಗಳನ್ನು ಸನ್ಮಾನಿಸಲಾಯಿತು.

ಬೆಟ್ಟದಪುರ, ಆ.26– ಸರ್ಕಾರಿ ಶಾಲೆಗಳಿಗೆ ಡಿಜಿಟಲ್ ಸ್ಪರ್ಶ ನೀಡುವುದರಿಂದ ವಿದ್ಯಾರ್ಥಿಗಳ ಕಲಿಕೆಗೆ ಸಹಕಾರಿಯಾಗುತ್ತದೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ರವಿಪ್ರಸನ್ನ ತಿಳಿಸಿದರು.

ಪಿರಿಯಾಪಟ್ಟಣ ತಾಲೂಕಿನ ಹಾರನಹಳ್ಳಿ ಕರ್ನಾಟಕ ಪಬ್ಲಿಕ್ ಶಾಲೆಯಲ್ಲಿ (ಪ್ರಾಥಮಿಕ ವಿಭಾಗ) ಸ್ಮಾರ್ಟ್ ಕ್ಲಾಸ್ ಉದ್ಘಾಟಿಸಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳ ಅಭಿವೃದ್ಧಿಗೆ ಗ್ರಾಮಸ್ಥರ ಪ್ರೋತ್ಸಾಹದ ಅಗತ್ಯವಿದೆ. ಆ ನಿಟ್ಟಿನಲ್ಲಿ ಸ್ಮಾರ್ಟ್ ಕ್ಲಾಸ್‌ಗೆ ಬೇಕಾಗುವ ಪರಿಕರಗಳನ್ನು ದಾನವಾಗಿ ನೀಡಿರುವ ಹಾರನಹಳ್ಳಿ ಗ್ರಾಮಸ್ಥರಿಗೆ ತಾಲೂಕು ಶಿಕ್ಷಣ ಇಲಾಖೆ ವತಿಯಿಂದ ಧನ್ಯವಾದ ತಿಳಿಸುತ್ತೇನೆ. ಇದೇ ರೀತಿ ತಮ್ಮ ಗ್ರಾಮದ ಶಾಲೆಗಳಿಗೆ ಪ್ರೋತ್ಸಾಹ ನೀಡುವುದರಿಂದ ಸರ್ಕಾರಿ ಶಾಲೆಗಳು ಅಭಿವೃದ್ಧಿಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ ಎಂದರು.

ಇದೇ ವೇಳೆ ಕರ್ನಾಟಕ ಪಬ್ಲಿಕ್ ಶಾಲೆಗೆ ಕಂಪ್ಯೂಟರ್, ಡ್ರಮ್‌ಸೆಟ್, ಸ್ಮಾರ್ಟ್ ಕ್ಲಾಸ್‌ಗೆ ಬೇಕಾಗುವ ಪರಿಕರ ನೀಡಿದ ದಾನಿಗಳನ್ನು ಬಿಇಓ ಸನ್ಮಾನಿಸಿದರು. ಹಾರನಹಳ್ಳಿ ಗ್ರಾಪಂ ಅಧ್ಯಕ್ಷ ಚಂದ್ರೇಗೌಡ, ಎಸ್‌ಡಿಎಂಸಿ ಅಧ್ಯಕ್ಷೆ ಕಾವ್ಯ, ಉಪಾಧ್ಯಕ್ಷ ಮಹೇಶ್, ಕ್ಷೇತ್ರ ಶಿಕ್ಷಣ ಸಮನ್ವಯಾಧಿಕಾರಿ ಶಿವರಾಜ್, ಪ್ರೌಢಶಾಲಾ ಸಹ ಶಿಕ್ಷಕರ ಸಂಘದ ಅಧ್ಯಕ್ಷ ದೇವರಾಜ್, ಸಿಆರ್‌ಪಿ ಮಲ್ಲಿಕಾರ್ಜುನ್, ಹನುಮಂತು, ಕೀರ್ತಿರಾಜ್, ಚಂದ್ರು, ಮುಖ್ಯಶಿಕ್ಷಕ ಕೆ.ಸಿ.ಸತೀಶ್, ಗ್ರಾಮಸ್ಥರಾದ ಗೋವಿಂದೇಗೌಡ, ನಾರಾಯಣ್, ಅನಿತಾ, ಮಧು, ನೂರಲ್ಲಾ ಖಾನ್, ಸೇರಿದಂತೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಹಾಜರಿದ್ದರು.

ಒಳ ಮೀಸಲಾತಿ ಜಾರಿಗೆ ಆದಿಜಾಂಬವ ಸಂಘಟನೆ ಒತ್ತಾಯ



ಸುದ್ದಿಗೋಷ್ಠಿಯಲ್ಲಿ ನಿಂಗರಾಜು ಮಾತನಾಡಿದರು.

ಪಿರಿಯಾಪಟ್ಟಣ, ಆ.26– ಮುಖ್ಯಮಂತ್ರಿ ಸಿದ್ದರಾಮಯ್ಯಗೆ ರಾಜ್ಯ ಆದಿಜಾಂಬವ ಸಂಘಟನೆ ನೈತಿಕ ಬೆಂಬಲ ನೀಡಲಿದ್ದು, ಕೂಡಲೇ ಪರಿಶಿಷ್ಟ ಜಾತಿ, ಪಂಗಡಗಳ ಒಳ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ ನೀಡಿರುವ ತೀರ್ಪನ್ನು ರಾಜ್ಯ ಸರ್ಕಾರ ಶೀಘ್ರ ಜಾರಿಗೊಳಿಸಬೇಕು ಎಂದು ರಾಜ್ಯ ಆದಿಜಾಂಬವ ಕ್ಷೇಮಾಭಿವೃದ್ಧಿ ಸಂಘದ ಮೈಸೂರು ಜಿಲ್ಲಾ ವಿಭಾಗೀಯ ಅಧ್ಯಕ್ಷ ಯಡತೊರೆ ನಿಂಗರಾಜ್ ಒತ್ತಾಯಿಸಿದರು.

ಪಟ್ಟಣದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಪ್ರೀಂಕೋರ್ಟ್‌ನ 7 ಸದಸ್ಯರ ಪೀಠ ಮೀಸಲಾತಿ ಸಂಬಂಧ ಐತಿಹಾಸಿಕ ತೀರ್ಪು ನೀಡಿ ಆಯಾಯ ರಾಜ್ಯ ಸರ್ಕಾರವೇ ಮೀಸಲಾತಿ ವರ್ಗೀಕರಣ ಮಾಡುವ ಹಕ್ಕನ್ನು ನೀಡಿದೆ. ಇಂದಿಗೂ ಸಾಕಷ್ಟು ಸಮುದಾಯಗಳು ರಾಜಕೀಯ, ಆರ್ಥಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿವೆ. ಈ ಬಗ್ಗೆ ಸಾಕಷ್ಟು ಆಯೋಗಗಳು ಅಧ್ಯಯನ ನಡೆಸಿ ಸರ್ಕಾರ ಹಾಗೂ ನ್ಯಾಯಾಲಯಕ್ಕೆ ವರದಿ ನೀಡಿವೆ. ಆದ್ದರಿಂದ ರಾಜ್ಯ ಸರ್ಕಾರ ಶೀಘ್ರದಲ್ಲೇ ಒಳಮೀಸಲಾತಿ ಜಾರಿಗೊಳಿಸಬೇಕಾಗಿ ಅಗ್ರಹಿಸಿದರು.

ಸಂಘದ ಹಿರಿಯ ಮುಖಂಡ ಡಿ.ಕುಮಾರ್ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಶೋಷಿತ ಸಮುದಾಯಗಳ ಅಭಿವೃದ್ಧಿಗೆ ಮಹತ್ವ ಪೂರ್ಣವಾದ ಯೋಜನೆಗಳನ್ನು ಜಾರಿಗೊಳಿಸಿ ನೊಂದವರ ಧ್ವನಿಯಾಗಿದ್ದಾರೆ. ರಾಜ್ಯ ಸರ್ಕಾರ ಶೀಘ್ರ ಮೀಸಲಾತಿ ವರ್ಗೀಕರಣ ಮಾಡಿ ನೈಜ ಸಮಾನತೆ ಕಾಪಾಡಬೇಕು. ಡಿ.ದೇವರಾಜ ಅರಸು ಆದರ್ಶಗಳನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಬೆಂಬಲಕ್ಕೆ ನಮ್ಮ ಸಮುದಾಯವಿದೆ ಎಂದರು.

ಸಂಘದ ಜಿಲ್ಲಾ ಉಪಾಧ್ಯಕ್ಷ ವಿಜಯ್ ಕುಮಾರ್ ಮಾತನಾಡಿ, ಮಾದಿಗ ಸಮುದಾಯ ಪ್ರತಿ ಚುನಾವಣೆಯಲ್ಲೂ ಕಾಂಗ್ರೆಸ್ ಅನ್ನು ಬೆಂಬಲಿಸುತ್ತಾ ಬಂದಿದೆ. ಆದ್ದರಿಂದ ಒಳ ಮೀಸಲಾತಿ ಜಾರಿಗೊಳಿಸಬೇಕು ಎಂದರು. ಸುದ್ದಿಗೋಷ್ಠಿಯಲ್ಲಿ ಸಂಘದ ತಾಲೂಕು ಅಧ್ಯಕ್ಷ ರವಿ, ಕಾರ್ಯದರ್ಶಿ ರಮೇಶ್, ಉಪಾಧ್ಯಕ್ಷ ಕುಮಾರ್, ಖಜಾಂಚಿ ಜಯಸ್ವಾಮಿ, ಮುಖಂಡರಾದ ನಾರಾಯಣ, ಮಾದೇವ, ಸೌರಭ, ಆರ್.ಡಿ.ಚಂದ್ರು, ಬಸವಯ್ಯ ಹಾಜರಿದ್ದರು.

ಮೂಗೂರು ಗ್ರಾಪಂಗೆ ಲೋಕೇಶ್ ಅಧ್ಯಕ್ಷ



ಮೂಗೂರು ಗ್ರಾಪಂ ನೂತನ ಅಧ್ಯಕ್ಷರಾಗಿ ಆಯ್ಕೆ ಎಂ.ಡಿ.ಲೋಕೇಶ್ ಅವರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ/ಮೂಗೂರು, ಆ.26– ತಾಲೂಕಿನ ಮೂಗೂರು ಗ್ರಾಪಂ ನೂತನ ಅಧ್ಯಕ್ಷರಾಗಿ ಎಂ.ಡಿ.ಲೋಕೇಶ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಹಿಂದಿನ ಅಧ್ಯಕ್ಷ ಶಿವಣ್ಣ ಅವರ ರಾಜೀನಾಮೆಯಿಂದ ತೆರವಾಗಿದ್ದ ಸ್ಥಾನಕ್ಕೆ ಸೋಮವಾರ ಗ್ರಾಪಂ ಆವರಣದಲ್ಲಿ ನಡೆದ ಚುನಾವಣೆಯಲ್ಲಿ ಪ.ಪಂಗಡಕ್ಕೆ ಮೀಸಲಾಗಿದ್ದ ಅಧ್ಯಕ್ಷ ಸ್ಥಾನಕ್ಕೆ ಎಂ.ಡಿ. ಲೋಕೇಶ್ ಅವರನ್ನು ಹೊರತುಪಡಿಸಿ ಬೇರೆ ಯಾರೂ ನಾಮಪತ್ರ ಸಲ್ಲಿಸದ ಕಾರಣ ಅವಿರೋಧ ಆಯ್ಕೆಯನ್ನು ಚುನಾವಣಾಧಿಕಾರಿ ಕಾವೇರಿ ನೀರಾವರಿ ನಿಗಮ ಎಇಇ ರತೀಶ್ ಘೋಷಿಸಿದರು. ನೂತನ ಅಧ್ಯಕ್ಷರ ಆಯ್ಕೆಯಾಗುತ್ತಿದ್ದಂತೆ ಬೆಂಬಲಿಗರು ಪಟಾಕಿ ಸಿಡಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಗ್ರಾಪಂನ 25 ಸದಸ್ಯರ ಪೈಕಿ 18 ಸದಸ್ಯರು ಚುನಾವಣೆಯಲ್ಲಿ ಭಾಗವಹಿಸಿದ್ದರು.

ನೂತನ ಅಧ್ಯಕ್ಷ ಎಂ.ಡಿ.ಲೋಕೇಶ್ ಮಾತನಾಡಿ, ಬಿಜೆಪಿ–ಜೆಡಿಎಸ್ ಮೈತ್ರಿಕೂಟ ಬೆಂಬಲಿತ ಸದಸ್ಯರು ಒಮ್ಮತದ ನಿರ್ಧಾರ ಕೈಗೊಂಡು ಅವಿರೋಧವಾಗಿ ಆಯ್ಕೆ ಮಾಡಿದ್ದಾರೆ. ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಅಭಿವೃದ್ಧಿಗೆ ಮತ್ತು ಜನರಿಗೆ ಮೂಲ ಸೌಕರ್ಯ ಕಲ್ಪಿಸಲು ದುಡಿಯುತ್ತೇನೆ ಎಂದರು. ಈ ವೇಳೆ ಉಪಾಧ್ಯಕ್ಷೆ ಎಂ. ಶಾಂತಿರಾಜು, ಸದಸ್ಯರಾದ ಚಂದ್ರಮ್ಮ, ಮಹದೇವಮ್ಮ, ಎಂ.ಪುಟ್ಟಮಾದಯ್ಯ, ಭಾಗ್ಯ, ಎಂ.ಎಸ್.ಗೌರೀಶ್, ರತ್ನಮ್ಮ, ಎಂ.ಬಿ.ಮಹೇಶ, ಟಿ.ಎಂ.ಚೇತನ್, ಆಶಾ, ಲಕ್ಷ್ಮಿ, ರೋಜ, ನಾಗಮ್ಮ, ಸವಿತ, ಬಿ.ಎಸ್.ತಂಗಮ್ಮ, ಪಿಡಿಓ ಎಸ್.ಪ್ರಕಾಶ್, ಕಾರ್ಯದರ್ಶಿ ದೀಪಾ, ಜವರೇಗೌಡ, ಮಾಜಿ ಅಧ್ಯಕ್ಷ ಎಂ.ಜಗದೀಶ್ ಮೂರ್ತಿ, ತಾಪಂ ಮಾಜಿ ಸದಸ್ಯ ಎಂ.ಚಂದ್ರಶೇಖರ್, ಪಿಎಸಿಎಸ್ ಅಧ್ಯಕ್ಷ ಮಹೇಂದ್ರಕುಮಾರ್, ಮಾಜಿ ಅಧ್ಯಕ್ಷ ಎಂ.ಆರ್.ಸುಂದರ್, ಮುಖಂಡರಾದ ಎಂ.ಪಿ.ಮರಿಸ್ವಾಮಿ, ಎಂ.ಸಿದ್ದರಾಜು, ಮಂಟಯ್ಯ, ಅರವಿಂದ, ಎಂ.ಕೆ.ಸಿದ್ದರಾಜು, ಶಿವಶಂಕರ್, ಕೆಂಚನಾಯಕ, ಮಹೇಶ್, ಹರೀಶ್, ಹೊಸಹಳ್ಳಿ ಚಿನ್ನಸ್ವಾಮಿ ಇನ್ನಿತರರಿದ್ದರು.

ಇಂದು ಜಮಾಬಂಧಿ ಕಾರ್ಯಕ್ರಮ

ಬೆಟ್ಟದಪುರ, ಆ.26– ಇಲ್ಲಿನ ಗ್ರಾಪಂ ಆವರಣದಲ್ಲಿ ಆ.27ರಂದು ಬೆಳಗ್ಗೆ 11 ಗಂಟೆಗೆ ಅಧ್ಯಕ್ಷ ರಾಜಶೇಖರ್ ಅಧ್ಯಕ್ಷತೆಯಲ್ಲಿ, ಜಿಲ್ಲಾ ಯೋಜನಾ ನಿರ್ದೇಶಕ ಪ್ರಭುಸ್ವಾಮಿ ಮಾರ್ಗದರ್ಶನದಲ್ಲಿ ಜಮಾಬಂಧಿ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮದಲ್ಲಿ ಗ್ರಾಪಂನಲ್ಲಿ ನಡೆದಿರುವ ಕಾಮಗಾರಿಗಳ ಗುಣಮಟ್ಟ ಹಾಗೂ ವೆಚ್ಚದ ಬಗ್ಗೆ ಮಾಹಿತಿ ನೀಡಲಾಗುವುದು. ಗ್ರಾಪಂ ಉಪಾಧ್ಯಕ್ಷರು, ಸದಸ್ಯರು ಸೇರಿದಂತೆ ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುವಂತೆ ಪಿಡಿಓ ಮಂಜುನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೈಕೋರ್ಟ್ ತೀರ್ಪು ಸಿಎಂ ಪರ ಬರಲೆಂದು ಸಿದ್ದರಾಮಯ್ಯ ಅಭಿಮಾನಿಗಳಿಂದ ವಿಶೇಷ ಪೂಜೆ



ಸಿದ್ದರಾಮಯ್ಯ ಅಭಿಮಾನಿಗಳು ಬೀರೇಶ್ವರ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.


ನಂಜನಗೂಡು, ಆ.26– ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲರು ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಸಲ್ಲಿಸಿರುವ ರಿಟ್ ಅರ್ಜಿ ಕುರಿತ ಹೈಕೋರ್ಟ್ ತೀರ್ಪು ಸಿದ್ದರಾಮಯ್ಯ ಪರ ಬರಲಿ ಎಂದು ಅಭಿಮಾನಿಗಳು ಸೋಮವಾರ ತಾಲೂಕಿನ ತಾಂಡವಪುರದಲ್ಲಿ ಬೀರೇಶ್ವರಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಈ ವೇಳೆ ಕಾಂಗ್ರೆಸ್ ಮುಖಂಡ ದಕ್ಷಿಣಮೂರ್ತಿ ಮಾತನಾಡಿ, ಮುಖ್ಯಮಂತ್ರಿ ಸಿದ್ದರಾಮಯ್ಯ ವಿರುದ್ಧ ರಾಜ್ಯಪಾಲ ಥಾವರ್ ಚಂದ್ ಗ್ಲೆಹೋಟ್ ಕ್ಷುಲ್ಲಕ ಕಾರಣ ನೀಡಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ಆ ಮೂಲಕ 135 ಶಾಸಕರ ಬಹುಮತ ಹೊಂದಿದ ರಾಜ್ಯ ಸರ್ಕಾರವನ್ನು ಕೆಡವಲು ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದೊಂದಿಗೆ ಷಡ್ಯಂತ್ರ ರಚಿಸಿದ್ದಾರೆ. ತಮ್ಮ ಜಮೀನಿಗೆ ಬದಲಿಗೆ ಮುಡಾದಿಂದ ದೊರೆತ ನಿವೇಶನ ನ್ಯಾಯಯುತವಾಗಿದೆ. ಆದರೂ ಸಹ ಮುಖ್ಯಮಂತ್ರಿಯವರನ್ನು ಸಂಚಿನಲ್ಲಿ ಸಿಲುಕಿಸಿದ್ದಾರೆ. ಪ್ರಾಸಿಕ್ಯೂಷನ್ ಅನುಮತಿ ವಿಚಾರ ಕುರಿತ ತೀರ್ಪು ಆ.29ಕ್ಕೆ ಬರಲಿದ್ದು, ಅದು ಮುಖ್ಯಮಂತ್ರಿ ಸಿದ್ದರಾಮಯ್ಯ ಪರ ಬರಲಿ, ಸತ್ಯ ಗೆಲ್ಲಲಿ ಎಂದು ಬೀರೇಶ್ವರಸ್ವಾಮಿಗೆ ವಿಶೇಷ ಪೂಜೆ ಸಲ್ಲಿಸಲಾಗಿದೆ ಎಂದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಅಂದಾನಿಗೌಡ, ಅರುಣಕುಮಾರ್, ಸಿದ್ದಪ್ಪ, ಅಹಲ್ಯ ಪ್ರಭು, ಮಾಲೇಗೌಡ, ಮಹದೇವ, ಗುರು, ಬೀರಲಿಂಗ, ರಾಕೇಶ್, ಚಂದ್ರು, ಚಿಕ್ಕಣ, ಮಹೇಶ, ಸಂಪತ್ ಕುಮಾರ್, ಮಂಜು, ತಮ್ಮಯ್ಯ, ಸೇರಿದಂತೆ ಕಾಂಗ್ರೆಸ್ ಮುಖಂಡರು, ಗ್ರಾಮಸ್ಥರಿದ್ದರು.

ಸನ್ಮಾನ...

ಹೆಚ್.ಡಿ.ಕೋಟೆ ತಾಲೂಕಿನ ಪಂಚ ಗ್ಯಾರಂಟಿ ಯೋಜನೆ ಅನುಷ್ಠಾನ ಸಮಿತಿಗೆ ನೇಮಕವಾಗಿರುವ ಚಲುವರಾಜು ಅವರನ್ನು ಸಿಂಡಿಕೇಟ್ ಸದಸ್ಯ ಕ್ಯಾತನಹಳ್ಳಿ ನಾಗರಾಜು, ಕಾಂಗ್ರೆಸ್ ಹಿಂದುಳಿದ ವರ್ಗಗಳ ರಾಜ್ಯ ಪ್ರಧಾನ ಕಾರ್ಯದರ್ಶಿ ಬೈಪಾಸ್ ಮಂಜು, ಗ್ರಾಪಂ ಉಪಾಧ್ಯಕ್ಷ ಪ್ರಸನ್ನಕುಮಾರ್, ಮಾಜಿ ಸದಸ್ಯ ಕೆ.ಬಿ.ಮಹದೇವಪ್ಪ, ವಿಶ್ವವಿದ್ಯಾನಿಲಯದ ಸಂಶೋಧಕರ ಸಂಘದ ಅಧ್ಯಕ್ಷ ಶಿವಶಂಕರ್, ಮುಖಂಡ ಲೋಕೇಶ ನಾಯಕ ಸನ್ಮಾನಿಸಿದರು.



ಭೂ ನ್ಯಾಯ ಮಂಡಳಿಗೆ ನಾಮ ನಿರ್ದೇಶನ



ಉಮೇಶ್



ಕೆ.ಎಸ್.ಗಣೇಶ್



ಅನ್ನದಾನಿ



ಶಿವಮೂರ್ತಿ

ತಿ.ನರಸೀಪುರ, ಆ.26– ತಾಲೂಕು ಭೂ ನ್ಯಾಯ ಮಂಡಳಿಗೆ ತಾಪಂ ಮಾಜಿ ಅಧ್ಯಕ್ಷ ಹ್ಯಾಕನೂರು ಹೆಚ್.ಎನ್.ಉಮೇಶ್, ಕುಕ್ಕೂರು ಕೆ.ಎಸ್.ಗಣೇಶ್, ತುಂಬಲ ಅಂದಾನಿ ಹಾಗೂ ಟಿ.ಮೇಗಡಹಳ್ಳಿ ಶಿವಮೂರ್ತಿ ಅವರನ್ನು ಅಧಿಕಾರೇತರ ಸದಸ್ಯರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ. ಮೈಸೂರು ಉಪವಿಭಾಗದ ಸಹಾಯಕ ಆಯುಕ್ತರು ಅಧ್ಯಕ್ಷರಾಗಿ ಹಾಗೂ ತಹಸೀಲ್ದಾರರು ಸದಸ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಲಿದ್ದಾರೆ ಎಂದು ಕಂದಾಯ ಇಲಾಖೆ(ಭೂ ಸುಧಾರಣೆ)ಯ ಸರ್ಕಾರದ ಅಧೀನ ಕಾರ್ಯದರ್ಶಿ ಆರ್.ಗೌರಮ್ಮ ತಿಳಿಸಿದ್ದಾರೆ.

ಆ.31ರೊಳಗೆ ಇ–ಕೆವೈಸಿಗೆ ಮನವಿ

ಹೆಚ್.ಡಿ.ಕೋಟೆ, ಆ.26– ಅಂತ್ಯೋದಯ(ಎವೈ), ಆದ್ಯತಾ (ಬಿಪಿಎಲ್), ಆದ್ಯತೇತರ(ಎಪಿಎಲ್) ಪಡಿತರ ಚೀಟಿದಾರರು ಆ.31ರೊಳಗೆ ಇ–ಕೆವೈಸಿ ಮಾಡಿಸಿಕೊಳ್ಳಬೇಕು ಎಂದು ತಹಸೀಲ್ದಾರ್ ಶ್ರೀನಿವಾಸ್ ಮನವಿ ಮಾಡಿದ್ದಾರೆ.

ಸರ್ಕಾರದ ಆದೇಶದಂತೆ ನಿಮ್ಮ ಪಡಿತರ ಚೀಟಿಗಳಲ್ಲಿ ಇ–ಕೆವೈಸಿ ಆಗದಿರುವ ಸದಸ್ಯರ ಹೆಸರನ್ನು ನಿಮ್ಮ ವ್ಯಾಪ್ತಿಯ ನ್ಯಾಯಬೆಲೆ ಅಂಗಡಿಗಳಲ್ಲಿ ಪ್ರದರ್ಶಿಸಲಾಗಿದೆ. ಹೀಗಾಗಿ ಆ.31ರೊಳಗೆ ಹತ್ತಿರದ ನ್ಯಾಯಬೆಲೆ ಅಂಗಡಿಗೆ ಹೋಗಿ ಇ–ಕೆವೈಸಿ ಮಾಡಿಸಿಕೊಳ್ಳಬೇಕು. ಒಂದು ವೇಳೆ ಇ–ಕೆವೈಸಿ ಮಾಡಿಸಿಕೊಳ್ಳದಿದ್ದರೆ ಅಂತಹ ಸದಸ್ಯರ ಹೆಸರನ್ನು ಪಡಿತರ ಚೀಟಿಯಿಂದ ತೆಗೆದು ಹಾಕಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಶ್ರೀಕೃಷ್ಣನ ಸಂಸ್ಕಾರ, ಸದ್ಗುಣ ಬೆಳೆಸಿಕೊಳ್ಳಿ



ಗುರುಕುಲ ಶಾಲೆಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ.

ನಂಜನಗೂಡು, ಆ.26– ವಿದ್ಯಾರ್ಥಿಗಳು ಚಿಕ್ಕ ವಯಸ್ಸಿನಲ್ಲೇ ನಯ, ವಿನಯ, ಸದ್ಗುಣಗಳನ್ನು ಬೆಳೆಸಿಕೊಳ್ಳಬೇಕು ಎಂದು ದಳವಾಯಿ ಪ್ರೌಢಶಾಲೆ ಮುಖ್ಯಶಿಕ್ಷಕಿ ಲಲಿತಾ ತಿಳಿಸಿದರು.

ನಗರದ ಗುರುಕುಲ ಶಾಲೆಯಲ್ಲಿ ನಡೆದ ಶ್ರೀಕೃಷ್ಣ ಜನ್ಮಾಷ್ಟಮಿ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಕೃಷ್ಣ ಜನ್ಮಾಷ್ಟಮಿ ದಿನದಂದು ಶ್ರೀಕೃಷ್ಣನ ಆರಾಧನೆ ನಿಮ್ಮೆಲ್ಲಾ ದುಃಖಗಳನ್ನು ದೂರಾಗಿಸಿ, ಸಂತೋಷ, ನೆಮ್ಮದಿ, ಸಮೃದ್ಧಿ ಕರುಣಿಸುತ್ತದೆ. ಅಂತೆಯೇ ವಿದ್ಯಾರ್ಥಿಗಳು ಶ್ರೀಕೃಷ್ಣನ ಸಂಸ್ಕಾರ, ಸದ್ಗುಣಗಳನ್ನು ಜೀವನದಲ್ಲಿ ಬೆಳೆಸಿಕೊಳ್ಳಬೇಕು. ಜೊತೆಗೆ ಗುರು ಹಿರಿಯರಿಗೆ ಗೌರವ ಕೊಡುವುದನ್ನು ಕಲಿಯಬೇಕು ಎಂದು ಕಿವಿಮಾತು ಹೇಳಿದರು. ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳು ಶ್ರೀಕೃಷ್ಣ, ರಾಧೆ ವೇಷಧಾರಿಯಾಗಿ ಕಾಣಿಸಿಕೊಂಡಿದ್ದು ಎಲ್ಲರ ಗಮನ ಸೆಳೆಯುವಂತಿತ್ತು. ವಿದ್ಯಾರ್ಥಿಗಳು ಚಾಕ್ಲೆಟ್ ತುಂಬಿದ ಮಡಿಕೆ ಹೊಡೆಯುವ ಮೂಲಕ ಶ್ರೀಕೃಷ್ಣ ಜನ್ಮಾಷ್ಟಮಿಯನ್ನು ಸಂಭ್ರಮದಿಂದ ಆಚರಿಸಿದರು. ಕಾರ್ಯಕ್ರಮದಲ್ಲಿ ಶ್ರೀಕಂಠಯ್ಯ, ರವಿ, ರಜನಿ, ಸೇರಿದಂತೆ ಶಾಲಾ ಶಿಕ್ಷಕರು ಮತ್ತು ಪೋಷಕರು ಇದ್ದರು.

ನಂ.ಗೂಡು, ಕೋಟೆ, ಹುಣಸೂರಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಸಂಭ್ರಮ

ಶ್ರೀಕೃಷ್ಣನ ನೀತಿ ತಿಳಿದು ಆತನ ಹಾದಿಯಲ್ಲಿ ಸಾಗಿ

ಸಹಾಯಕ ಪ್ರಾಧ್ಯಾಪಕಿ ಬೋರಮ್ಮ ಹೆಚ್.ಅಂಗಡಿ



ಚಿತ್ರದಲ್ಲಿ ಕೃಷ್ಣ ಹಾಗೂ ರಾಧೆ ವೇಷ ಧರಿಸಿದ್ದ ಮಕ್ಕಳನ್ನು ಕಾಣಬಹುದು



ಹೆಚ್.ಡಿ.ಕೋಟೆ, ಆ.26– ಶ್ರೀಕೃಷ್ಣ ಜನ್ಮಾಷ್ಟಮಿ ಮಕ್ಕಳ ವೇಷಭೂಷಣ ಸ್ಪರ್ಧೆಗಷ್ಟೇ ಸೀಮಿತವಾಗದೇ, ಶ್ರೀಕೃಷ್ಣನ ನೀತಿಗಳನ್ನು ತಿಳಿದು ಆತನ ಹಾದಿಯಲ್ಲಿ ನಡೆಯಬೇಕಿದೆ ಎಂದು ಪಟ್ಟಣದ ಪ್ರಥಮ ದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕಿ ಬೋರಮ್ಮ ಹೆಚ್. ಅಂಗಡಿ ತಿಳಿಸಿದರು.

ಪಟ್ಟಣದ ಬಿಜಿಎಸ್ ಸಮುದಾಯ ಭವನದಲ್ಲಿ ಪಟ್ಟಣದ ಆದಿಚುಂಚನಗಿರಿ ಕಿರಿಯ, ಹಿರಿಯ ಪ್ರಾಥಮಿಕ ಮತ್ತು ಪ್ರೌಢಶಾಲೆ ವತಿಯಿಂದ ಆಯೋಜಿಸಿದ್ದ ಶ್ರೀಕೃಷ್ಣನ ಜನ್ಮಾಷ್ಟಮಿ ಕಾರ್ಯಕ್ರಮವನ್ನು ಮುದ್ದು ಕೃಷ್ಣನನ್ನು ತೊಟ್ಟಿಲಿಗೆ ಹಾಕಿ ತೂಗುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಶ್ರೀಕೃಷ್ಣ ಮತ್ತು ಸುಧಾಮನ ಗೆಳತನ ಇಡೀ ವಿಶ್ವಕ್ಕೆ ಮಾದರಿ. ಅಂತಸ್ತಿನ ಅಂತರ ಮರೆತು ನಾವಿಬ್ಬರೂ ಒಂದೇ ಎಂದು ಬದುಕಿದ ಗೆಳೆತನವದು. ಅಂತಹ ಕೃಷ್ಣನ ಕತೆಗಳನ್ನು ಹೇಳುತ್ತಾ ಅದರಂತೆ ನಡೆಯಲು ಪೋಷಕರು ಮಕ್ಕಳಿಗೆ ತಿಳಿ ಹೇಳಬೇಕು ಎಂದರು.

ಅರ್ಜುನನಿಗೆ ಭಗವದ್ಗೀತೆ ಭೋದಿಸುವ ಸಮಯದಲ್ಲಿ ಕಾಲಕ್ಕೆ ತಕ್ಕಂತೆ ಒಳ್ಳೆ ಕೆಲಸ ಮಾಡುತ್ತಾ ನಡೆಯುವ ದೃಢ ನಿರ್ಧಾರದ ಬಗ್ಗೆ ಅರ್ಥಪೂರ್ಣವಾಗಿ ಹೇಳಲಾಗಿದೆ. ಅವುಗಳನ್ನು ನಾವು ಅನುಸರಿಸಿದ್ದೇ ಆದಲ್ಲಿ ನಮ್ಮ ಭಾರತ ವಿಶ್ವಗುರುವಾಗಲಿದೆ ಎಂದರು.

ಕೃಷ್ಣನ ಬಗ್ಗೆ ಸಾವಿರಾರು ಆದರ್ಶ ವ್ಯಕ್ತಿತ್ವವುಳ್ಳ ಉಪಕತೆಗಳಿವೆ. ಅಂತಹ ಕತೆಗಳನ್ನು ಮಕ್ಕಳಿಗೆ ಅರ್ಥವಾಗುವ ರೀತಿ ಹೇಳಿದರೆ ಮಕ್ಕಳು ಅದೇ ರೀತಿ ಬೆಳೆಯಲು ಸಹಕಾರಿಯಾಗಲಿದೆ ಎಂದರು.

ವಿದ್ಯಾಸಂಸ್ಥೆ ಗೌರವ ಆಡಳಿತಾಧಿಕಾರಿ ಪ್ರೊ.ಕೆ.ಪಿ.ಬಸವೇಗೌಡ ಮಾತನಾಡಿ, ಶ್ರೀಕೃಷ್ಣನನ್ನು ಇಡೀ ವಿಶ್ವವೇ ಮೆಚ್ಚಿ ಕೊಂಡಾಡುತ್ತಿದೆ. ವಿದೇಶಗಳಲ್ಲೂ ಸಹ ಕೃಷ್ಣನ ದೇವಾಲಯಗಳಿದ್ದು, ಪೂಜಾ ಪುರಸ್ಕಾರಗಳು, ಆರಾಧನೆಗಳು ಸಹ ಅದ್ದೂರಿಯಾಗಿ ನಡೆಯುತ್ತಿವೆ ಎಂದರು.

ಇದೇ ವೇಳೆ ಮಕ್ಕಳು ಮುದ್ದುಕೃಷ್ಣ ಹಾಗೂ ರಾಧೆ ವೇಷಗಳನ್ನು ಧರಿಸಿದ್ದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ಕಾರ್ಯಕ್ರಮದಲ್ಲಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲ ಡಾ.ಜೆ.ಎನ್. ವೆಂಕಟೇಶ್, ಪಿಯು ಕಾಲೇಜಿನ ಪ್ರಾಂಶು ಭೈರೇಗೌಡ, ಪ್ರೌಢಶಾಲಾ ಮುಖ್ಯೋಪಾಧ್ಯಾಯ ಭೈರಪ್ಪ, ಪ್ರಾಥಮಿಕ ಶಾಲೆ ಮುಖ್ಯೋಪಾಧ್ಯಾಯಿನಿ ನಂದಿನಿ, ಪತ್ರಕರ್ತ ಸಂಘದ ಅಧ್ಯಕ್ಷ ಕಬಿನಿ ಮಂಜು, ಶಿಕ್ಷಕರಾದ ಸಂತೋಷ್, ಚೈತ್ರ, ಸ್ವಾಮಿನಾಯಕ, ರಾಜೇಗೌಡ, ಶಿವಕುಮಾರ್, ಶಿಲ್ಪ, ಶಿಲ್ಪಶ್ರೀ, ಟಿ.ವಿ.ಮಂಜುಳಾ, ಅಂಜಲಿ, ಸಮೀನ ಬಾನು, ಪುಷ್ಪಕುಮಾರಿ, ಪಾರ್ವತಿ, ಸುಮಿತ್ರ ಸುಮ, ಪೋಷಕರು ಹಾಜರಿದ್ದರು.

ಶ್ರೀಕೃಷ್ಣ ಜನ್ಮಾಷ್ಟಮಿ: ವಿಶೇಷ ಪೂಜೆ



ಹುಣಸೂರಿನ ಶ್ರೀಕೃಷ್ಣ ದೇವಾಲಯದಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ನಡೆಯಿತು.

ಹುಣಸೂರು, ಆ.26– ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಸೋಮವಾರ ನಗರದ ಅರಣ್ಯ ಇಲಾಖೆ ಆವರಣದಲ್ಲಿರುವ ಶ್ರೀಕೃಷ್ಣ ಮಂದಿರದಲ್ಲಿ ವಿಶೇಷ ಪೂಜಾ ಕೈಂಕರ್ಯ ನಡೆಯಿತು. ಮುಂಜಾನೆಯೇ ದೇವಾಲಯದಲ್ಲಿ ಶ್ರೀಕೃಷ್ಣನಿಗೆ ಅಭಿಷೇಕ ಸೇರಿದಂತೆ ವಿಶೇಷವಾಗಿ ಅಲಂಕಾರ ಮಾಡಿ ಪೂಜೆ ಸಲ್ಲಿಸಿ ಭಕ್ತರ ದರ್ಶನಕ್ಕೆ ಅನುವು ಮಾಡಿಕೊಡಲಾಗಿತ್ತು. ಬಳಿಕ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಯಿತು. ಸಂಜೆ 6 ಗಂಟೆಗೆ ವಿಶೇಷ ಪೂಜೆ ಸಲ್ಲಿಸಲಾಯಿತು. ಇದೇ ವೇಳೆ ಕಲ್ಕುಣಿಕೆ ಶ್ರೀನಿವಾಸ್ ತಂಡ ಶ್ರೀಕೃಷ್ಣ ಭಕ್ತಿ ಗೀತೆಗಳನ್ನು ಹಾಡಿದರು.

ಶ್ರೀಕೃಷ್ಣ ವೇಷಧಾರಿ: ಕಲ್ಕುಣಿಕೆ ಹೌಸಿಂಗ್ ಬೋರ್ಡ್ ಕಾಲೋನಿ ನಿವಾಸಿ, ನಗರದ ಕಾವೇರಿ ಶಾಲೆ ವಿದ್ಯಾರ್ಥಿ ಧನುಷ್ ಶ್ರೀಕೃಷ್ಣ ವೇಷಧಾರಿಯಾಗಿ ದೇವರ ಗರ್ಭಗುಡಿಯ ಮುಂದೆ ನಿಂತು ಶ್ರೀಕೃಷ್ಣನ ದರ್ಶನಕ್ಕೆ ಬರುವ ಭಕ್ತರಿಗೆ ಶ್ರೀಕೃಷ್ಣನಂತೆ ದರ್ಶನ ನೀಡಿ ಎಲ್ಲರ ಗಮನ ಸೆಳೆದಿದ್ದು ವಿಶೇಷವಾಗಿತ್ತು. ಶ್ರೀಕೃಷ್ಣ ಜನ್ಮಾಷ್ಟಮಿ ಪ್ರಯುಕ್ತ ಬೆಳಗ್ಗೆಯಿಂದ ರಾತ್ರಿವರೆಗೂ ಸಾವಿರಾರು ಭಕ್ತರು ದೇವಾಲಯಕ್ಕೆ ಆಗಮಿಸಿ ಶ್ರೀಕೃಷ್ಣನ ದರ್ಶನ ಪಡೆದು ಪುನೀತರಾದರು.

ಮುಡಾ ನಿವೇಶನ ಹಗರಣ

ಮುಖ್ಯಮಂತ್ರಿ ಸಿದ್ದರಾಮಯ್ಯ ಸಣ್ಣ ತಪ್ಪೂ ಮಾಡಿಲ್ಲ; ಅವರ ರಾಜೀನಾಮೆ ಅನಗತ್ಯ

●ಗ್ಯಾರಂಟಿ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ. ಪುಷ್ಪಾ ಅಮರ್‌ನಾಥ್ ಸ್ಪಷ್ಟನೆ ●ರಾಜ್ಯಪಾಲರು ಬಿಜೆಪಿ ಏಜೆಂಟರಂತೆ ವರ್ತಿಸುತ್ತಿದ್ದಾರೆ; ಖಂಡನೆ

ಮೈಸೂರು,ಆ.26(ಎಂಟಿವೈ)– ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಯಾವುದೇ ಸಣ್ಣ ತಪ್ಪನ್ನೂ ಮಾಡದೇ ಇರುವುದರಿಂದ ಅವರು ರಾಜೀನಾಮೆ ನೀಡುವ ಪ್ರಮೇಯವೇ ಒದಗಿ ಬರುವುದಿಲ್ಲ ಎಂದು ರಾಜ್ಯ ಸರ್ಕಾರದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಸ್ಪಷ್ಟಪಡಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಟ್ ಅವರು ಕೇಂದ್ರ ಸರ್ಕಾರದ ಕೈಗೊಂಬೆಯಾಗಿ, ಮುಡಾ ನಿವೇಶನ ಹಂಚಿಕೆ ಪ್ರಕರಣದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪಾತ್ರವಿಲ್ಲದೇ ಇದ್ದರೂ, ಪ್ರಕರಣದ ಸತ್ಯಾಸತ್ಯತೆ ಅರಿಯದೇ ಖಾಸಗಿ ವ್ಯಕ್ತಿ ನೀಡಿದ ದೂರನ್ನು ಪರಿಗಣಿಸಿ ಕೆಲವೇ ಗಂಟೆಯಲ್ಲಿ ಶೋಕಾಸ್ ನೋಟಿಸ್ ನೀಡಿ, ನಂತರ ತರಾತುರಿಯಲ್ಲಿ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡಿದ್ದಾರೆ. ರಾಜ್ಯಪಾಲರು ಬಿಜೆಪಿ ನಾಯಕರಂತೆ ವರ್ತಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಅಧಿಕಾರ ದುರುಪಯೋಗ ಹಾಗೂ ಪ್ರಭಾವ ಬೀರಿರುವ ಬಗ್ಗೆ ಯಾವುದೇ ದಾಖಲೆ, ಸಾಕ್ಷಿ ಇಲ್ಲದಿದ್ದರೂ ಬಿಜೆಪಿ–ಜೆಡಿಎಸ್ ನಾಯಕರು ಸಿಎಂ ವಿರುದ್ಧ ಮುಗಿಬಿದ್ದಿದ್ದಾರೆ. ಇದಕ್ಕೆ ರಾಜ್ಯಪಾಲರ ನಡೆ ಸಾಥ್ ನೀಡುವಂತಿದೆ ಎಂದು ಕಿಡಿಕಾರಿದರು.



ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಉಪಾಧ್ಯಕ್ಷೆ ಡಾ.ಪುಷ್ಪ ಅಮರನಾಥ್ ಸುದ್ದಿಗೋಷ್ಠಿ ನಡೆಸಿದರು

ಮುಡಾ ಪ್ರಕರಣದಲ್ಲಿ ಸಿಎಂ ಸಿದ್ದರಾಮಯ್ಯ ಅವರ ತಲೆದಂಡ ಅನ್ನುವುದು ಸುಳ್ಳು ಅವರ ಬದಲಾವಣೆ ಇಲ್ಲ. ರಾಜೀನಾಮೆ ಕೊಡುವ ಪ್ರಶ್ನೆಯೂ ಇಲ್ಲ. ರಾಜ್ಯಪಾಲರು ತರಾತುರಿಯಲ್ಲಿ ಬಿಜೆಪಿ ನಾಯಕರು ಮಾತು ಕೇಳಿ ಪ್ರಾಸಿಕ್ಯೂಷನ್‌ಗೆ ಅನುಮತಿ ಕೊಟ್ಟಿದ್ದಾರೆ. ಕೇಂದ್ರ ಸಚಿವ ಹೆಚ್.ಡಿ ಕುಮಾರಸ್ವಾಮಿ ವಿರುದ್ದ ಲೋಕಾಯುಕ್ತದಿಂದ ಪ್ರಾಸಿಕ್ಯೂಷನ್‌ಗೆ ಅನುಮತಿ ಕೋರಿದ್ದಾರೆ. ಆದರೆ ವರ್ಷವಾದರೂ ರಾಜ್ಯಪಾಲರು ಅನುಮತಿ ನೀಡಿಲ್ಲ. ಮಾಜಿ ಸಚಿವರಾದ ಶಶಿಕಲಾ ಜೊಲ್ಲೆ, ಮುರುಗೇಶ್ ನಿರಾಣಿ, ಜನಾರ್ಧನ ರೆಡ್ಡಿ ಮೇಲಿರುವ ಪ್ರಕರಣಗಳಿಗೆ ಸಂಬಂಧಿಸಿದಂತೆಯೂ ಪ್ರಾಸಿಕ್ಯೂಷನ್‌ಗೆ ಅನುಮತಿ ನೀಡದೇ ಇರುವುದು ರಾಜ್ಯಪಾಲರು ಯಾರ ಕೈಗೊಂಬೆಯಾಗಿ ಕೆಲಸ ಮಾಡುತ್ತಿದ್ದಾರೆ ಎಂದು ತಿಳಿಯುತ್ತದೆ ಎಂದರು.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ರಾಜ್ಯ ಸರ್ಕಾರ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳಿಗೂ ಮಹಿಳೆಯರಿಗೂ ಅವಿನಾವಭಾವ ಸಂಬಂಧ ಇದೆ. '5ಜಿ' ಗ್ಯಾರಂಟಿ ಯೋಜನೆಗಳು ಮನೆ ಮಾತಾಗಿವೆ. ವಿರೋಧ ಪಕ್ಷಗಳು ಗ್ಯಾರಂಟಿ ಯೋಜನೆಯಿಂದ ಕಷ್ಟ ಆಗಿದೆ ಎಂದು ಚರ್ಚೆ ಮಾಡುತ್ತಿದ್ದಾರೆ. ಈ ಯೋಜನೆಗಳನ್ನು ನಿಲ್ಲಿಸುತ್ತಾರೆ ಎಂದು ಕಥೆ ಕಟ್ಟುತ್ತಿದ್ದಾರೆ. ಆದರೆ, ಸಿಎಂ ಸಿದ್ದರಾಮಯ್ಯ ಅವರೇ ಗ್ಯಾರಂಟಿ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಗ್ಯಾರಂಟಿ ಸಮಿತಿಗೆ ಸಂಬಂಧಪಟ್ಟಂತೆ ತಾಲೂಕು ಮಟ್ಟದ ಅಧ್ಯಕ್ಷರನ್ನು ನೇಮಕ ಮಾಡುತ್ತೇವೆ. ಇದರಲ್ಲಿ 21 ಜನ ಸದಸ್ಯರು ಇರುತ್ತಾರೆ. ಜಿಲ್ಲಾ ಪಂಚಾಯತ್ ಸಿಇಓ ನೋಡಲ್ ಅಧಿಕಾರಿ ಆಗಿರುತ್ತಾರೆ. ತಾಲೂಕು ಕೇಂದ್ರದಲ್ಲಿ ತಾಲೂಕು ಪಂಚಾಯತ್ ಇಓ ನೋಡಲ್ ಅಧಿಕಾರಿ ಆಗಿರುತ್ತಾರೆ. ಮುಂದೆ ನಾವೆಲ್ಲ ಗ್ಯಾರಂಟಿಗಳ ಬಗ್ಗೆ ಚರ್ಚಿಸುತ್ತೇವೆ ಎಂದರು.

ದೇಶದಲ್ಲಿ ನಮ್ಮ ಸಮಾಜದಲ್ಲಿ ಹೆಣ್ಣು ಎಷ್ಟು ಸುರಕ್ಷಿತ ಎಂಬ ಪ್ರಶ್ನೆ ಕಾಡುತ್ತಿದೆ. ಹೆಣ್ಣು ಮಕ್ಕಳ ಕೊಲೆ, ದೌರ್ಜನ್ಯ ನೋಡಿದರೆ ಸರಕಾರದ ಜೊತೆಗೆ ಸಮಾಜವು ಕೂಡ ಕೈ ಜೋಡಿಸಬೇಕು. ಕಾನೂನಿನಲ್ಲಿ ಉಗ್ರ ಶಿಕ್ಷೆ ಆಗಬೇಕು. ಅತ್ಯಾಚಾರಿಗಳನ್ನು ರಕ್ಷಣೆ ಮಾಡುವ ಯಾರೇ ಆಗಲಿ ಅವರನ್ನು ಸದೆ ಬಡಿಯಬೇಕು. ಮಹಿಳಾ ಮೀಸಲಾತಿಗೆ ತರಾತುರಿಯಲ್ಲಿ ಕೇಂದ್ರದ ಬಿಜೆಪಿ ಬಿಲ್ ಮಂಡನೆ ಮಾಡಿತ್ತು. ಆದರೆ ಕಾರ್ಯರೂಪಕ್ಕೆ ಯಾವಾಗ ಬರುತ್ತೆ.ಶೀಘ್ರ ಕೇಂದ್ರ ಸರಕಾರ ಜಾರಿ ಮಾಡಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಅರುಣ್ ಕುಮಾರ್, ಪುಷ್ಪಲತಾ ಚಿಕ್ಕಣ್ಣ, ಪುಷ್ಪವಲ್ಲಿ, ಕೆ.ಮಾರುತಿ ಇದ್ದರು.

ಮೈಸೂರು ಜಿಲ್ಲಾಡಳಿತದಿಂದ ಶ್ರೀ ಕೃಷ್ಣ ಜನ್ಮಾಷ್ಟಮಿ



ಮೈಸೂರಿನ ಕಲಾಮಂದಿರದ ಕಿರು ರಂಗಮಂದಿರದಲ್ಲಿ ಜಿಲ್ಲಾಡಳಿತದಿಂದ ಆಯೋಜಿಸಿದ್ದ ಕೃಷ್ಣ ಜನ್ಮಾಷ್ಟಮಿಯನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ ಉದ್ಘಾಟಿಸಿದರು.

ಮೈಸೂರು, ಆ.26(ಎಂಟಿವೈ)– ಮೈಸೂರಿನ ಕಲಾಮಂದಿರದ ಕಿರುರಂಗ ಮಂದಿರದಲ್ಲಿ ಜಿಲ್ಲಾಡಳಿತದ ವತಿಯಿಂದ ಕೃಷ್ಣ ಜನ್ಮಾಷ್ಟಮಿಯನ್ನು ಆಚರಿಸಲಾಯಿತು.

ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಂಯುಕ್ತಾಶ್ರಯದಲ್ಲಿ ಆಯೋಜಿಸಿದ್ದ ಕೃಷ್ಣಜಯಂತಿ ಕಾರ್ಯಕ್ರಮವನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಮೈಸೂರು ವಿಭಾಗೀಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನ ಸ್ವಾಮಿ, ಕೃಷ್ಣನ ಮೂರ್ತಿಗೆ ಪುಷ್ಪಾರ್ಚನೆ ಮಾಡುವ ಮೂಲಕ ಉದ್ಘಾಟಿಸಿ ಮಾತನಾಡಿ, ಸಂತಶ್ರೇಷ್ಠ ಶ್ರೀ ಭಕ್ತ ಕನಕದಾಸರು ಶತಮಾನಗಳ ಹಿಂದೆಯೇ 'ತಂದೆ ತಾಯಿಯನ್ನು ಬಿಟ್ಟೇನು, ರಾಜ್ಯವನ್ನು ಬಿಟ್ಟೇನು ಏನನ್ನಾದರೂ ಬಿಟ್ಟೇನು. ಆದರೆ ತೊರೆದು ಜೀವಿಸಬಹುದೇ ಹರಿ ನಿನ್ನ ಚರಣಗಳ' ಎಂದು ಶ್ರೀ ಕೃಷ್ಣನ ಹಾಡಿದ್ದ ಅರ್ಥ ಗರ್ಭಿತವೂ ಆಗಿದೆ. ಶ್ರೀ ಕೃಷ್ಣ ಎಲ್ಲಾ ಗುಣ, ಭಾಂದವ್ಯಗಳನ್ನು ಹೊಂದಿದ್ದ ಮಹಾನ್ ಮಹೀಮ. ಅಸಂಖ್ಯಾತ ಬಾಲ ಲೀಲೆಗಳ ಪ್ರತಿನಿದಿಯೂ ಹಾಗೂ ಅಮರ ಪ್ರೇಮದ ಸಂಕೇತವಾಗಿದ್ದರು. ಅಲ್ಲದೇ ಅಪ್ರತಿಮ ತಂತ್ರಜ್ಞಾನಿ, ಇಡೀ ಜಗತ್ತನ್ನು ತನ್ನ ಶಕ್ತಿ–ಯುಕ್ತಿಗಳಿಂದ ಇಟ್ಟುಕೊಳ್ಳುವಂತಹ ಮಹನ್ ವ್ಯಕ್ತಿ ಶ್ರೀಕೃಷ್ಣ ಎಂದರು.

ಹಿರಿಯ ಸಾಹಿತಿ ಡಾ.ಎನ್.ಕೆ. ರಾಮಶೇಷನ್ ಮಾತನಾಡಿ, ಭಗವಾನ್ ವಿಷ್ಣುವಿನ ಒಂಬತ್ತನೇ ಅವತಾರವಾದ ಭಗವಾನ್ ಕೃಷ್ಣನ ಜನ್ಮವನ್ನು ಈ ಜಯಂತಿಯು ಸೂಚಿಸುತ್ತದೆ. ಆವಣಿ ಅಥವಾ ಶ್ರಾವಣ ಮಾಸದಲ್ಲಿ ಕ್ಷೀಣಿಸುತ್ತಿರುವ ಚಂದ್ರನ ಅವಧಿಯ ಕೃಷ್ಣ ಪಕ್ಷದ 8ನೇ ದಿನದಂದು ದಿನದ ಆಳುವ ನಕ್ಷತ್ರ ರೋಹಿಣಿಯಾಗಿದ್ದಾಗ ಭಗವಾನ್ ಕೃಷ್ಣ ಜನಿಸಿದನು. 5000 ವರ್ಷಗಳ ಹಿಂದೆ ದ್ವಾಪರ ಯುಗದಲ್ಲಿ ಅಧರ್ಮವನ್ನು ನಾಶಪಡಿಸಲು ಮತ್ತು ಜಗತ್ತಿನಲ್ಲಿ ಸದಾಚಾರವನ್ನು ನೀಡಲು ಜನಿಸಿದಂತಹ ವ್ಯಕ್ತಿಯೇ ಶ್ರೀ ಕೃಷ್ಣ. ಅಲ್ಲಿಯವರೆಗೆ ನರಳುತ್ತಿದ್ದ ಮನುಕುಲಕ್ಕೆ ಶ್ರೀಕೃಷ್ಣನ ಜನನ ಆಶಾಕಿರಣ ಮೂಡಿಸಿತು. ಶ್ರೀ ಕೃಷ್ಣ ಎಲ್ಲವನ್ನು ಬಲ್ಲವನು ಎಂದರು.

ಕಾರ್ಯಕ್ರಮದಲಿ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಉಪನಿರ್ದೇಶಕ ಡಿ.ಅಶೋಕ್ ಕುಮಾರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ. ಸುದರ್ಶನ್, ಕನ್ನಡಪರ ಹೋರಾಗಾರ ಮೂಗೂರು ನಂಜುಂಡಸ್ವಾಮಿ ಸೇರಿದಂತೆ ಇನ್ನಿತರರು ಪಾಲ್ಗೊಂಡಿರಿದ್ದರು.

ಚಾರು ಆರ್ಟ್ ಗ್ಯಾಲರಿಯಲ್ಲಿ ಸಮಕಾಲೀನ ಚಿತ್ರಕಲಾ ಪ್ರದರ್ಶನ

ಮೈಸೂರು, ಆ. 26– ಮೈಸೂರಿನ ಚಾರು ಆರ್ಟ್ ಗ್ಯಾಲರಿಯಲ್ಲಿ 'ಸಮಕಾಲೀನ ಚಿತ್ರಕಲಾ ಪ್ರದರ್ಶನ'ದ ಉದ್ಘಾಟನೆ ನೆರವೇರಿತು.

ಪ್ರದರ್ಶನವನ್ನು ಉದ್ಘಾಟಿಸಿದ ಹಿರಿಯ ಕಲಾವಿಮರ್ಶಕ ಬೆಂಗಳೂರಿನ ಕೆ. ವಿ. ಸುಬ್ರಹ್ಮಣ್ಯಂ ಮಾತನಾಡಿ, ಅರಮನೆ, ಜಗನ್ಮೋಹನ ಅರಮನೆ ಮೊದಲ್ಗೊಂಡು ಇಡೀ ಮೈಸೂರು ನಗರವು ನಾನಾ ಕಲಾಪ್ರದರ್ಶನದ ರೂಪಕವಾಗಿದೆ. ಇಂತಹ ಸಾಂಸ್ಕೃತಿಕ ಕೇಂದ್ರದ ನೂತನ ಕೇಂದ್ರದಲ್ಲಿ ಚಾರು ಆರ್ಟ್ ಗ್ಯಾಲರಿಯು ಈ ಕಲಾಪ್ರದರ್ಶನವನ್ನು ಏರ್ಪಡಿಸಿರುವುದು ಪೂರಕವಾಗಿ ಕಾಣುತ್ತಿದೆ.

ಇಂದು ನಾವು ಛಾಯಾಗ್ರಹಣ, ಶಿಲ್ಪಕಲೆ ಇತ್ಯಾದಿ ಎಲ್ಲ ಬಗೆಯ ಕಲೆಗಳನ್ನು ಪ್ರೋತ್ಸಾಹಿಸಬೇಕಿದೆ. ಕಲಾವಿದರನ್ನು ಪ್ರೋತ್ಸಾಹಿಸುವುದರ ಜೊತೆಗೆ ಗ್ಯಾಲರಿಯ ವ್ಯವಸ್ಥಾಪಕರು ಕಲೆಯ ಹಿಂದಿನ, ಇಂದಿನ ಮತ್ತು ಮುಂದಿನ ಆಲೋಚನೆಗಳನ್ನು, ಮಾದರಿಗಳನ್ನು ಮತ್ತು ಸಾಧ್ಯತೆಗಳನ್ನು ಅರಿಯಬೇಕು. ಕಲೆಗಳ ಬಗ್ಗೆ ಉಪನ್ಯಾಸಗಳನ್ನು, ಕಮ್ಮಟಗಳನ್ನು ಆಗಾಗ್ಗೆ ಆಯೋಜಿಸಬೇಕು ಎಂದು ಸಲಹೆಗಳನ್ನಿತ್ತರು.

ಇಸ್ರೋ ಹಿರಿಯ ವಿಜ್ಞಾನಿಗಳಾದ ಎಂ. ವಿ. ರೂಪ ಮಾತನಾಡಿ, ವಿಜ್ಞಾನಕ್ಕೂ ಕಲೆಗೂ ಪೂರಕವಾದ ಸಂಬಂಧವಿರುವುದನ್ನು ಗಮನಿಸಬೇಕು. ಉದಾಹರಣೆಗೆ ಛಾಯಾಗ್ರಹಣವು ಸಹ ಕಲಾತ್ಮಕವಾದುದು. ಅದರ ವಿಶಿಷ್ಟ ಉಪಯೋಗವು ವೈಜ್ಞಾನಿಕ ಅನ್ವೇಷಣೆಗಳಲ್ಲಿ ಕಂಡುಬರುತ್ತದೆ. ವಿಶಿಷ್ಟ ಜ್ಞಾನವಾದ ವಿಜ್ಞಾನದ ಬಳಕೆಯನ್ನು ಕಲೆಯಲ್ಲಿ ಅಳವಡಿಸಿಕೊಳ್ಳುವ ಸಾಧ್ಯತೆಗಳತ್ತ ಗಮನ ಹರಿಸಬೇಕು ಎಂಬ ಹಿತನುಡಿಗಳನ್ನು ಆಡಿದರು.

ನಿರ್ದೇಶಕರಾದ ಡಿ. ಶೀಲಾ ಕುಮಾರಿ ಗ್ಯಾಲರಿಯ ಧ್ಯೇಯೋದ್ದೇಶಗಳನ್ನು ವಿವರಿಸುತ್ತಾ, ಭಾರತೀಯ ಕಲೆಗಳನ್ನು ಪ್ರದರ್ಶನ ಮಾಡುವ, ಕಲಾವಿದರಿಗೆ ಪ್ರೋತ್ಸಾಹ ನೀಡುವ ಸದುದ್ದೇಶದಿಂದ



ರೂಪಿತವಾಗಿರುವ ಈ ಗ್ಯಾಲರಿಯು ಇಂದು ಸಮಕಾಲೀನ ಚಿತ್ರಕಲಾ ಪ್ರದರ್ಶನವನ್ನು ಏರ್ಪಡಿಸಿದೆ. ಇದು ಗ್ಯಾಲರಿಯ 5ನೇ ಪ್ರದರ್ಶನವಾಗಿದ್ದು, 5 ಸೆಪ್ಟೆಂಬರ್‌ವರೆಗೆ ನಡೆಯಲಿದೆ. ಇಲ್ಲಿ ನಿಗದಿತವಾಗಿ ಕಲಾಪ್ರದರ್ಶನ ಮತ್ತು ಮಾರಾಟಗಳು ನಡೆಯುವುದು. ಸಾರ್ವಜನಿಕರು ಇದರ ಸದುಪಯೋಗ ಪಡೆದುಕೊಂಡು ಕಲಾವಿದರನ್ನು ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು. ಗ್ಯಾಲರಿಯ ಮಾಹಿತಿ ಕೈಪಿಡಿಯನ್ನು, ಗಣ್ಯರು ಬಿಡುಗಡೆ ಮಾಡಿದರು. ಸಹಸ್ಥಾಪಕರಾದ ಎ. ಎನ್, ಭೀಮೇಶ್ ಅವರು ಎಲ್ಲರನ್ನು ಸ್ವಾಗತಿಸಿ, ಇಂದು ಒಟ್ಟು 26 ಕಲಾವಿದರ ಕೃತಿಗಳು ಪ್ರದರ್ಶನವಾಗುತ್ತಿದೆ. 208, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಇತರ ಬ್ಯಾಂಕ್ ಉದ್ಯೋಗಿಗಳ ಕ್ಷೇಮಾಭಿವೃದ್ಧಿ ಬಡಾವಣೆ, ಆರ್. ಟಿ. ನಗರದ ಬಳಿ, ವರ್ತುಲ ರಸ್ತೆ, ಮೈಸೂರು, ಇಲ್ಲಿರುವ ಈ ಗ್ಯಾಲರಿಯು ಪ್ರತಿದಿನ ಬೆಳಿಗ್ಗೆ 11 ರಿಂದ ಸಂಜೆ 6 ರವರೆಗೆ ಸಾರ್ವಜನಿಕರಿಗಾಗಿ ತೆರೆದಿದ್ದು, ಸೋಮವಾರ ರಜಾದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ 96323 23250 ಮೂಲಕ ಸಂಪರ್ಕಿಸಬಹುದು ಎಂದು ತಿಳಿಸಿದರು.

ಪ್ರದರ್ಶನದ ಕ್ಯುರೇಟರ್ ಸೋಮೇಶ್ ಎನ್ ಸ್ವಾಮಿ, ನಿರಂಜನ್ ಮೂರ್ತಿ ಜಿ. ಎ., ಸುಧೀರ್ ಫಡ್ನೀಸ್, ರಾಣಿ ರೇಖಾ, ರವಿ ಕುಲಕರ್ಣಿ, ಮಿಲ್ನಾ ಸಜೀ, ಬಿ. ಎಲ್. ಮಹೇಶ್, ವೆಂಕಟೇಶ್ ಹಸ್ಕಿಹಾಲ್, ಕೆ. ಆರ್. ಬಸವರಾಜ್ ಆಚಾರ್, ಹರಿಪ್ರಸಾದ್, ಕೆ. ರಾಘವೇಂದ್ರ ಮೊದಲಾದ ಕಲಾವಿದರು ತಮ್ಮ ಕಲಾಕೃತಿಗಳನ್ನು ಪ್ರದರ್ಶಿಸಿ, ಭಾಗವಹಿಸಿದ್ದರು.

ಕರ್ನಾಟಕ ಸಂಭ್ರಮ 50: ಜ್ಯೋತಿ ರಥ ಯಾತ್ರೆ

ಮೈಸೂರು,ಆ.26– ಕರ್ನಾಟಕ ಸಂಭ್ರಮ 50ರ ಅಂಗವಾಗಿ ಜ್ಯೋತಿ ರಥ ಯಾತ್ರೆಯು ರಾಜ್ಯದಾದ್ಯಂತ ಸಂಚರಿಸಲಿದ್ದು ಚಾಮರಾಜನಗರ ಜಿಲ್ಲೆಯಿಂದ ಗುಂಡ್ಲುಪೇಟೆ ಮಾರ್ಗವಾಗಿ ಆಗಸ್ಟ್ 30 ರಂದು ಬೆಳಿಗ್ಗೆ 9 ಗಂಟೆಗೆ ಮೈಸೂರು ಜಿಲ್ಲೆಗೆ ಪ್ರವೇಶಿಸಲಿದೆ. ಆಗಸ್ಟ್ 31 ರಂದು ಹೆಚ್.ಡಿ.ಕೋಟೆಯಿಂದ ಸರಗೂರಿಗೆ, ಸೆಪ್ಟೆಂಬರ್ 1 ರಂದು ಸರಗೂರಿನಿಂದ ನಂಜನಗೂಡಿಗೆ, ಸೆಪ್ಟೆಂಬರ್ 2 ರಂದು ನಂಜನಗೂಡಿನಿಂದ ಟಿ.ನರಸೀಪುರಕ್ಕೆ, ಸೆಪ್ಟೆಂಬರ್ 3 ರಂದು ಟಿ.ನರಸೀಪುರದಿಂದ ಮೈಸೂರಿಗೆ, ಸೆಪ್ಟೆಂಬರ್ 4 ರಂದು ಮೈಸೂರಿನಿಂದ ಕೆ.ಆರ್ ನಗರಕ್ಕೆ ಸೆಪ್ಟೆಂಬರ್ 5 ರಂದು ಕೆಆರ್ ನಗರದಿಂದ ಸಾಲಿಗ್ರಾಮಕ್ಕೆ, ಸೆಪ್ಟೆಂಬರ್ 6 ರಂದು ಸಾಲಿಗ್ರಾಮದಿಂದ ಹುಣಸೂರಿಗೆ ಹಾಗೂ ಸೆಪ್ಟೆಂಬರ್ 7 ರಂದು ಹುಣಸೂರಿನಿಂದ ಪಿರಿಯಾಪಟ್ಟಣಕ್ಕೆ ತೆರಳಿ ನಂತರ ಕೊಡಗು ಜಿಲ್ಲೆಯನ್ನು ಪ್ರವೇಶಿಸಲಿದೆ ಎಂದು ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮೀಕಾಂತರೆಡ್ಡಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಮೈಸೂರು ಜೈಲಲ್ಲಿ ನಾಲ್ಕು ವರ್ಷದಿಂದ ಮೊಬೈಲ್ ಜಾಮರ್ 'ಜಾಮ್'; ಕೈದಿಗಳಿಗಿದು ವರದಾನ

ಮೈಸೂರು, ಆ.26(ಬಿಎಲ್‌ಯು)– ಮೊಬೈಲ್ ಹಾಗೂ ಇಂಟರ್‌ನೆಟ್ ಸಂಪರ್ಕ ದೊರೆಯದಂತೆ ಜಾಮರ್ ಅಳವಡಿಸಿದ್ದರೂ ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ದರ್ಶನ್ ಸೇರಿದಂತೆ ಇತರೆ ಕೈದಿಗಳು ವಿಡಿಯೋ ಕಾಲ್ ಮಾಡಿರುವ ಪ್ರಕರಣ ಕುತೂಹಲ ಮೂಡಿಸಿದೆ. ಆದರೆ ಮೈಸೂರು ಜೈಲಿನಲ್ಲಿ ಜಾಮರೇ ಇಲ್ಲ. ಇದರಿಂದ ಮೈಸೂರು ಜೈಲಿನ ಕೈದಿಗಳು ಪರಪ್ಪನ ಅಗ್ರಹಾರದ ಖೈದಿಗಳಂತೆ ಸ್ವಚ್ಛಂದವಾಗಿ ಮೊಬೈಲ್ ಬಳಸುತ್ತಿದ್ದಾರೆಯೇ ಎಂಬ ಅನುಮಾನಗಳು ಉದ್ಭವಿಸಿವೆ.



ಹೊರ ಜಗತ್ತಿನೊಂದಿಗೆ ಸಂಪರ್ಕ ಸಾಧಿಸದಂತೆ ಮೈಸೂರು ಜೈಲಿನಲ್ಲಿ ಅಳವಡಿಸಿದ್ದ ಮೊಬೈಲ್ ಜಾಮರ್ ನಿಷ್ಕ್ರೀಯಗೊಂಡಿದೆ. ಮೈಸೂರು ಜೈಲಿನಲ್ಲಿ ಈ ಹಿಂದೆ ಜಾಮರ್ ಅಳವಡಿಸಲಾಗಿತ್ತು. 2 ಜಿ ಮತ್ತು 3 ಜಿ ತರಂಗಾತರವನ್ನು ನಿಷ್ಕ್ರೀಯಗೊಳಿಸುವ ಸಾಮರ್ಥ್ಯ ಹೊಂದಿದ್ದ ಜಾಮರ್ ಕಳೆದ ನಾಲ್ಕು ವರ್ಷದ ಹಿಂದೆಯೇ ಕೆಟ್ಟು ಹೋಗಿದೆ.

ಕೆಟ್ಟಿರುವ ಜಾಮರ್ ರಿಪೇರಿ ಮಾಡಿಸುವ ಗೋಜಿಗೆ ಜೈಲು ಅಧಿಕಾರಿಗಳು ಹೋಗಿಲ್ಲ. ಏಕೆಂದರೆ ಈಗ 5 ಜಿ ತರಂಗಾತರವಿರುವ ಕಾರಣ 2 ಜಿ ಮತ್ತು 3 ಜಿ ತರಂಗಾಂತರ ನಿಷ್ಕ್ರೀಯಗೊಳಿಸುವ ಹಳೆ ಜಾಮರ್ ರಿಪೇರಿ ಮಾಡಿಸಿದರೆ ಏನು ಪ್ರಯೋಜನ ಎಂದು ಜೈಲು ಅಧಿಕಾರಿಗಳು ಕೈ ಚೆಲ್ಲಿ ಕುಳಿತಿದ್ದಾರೆ.

ಬೆಂಗಳೂರಿನ ಪರಪ್ಪನ ಅಗ್ರಹಾರ ಜೈಲಿನಲ್ಲಿ ಜಾಮರ್ ಇದ್ದಾಗಿಯೂ ದರ್ಶನ್ ಸೇರಿದಂತೆ ಇತರೆ ಕೈದಿಗಳು ಸಲೀಸಾಗಿ ಮೊಬೈಲ್ ಬಳಸುತ್ತಿದ್ದಾರೆ. ಅಷ್ಟೆ ಅಲ್ಲದೆ ಹೊರಗಿನ ವ್ಯಕ್ತಿಗಳ ಜೊತೆ ವಿಡಿಯೋ ಕಾಲ್ ಕೂಡ ಮಾಡಿ ಮಾತನಾಡುತ್ತಿದ್ದಾರೆ.

ಆದರೆ ಮೈಸೂರು ಜೈಲಿನಲ್ಲಿ ಜಾಮರ್ ಇಲ್ಲ. ಇದರಿಂದ ಇಲ್ಲಿನ ಕೈದಿಗಳು ಮೊಬೈಲ್ ಬಳಸುತ್ತಿಲ್ಲ ಎಂಬುದನ್ನು ಹೇಗೆ ನಂಬಲು ಸಾಧ್ಯ ಎಂಬ ಪ್ರಶ್ನೆಗಳು ಎದುರಾಗಿದೆ.

ಈ ಹಿಂದೆ ಸಿಸಿಬಿ ಪೊಲೀಸರು ಮೈಸೂರು ಜೈಲಿನ ಮೇಲೆ ದಿಢೀರ್ ದಾಳಿ ಮಾಡಿ ಪರಿಶೀಲನೆ ಮಾಡಿದಾಗ ಹಲವು ಮೊಬೈಲ್‌ಗಳು ಸಿಕ್ಕಿದ್ದವು. ಮೈಸೂರು ಜೈಲಿನಲ್ಲಿರುವ ಕೈದಿಗಳು ಮೊಬೈಲ್ ಬಳಸುತ್ತಿರುವುದು ಇದರಿಂದ ಸ್ಪಷ್ಟವಾಗಿದೆ.

ಜಾಮರ್ ಇದ್ದೆ ಬೆಂಗಳೂರಿನ ಪರಪ್ಪನ ಅಗ್ರಹಾರದ ಕೈದಿಗಳು ಮೊಬೈಲ್ ಬಳಸುತ್ತಿದ್ದಾರೆ. ಇನ್ನು ಮೈಸೂರು ಜೈಲಿನಲ್ಲಿ ಜಾಮರ್ ಇಲ್ಲದಿರುವಾಗ ಕೈದಿಗಳು ಮೊಬೈಲ್ ಬಳಸುತ್ತಿಲ್ಲ ಎಂಬುದಕ್ಕೆ ಏನು ಗ್ಯಾರಂಟಿ ಎಂಬ ಪ್ರಶ್ನೆಗಳು ಎದುರಾಗಿದೆ.

ಜೈಲಿನಲ್ಲಿರುವ ಕೈದಿಗಳಿಗೆ ಹೊರ ಪ್ರಪಂಚದ ಸಂಪರ್ಕ ದೊರೆತರೆ ಸೆರೆಮನೆ ಅರಮನೆಯಾಗಿ ಮಾರ್ಪಡುತ್ತದೆ.

ಜಾಮರ್ ಕೆಟ್ಟಿರುವ ಬಗ್ಗೆ ಕಳೆದ ನಾಲ್ಕು ವರ್ಷದ ಹಿಂದೆಯೇ ಮೈಸೂರು ಜೈಲು ಅಧಿಕಾರಿಗಳು ಸರ್ಕಾರದ ಗಮನಕ್ಕೆ ತಂದಿದ್ದಾರೆ. ಜೊತೆಗೆ ಈಗ 5 ಜಿ ಸಾಮರ್ಥ್ಯದ ಜಾಮರ್ ಅವಶ್ಯವಿದ್ದು, ಅಳವಡಿಸಬೇಕೆಂದು ಮನವಿ ಮಾಡಿದ್ದಾರೆ.

ಆದರೆ ಈ ತನಕ ಸರ್ಕಾರ ಜಾಮರ್ ಅಳವಡಿಸಲು ಮುಂದಾಗಿಲ್ಲ. ಬಜೆಟ್‌ನಲ್ಲಿ ಕಾರಾಗೃಹ ಇಲಾಖೆಗೆ ಸರ್ಕಾರ ಕೋಟ್ಯಾಂತರ ರೂಪಾಯಿ ನೀಡುತ್ತದೆ. ಅದರಲ್ಲಿ ಕೆಲವು ಲಕ್ಷದಲ್ಲಿ ಜಾಮರ್ ಅಳವಡಿಸಲು ಮುಂದಾಗದಿರುವುದು ಸರ್ಕಾರದ ಬೇಜವಾಬ್ದಾರಿ ತೋರಿಸುತ್ತದೆ.

ಮೈಸೂರಿನ ಬೆಂಗಳೂರು ರಸ್ತೆಯ ಫೌಂಟೆನ್ ವೃತ್ತದ ಬಳಿ 1973 ರಲ್ಲಿ ಮೈಸೂರು ಕಾರಾಗೃಹವನ್ನು ನಿರ್ಮಾಣ ಮಾಡಲಾಯಿತು. 20 ಎಕರೆಯ ವಿಶಾಲ ಪ್ರದೇಶದ 5 ಎಕರೆಯಲ್ಲಿ ಪುರುಷ ಹಾಗೂ ಮಹಿಳಾ ಕೈದಿಗಳಿಗೆ ಪ್ರತ್ಯೇಕ ಬಂಧೀಖಾನೆ, ಮುಖ್ಯ ಅಧೀಕ್ಷಕರ ಕಚೇರಿ, ಅಧಿಕಾರಿಗಳ ಕಚೇರಿ, ಸಿಬ್ಬಂದಿಗಳ ಕೊಠಡಿ, ತರಬೇತಿ ಕೇಂದ್ರ ನಿರ್ಮಾಣ ಮಾಡಲಾಗಿದೆ.

ಸುತ್ತಲೂ 21 ಅಡಿ ಎತ್ತರದ ಗೋಡೆ ಇರುವ ಕಾರಾಗೃಹಕ್ಕೆ ಈಗ 51 ವರ್ಷವಾಗಿದೆ. ಆ ದಿನದ ಮಟ್ಟಿಗೆ ಅಂದು ನಡೆಯುತ್ತಿದ್ದ ಅಪರಾಧ ಪ್ರಕರಣಗಳ ಸಂಖ್ಯೆಗೆ ಅನುಗುಣವಾಗಿ ಇಲ್ಲಿ ಕಾರಾಗೃಹ ನಿರ್ಮಾಣ ಮಾಡಲಾಗಿತ್ತು ಆದರೆ ಈಗ ಅಪರಾಧಿಗಳ ಸಂಖ್ಯೆ ಹೆಚ್ಚಾಗಿದೆ.

ಮೈಸೂರಿನ ಹೊರ ವಲಯದಲ್ಲಿ ವಿಶಾಲವಾದ ಹೊಸ ಜೈಲು ನಿರ್ಮಾಣ ಮಾಡುವ ಬಗ್ಗೆ ಈ ಹಿಂದೆ ಪ್ರಸ್ತಾವನೆ ಇತ್ತು. ಆದರೆ ಈ ಬಗ್ಗೆ ಜೈಲು ಅಧಿಕಾರಿಗಳನ್ನು ಕೇಳಿದರೆ ಅಂತಹ ಯಾವುದೇ ಪ್ರಸ್ತಾವನೆ ಇಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

5 ಜಿ ಮೊಬೈಲ್ ಜಾಮರ್‌ಗೆ ಸರ್ಕಾರಕ್ಕೆ ಪ್ರಸ್ತಾವನೆ

ಜಾಮರ್ ಕೆಟ್ಟಿರುವ ಬಗ್ಗೆ ಕಳೆದ ನಾಲ್ಕು ವರ್ಷದ ಹಿಂದೆಯೇ ಸರ್ಕಾರದ ಗಮನಕ್ಕೆ ತರಲಾಗಿದೆ. ಜೊತೆಗೆ ಈಗಿನ 5 ಜಿ ಸಾಮರ್ಥ್ಯದ ಜಾಮರ್ ಅಳವಡಿಸುವಂತೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ. ಆದರೆ ಜಾಮರ್ ಅಳವಡಿಸುವ ಸಂಬಂದ ಸರ್ಕಾರದಿಂದ ಈ ತನಕ ಯಾವುದೇ ಮಾಹಿತಿ ಬಂದಿಲ್ಲ. ಜಾಮರ್ ಇಲ್ಲದಿದ್ದರೂ ಮೈಸೂರು ಜೈಲಿನ ಒಳಗೆ ಮೊಬೈಲ್ ಕೊಂಡೊಯ್ಯದಂತೆ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗಿದೆ.

ಮೈಸೂರು ಜೈಲಿನಲ್ಲಿ 560 ಕೈದಿಗಳ ಸಾಮರ್ಥ್ಯವಿದೆ. ಆದರೆ ಪ್ರಸ್ತುತ 810 ಕೈದಿಗಳಿದ್ದಾರೆ. ಒತ್ತಡ ಹೆಚ್ಚಾದ ಸಂದರ್ಭದಲ್ಲಿ 50 ಕೈದಿಗಳನ್ನು ಬೇರೆ ಜೈಲಿಗೆ ಸ್ಥಳಾಂತರ ಮಾಡಲಾಗುವುದು. ಹೊಸ ಜೈಲು ಕಟ್ಟಡ ನಿರ್ಮಾಣದ ಪ್ರಸ್ತಾವನೆ ಸದ್ಯಕ್ಕಿಲ್ಲ.

-ರಮೇಶ್, ಮುಖ್ಯ ಜೈಲು ಅಧೀಕ್ಷಕ, ಮೈಸೂರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ ಚಿತ್ರಮಂದಿರ	(ದೂ: 2521923)
ಮಿ. ಬಚ್ಚನ್ (ತೆ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಭೀಮಾ (ಕ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಕೃಷ್ಣಂ ಪ್ರಣಯ ಸಖಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಭೀಮಾ (ಕ)	4 ಪ್ರದರ್ಶನಗಳು
ರಾಜಕಮಲ್	
ತಂಗಾಲಾನ್ (ತ)	4 ಪ್ರದರ್ಶನಗಳು
ಸಂಗಂ	
ಭೀಮಾ (ಕ)	4 ಪ್ರದರ್ಶನಗಳು
ಲಿಡೋ	
ಗೌರಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಸ್ತ್ರೀ–2 (ಹಿ)	4 ಪ್ರದರ್ಶನಗಳು
ಪ್ರಭಾ	
ತಾಜ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಹೆರಾಲ್ಡ್ ಅಂಡ್ ದಿ ಪರ್ಪಲ್ ಕ್ರಯಾನ್ (ಇಂ): ಬೆ.11ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.1ಕ್ಕೆ, ಸಂ.4.05ಕ್ಕೆ, ಸ್ತ್ರೀ 2 (ಹಿಂ): ರಾ.7.10ಕ್ಕೆ, ರಾ.10.10ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಬೆ.10.45ಕ್ಕೆ, ಹೆರಾಲ್ಡ್ ಅಂಡ್ ದಿ ಪರ್ಪಲ್ ಕ್ರಯಾನ್ (ಇಂ): ಮ.2.10ಕ್ಕೆ, ಪೌಡರ್ (ಕ): ಸಂ.4.30ಕ್ಕೆ, ರಾ.7.15ಕ್ಕೆ, ವಾರ್ಝಾ ಬಯೋಪಿಕ್ ಆಫ್ ಎ ಬಿಲಿಯನ್ ಬಾಯ್ಸ್ (ಮ): ರಾ.10ಕ್ಕೆ.
ಸ್ಕ್ರೀನ್ 3	ಏಲಿಯನ್ ರೊಮುಲಸ್ (ಇಂ): ಬೆ.10.55ಕ್ಕೆ, ಸಂ.4.50ಕ್ಕೆ, ರಾ.7.30ಕ್ಕೆ, ತಂಗಲಾನ್ (ತ): ಮ.1.25ಕ್ಕೆ, ಭೀಮಾ (ಕ): ರಾ.10ಕ್ಕೆ.
ಸ್ಕ್ರೀನ್ 4	ಸ್ತ್ರೀ 2 (ಹಿಂ): ಬೆ.10.20ಕ್ಕೆ, ಸಂ.4.10ಕ್ಕೆ, ಭೀಮಾ (ಕ): ಮ.1.15ಕ್ಕೆ, ಕೃಷ್ಣಂ ಪ್ರಣಯ ಸಖಿ (ತ): ರಾ.7.05ಕ್ಕೆ, ರಾ.10.10ಕ್ಕೆ.

ಐನಾಕ್ಸ್ ಮೂವೀಸ್
INOX LIVE THE MOVIE

ದೂ : 2533444 / 2433456

ಸ್ಕ್ರೀನ್ 1	ಬ್ಯಾಡ್ ನ್ಯೂಸ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.
ಸ್ಕ್ರೀನ್ 2	ಕಲ್ಕಿ 2898 ಎಡಿ (ಕ): ಬೆ.11.40ಕ್ಕೆ, ಸಂ.6.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.3.20ಕ್ಕೆ, ರಾ.9.45ಕ್ಕೆ.
ಸ್ಕ್ರೀನ್ 3	ಇಂಡಿಯನ್ 2 (ತ): ಬೆ.9.40ಕ್ಕೆ, ಸಂ.4.05ಕ್ಕೆ, ಟ್ವಿಸ್ಟರ್ಸ್ (ಇಂ): ಮ.1.20ಕ್ಕೆ, ರಾ.7.45ಕ್ಕೆ, ಡಾರ್ಲಿಂಗ್ ವೈ ದಿಸ್ ಕೊಲವರಿ (ತೆ): ರಾ.10.30ಕ್ಕೆ.
ಸ್ಕ್ರೀನ್ 4	ವಿದ್ಯಾರ್ಥಿ ವಿದ್ಯಾರ್ಥಿನಿಯರೇ (ಕ): ಬೆ.11.30ಕ್ಕೆ, ಕಲ್ಕಿ 2898 ಎಡಿ (3ಡಿ)(ತೆ): ಮ.2.50ಕ್ಕೆ, ಹಿರಣ್ಯ (ಕ): ಸಂ.6.30ಕ್ಕೆ, ಕಲ್ಕಿ 2898 ಎಡಿ (ಹಿಂ): ರಾ.9.30ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಭೀಮಾ (ಕ): ಬೆ.10.50ಕ್ಕೆ, ಪೌಡರ್ (ಕ): ಮ.1.45ಕ್ಕೆ, ಸಂ.4.20ಕ್ಕೆ, ಫೂಟೇಜ್ (ಮ): ಸಂ.6.55ಕ್ಕೆ, ನುನಕ್ಕುಝಿ (ಮ): ರಾ.9.25ಕ್ಕೆ.
ಸ್ಕ್ರೀನ್ 2	ಕೃಷ್ಣಂ ಪ್ರಣಯ ಸಖಿ (ಕ): ಮ.12.25ಕ್ಕೆ, ಸಂ.6.25ಕ್ಕೆ, ರಾ.9.30ಕ್ಕೆ, ಭೀಮಾ (ಕ): ಮ.3.50ಕ್ಕೆ.
ಸ್ಕ್ರೀನ್ 3	ಸ್ತ್ರೀ 2 (ಹಿಂ): ಬೆ.10ಕ್ಕೆ, ಮ.12.50ಕ್ಕೆ, ಸಂ.6.50ಕ್ಕೆ, ಕೃಷ್ಣಂ ಪ್ರಣಯ ಸಖಿ (ಕ): ಮ.3.45ಕ್ಕೆ, ಹಂಟ್ (ಮ): ರಾ.9.40ಕ್ಕೆ.
ಸ್ಕ್ರೀನ್ 4	ಕೃಷ್ಣಂ ಪ್ರಣಯ ಸಖಿ (ಕ): ಬೆ.10.20ಕ್ಕೆ, ಭೀಮಾ (ಕ): ಮ.1.25ಕ್ಕೆ, ಸಂ.6.35ಕ್ಕೆ, ಹಂಟ್ (ಮ): ಸಂ.4.20ಕ್ಕೆ, ಸ್ತ್ರೀ 2 (ಹಿಂ): ರಾ.9.30ಕ್ಕೆ.

ಪಿವಿಆರ್ ಸಿನಿಮಾಸ್
PVR CINEMAS


ನೆಕ್ಸಸ್ ಸೆಂಟರ್‌ಸಿಟಿ ಮಾಲ್, 2ನೇ ಮಹಡಿ, ಮೊ.ನಂ: 8951357139

ಕಿಂಗ್‌ಡಮ್ ಆಫ್ ದಿ ಪ್ಲಾನೆಟ್ ಆಫ್ ದಿ ಎಪಿಸ್ (ಇಂ): ಬೆ.10ಕ್ಕೆ, ಮ.1.05ಕ್ಕೆ, ಸಂ.4.10ಕ್ಕೆ, ರಾ.7.20ಕ್ಕೆ, ರಾ.10.30ಕ್ಕೆ, ಶ್ರೀಕಾಂತ್ (ಹಿಂ): ಬೆ.10ಕ್ಕೆ, ಮ.1ಕ್ಕೆ, ಸಂ.4.25ಕ್ಕೆ, ರಾ.7ಕ್ಕೆ, ರಾ.10.15ಕ್ಕೆ, ಸ್ಟಾರ್ (ತ): ಬೆ.11.45ಕ್ಕೆ, ಮ.3.05ಕ್ಕೆ, ಸಂ.6.25ಕ್ಕೆ, ರಾ.9.45ಕ್ಕೆ, ಅರಮನೈ 4 (ತ): ಮ.12.30ಕ್ಕೆ, ಪ್ರತಿನಿಧಿ 2 (ತೆ): ಮ.12.55ಕ್ಕೆ, ರಾ.9.15ಕ್ಕೆ, ರಾಮನ ಅವತಾರ (ಕ): ಮ.3.40ಕ್ಕೆ, ಅಂಜನೀಪುತ್ರ (ಕ): ಸಂ.4ಕ್ಕೆ, ಗ್ರೇ ಗೇಮ್ಸ್ (ಕ): ಸಂ.6.35ಕ್ಕೆ, ಕೃಷ್ಣಮ್ಮ (ತೆ): ರಾ.7.25ಕ್ಕೆ, ಮಾರಿವಿಲ್ಲಿನ್ ಗೋಪುರಂಗಲ್ (ಮ): ರಾ.10ಕ್ಕೆ

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.

ಪರಪ್ಪನ ಅಗ್ರಹಾರದ ಕೈದಿಗಳಿಗೆ ಪಂಚತಾರಾ ವ್ಯವಸ್ಥೆ

ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಆರೋಪ



ಮಂಡ್ಯ, ಆ.26– ಜೈಲಿನ ವ್ಯವಸ್ಥೆ ಹೊಸದಾಗಿ ಆಗಿಲ್ಲ, ಹಿಂದಿನಿಂದಲೂ ನಡೆಯುತ್ತಿದೆ. ಪರಪ್ಪನ ಅಗ್ರಹಾರದಲ್ಲಿರುವ ಕೈದಿಗಳಿಗೆ ಪಂಚತಾರಾ ವ್ಯವಸ್ಥೆ ಇದೆ ಎಂದು ಕೇಂದ್ರ ಸಚಿವ ಎಚ್‌ಡಿ ಕುಮಾರಸ್ವಾಮಿ ಆರೋಪಿಸಿದರು.

ಮಂಡ್ಯದಲ್ಲಿ ಮಾತನಾಡಿದ ಅವರು, ಈ ಹಿಂದೆ ಡಿಜಿ ಮತ್ತು ಡಿಸಿಪಿ ನಡುವೆ ಈ ಸಂಬಂಧ ತನಿಖೆ ನಡೆಯಬೇಕು ಎಂದು ಗಲಾಟೆ ಆಗಿತ್ತು ಈಗ ದರ್ಶನ್ ವಿಚಾರದಲ್ಲಿ ಅದು ಪ್ರಚಾರಕ್ಕೆ ಬಂದಿದೆ ಸರ್ಕಾರ ಆ ಕೈದಿಗಳನ್ನು ಬೇರೆ ಕಡೆಗೆ ವರ್ಗಾಯಿಸಬೇಕು ಎಂದು ತೀರ್ಮಾನ ಮಾಡುತ್ತಿದೆಯಂತೆ ಈ ಸರ್ಕಾರದ ಮೇಲೆ ಜನರಿಗೆ ನಂಬಿಕೆ ಬರಲು ಸಾಧ್ಯ ಇಲ್ಲ. ರಾಜ್ಯದಲ್ಲಿ ಸರ್ಕಾರವೇ ಇಲ್ಲ. ಆಡಳಿತ ಎನ್ನುವ ನಡವಳಿಕೆ ಇಲ್ಲ ಎಂದು ಕಿಡಿಕಾರಿದ್ದಾರೆ.

ಭ್ರಷ್ಟಾಚಾರದ ಬಗ್ಗೆ ಬೀದಿ ಬೀದಿಯಲ್ಲಿ ಮಾತಾಡಿಕೊಳ್ಳುತ್ತಿದ್ದಾರೆ, ಸರ್ಕಾರದಲ್ಲಿ ಮಂತ್ರಿಗಳಿಗೆ ಕೆಲಸವಿಲ್ಲ. ಸಿಎಂಗೆ ಅವರ ಹಗರಣ ಬಗ್ಗೆ ಮಾತಾಡಲು ಸಮಯ ಸಾಕಾಗುತ್ತಿಲ್ಲ. ರಾಜ್ಯದಲ್ಲಿ ಸರ್ಕಾರ ಸತ್ತು ಹೋಗಿದೆ. ದುಡ್ಡು ಇದ್ದರೆ ಏನು ಬೇಕಾದರೂ ಕೊಂಡುಕೊಳ್ಳಬಹುದು. ರೇಣುಕಾಸ್ವಾಮಿ ಕುಟುಂಬಸ್ಥರು ಅವರ ನೋವು ಹೇಳಿಕೊಳ್ಳುತ್ತಾರೆ. ಪರಮೇಶ್ವರ್ ಅವರು ಪ್ರತಿ ದಿನ ಒಂದೊಂದು ಕಥೆ ಹೇಳುತ್ತಾರೆ. ಪಾರದರ್ಶಕವಾದ ಸರ್ಕಾರ ಮಾಡುತ್ತಿದ್ದೇವೆ. ನಮ್ಮದು ಹೈಟೆಕ್ ಸರ್ಕಾರ ಅಂತಾರೆ. ಪರಪ್ಪನ ಅಗ್ರಹಾರದಲ್ಲಿ ಕೈದಿಗಳಿಗೆ ಕೊಡುತ್ತಿರುವ ಸೌಲಭ್ಯವೇ ಹೈಟೆಕ್. ಅವರು ಮಾಡಿರುವ ತಪ್ಪುಗಳನ್ನು ಮುಚ್ಚಿಕೊಳ್ಳಲು ಡೈವರ್ಟ್ ಮಾಡುತ್ತಿದ್ದಾರೆ. ಅಧಿಕಾರಿಗಳಿಂದ ನ್ಯಾಯ ದೊರಕಲ್ಲ. ನ್ಯಾಯಾಲಯದಿಂದ ನ್ಯಾಯ ದೊರಕಬೇಕು. ಇದಕ್ಕೆ ಸರ್ಕಾರವೇ ಹೊಣೆ ಆಗಬೇಕು ಎಂದು ಹೇಳಿದರು.

ಇಂದು ಶಾಸಕ ಕೆ.ಹರೀಶ್‌ಗೌಡ ಪಾದಯಾತ್ರೆ



ಮೈಸೂರು, ಆ.26(ಪಿಎಂ)– ಮೈಸೂರು ಮಹಾನಗರ ಪಾಲಿಕೆ ವಾರ್ಡ್ 2ರ ಮಂಚೇಗೌಡನಕೊಪ್ಪಲು ವ್ಯಾಪ್ತಿಯಲ್ಲಿ ಸಾರ್ವಜನಿಕರಿಂದ ಕುಂದು ಕೊರತೆಗಳ ಅಹವಾಲು ಸ್ವೀಕರಿಸಲು 'ಜನರ ಮನೆ ಬಾಗಿಲಿಗೆ ಶಾಸಕರು' ಶೀರ್ಷಿಕೆಯಡಿ ಶಾಸಕ ಕೆ.ಹರೀಶ್‌ಗೌಡ ಆ.27ರಂದು ಪಾದಯಾತ್ರೆ ಕಾರ್ಯಕ್ರಮ ಹಮ್ಮಿಕೊಂಡಿದ್ದಾರೆ. ಅಂದು ಬೆಳಗ್ಗೆ 7.30ರಿಂದ ಪಾದಯಾತ್ರೆ ಆರಂಭವಾಗಲಿದೆ ಉಮಾಮಹೇಶ್ವರಿ ದೇವಸ್ಥಾನದಿಂದ (ಹೆಬ್ಬಾಳ್ 2ನೇ ಹಂತದ ಹೈಟೆನ್ಷನ್ ಲೈನ್ ಪಕ್ಕ) ಪ್ರಾರಂಭವಾಗುವ ಶಾಸಕರ ಪಾದಯಾತ್ರೆಯು, ದೇವಸ್ಥಾನದ ಬಲಭಾಗದ ರಸ್ತೆ ಸರ್ಕಾರಿ ಪ್ರೌಢಶಾಲೆ ಹಿಂಭಾಗದ ರಸ್ತೆ ಸೇರಿದಂತೆ ಮೊದಲಾದೆಡೆ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ

5ನೇ ಮತ್ತು 10ನೇ ವರ್ಷದ ಸವಿನೆನಪು



ಶೀಮತಿ ಸಣ್ಣಮ್ಮ & ಶ್ರೀ ಬಿ.ಎಂ.ಶಿವಣ್ಣ

(ಅಂಗಡಿ) ಬೆಳಗೊಳ, ಶ್ರೀರಂಗಪಟ್ಟಣ ತಾ॥

ನೀವು ನಮ್ಮನ್ನಗಲಿ ಇಂದಿಗೆ 10 ವರ್ಷವಾದರೂ
ಸದಾ ನಿಮ್ಮನ್ನು ಸ್ಮರಿಸುತ್ತಿರುವ

ದುಃಖತಪ್ತರು: ಮಕ್ಕಳು ಮಲ್ಲೇಶ್, ರಾಜೇಶ್ ಮತ್ತು ಛಾಯ, ಅಳಿಯ, ಸೊಸೆಯಂದಿರು ಮತ್ತು ಮೊಮ್ಮಕ್ಕಳು, ಬೆಳಗೊಳ, ಶ್ರೀರಂಗಪಟ್ಟಣ ತಾ॥

ಭಾವಪೂರ್ಣ ಶ್ರದ್ಧಾಂಜಲಿ



ಶ್ರೀ ಜಿ.ಜೆ. ಜೈಪ್ರಕಾಶ್

ಜನನ: 12.01.1944 ಮರಣ: 26.08.2024

ನಿವೃತ್ತ ಇಂಜಿನಿಯರ್,
ಉಪಾಧ್ಯಕ್ಷರು, ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು.

ಆತ್ಮೀಯರು, ಸಹೃದಯಿಗಳು, ನಿಷ್ಕಲ್ಮಶ ಮನಸ್ಸಿನವರು ಹಾಗೂ ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘದ ಉಪಾಧ್ಯಕ್ಷರಾದ ಶ್ರೀ ಜಿ.ಜೆ. ಜೈಪ್ರಕಾಶ್‌ರವರು ಇಂದು ಹೃದಯಾಘಾತದಿಂದ ದೈವಾಧೀನರಾಗಿರುತ್ತಾರೆ. ಇವರ ಆತ್ಮಕ್ಕೆ ದೇವರು ಶಾಂತಿ ಮತ್ತು ಅವರ ಕುಟುಂಬಕ್ಕೆ ಆ ದುಃಖವನ್ನು ತಡೆದುಕೊಳ್ಳುವ ಶಕ್ತಿ ನೀಡಲಿ ಎಂದು ದೇವರಲ್ಲಿ ಪ್ರಾರ್ಥಿಸುತ್ತೇವೆ.

ದುಃಖತಪ್ತರು: ಟಿ.ಆರ್. ಕೃಷ್ಣೇಗೌಡರು, ಅಧ್ಯಕ್ಷರು ಹಾಗೂ ಆಡಳಿತ ಮಂಡಳಿಯವರು, ಒಕ್ಕಲಿಗರ ಕ್ಷೇಮಾಭಿವೃದ್ಧಿ ಸಂಘ (ರಿ.), ಮೈಸೂರು

ಓಂ ಶಾಂತಿ